ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 18 ಸೋಮವಾರ 2024

ಸಂಪುಟ: 44 | ಸಂಚಿಕೆ: 329 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸಂಸದ ಶ್ರೀನಿವಾಸ ಪ್ರಸಾದ್ ಚುನಾವಣಾ ರಾಜಕೀಯ ಸುವರ್ಣ ಮಹೋತ್ಸವ

ಅಧಿಕೃತವಾಗಿ ರಾಜಕೀಯ ನಿವೃತ್ತಿ ಘೋಷಿಸಿದ ಪ್ರಸಾದ್





ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಚುನಾವಣಾ ರಾಜಕೀಯ ಸುವರ್ಣ ಮಹೋತ್ಸವ ಅಭಿನಂದನಾ ಸಮಾರಂಭವನ್ನು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಉದ್ಘಾಟಿಸಿದರು. ಚಿತ್ರದಲ್ಲಿ ಸಂಸದ ಶ್ರೀನಿವಾಸಪ್ರಸಾದ್, ಅವರ ಪತ್ನಿ ಭಾಗ್ಯಲಕ್ಷ್ಮೀ ಪ್ರಸಾದ್, ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ, ಹಿರಿಯ ಸಾಹಿತಿ ಸಿಪಿಕೆ ಇನ್ನಿತರರಿದ್ದಾರೆ. ಬಲಚಿತ್ರದಲ್ಲಿ ಕಾರ್ಯಕ್ರಮದಲ್ಲಿ ನೆರೆದಿದ್ದ ಸಭಿಕರನ್ನು ಕಾಣಬಹುದು.

• ಪಕ್ಷಾತೀತವಾಗಿ ಅಭಿಮಾನಿಗಳು ಭಾಗಿ • 50 ವರ್ಷಗಳ ರಾಜಕಾರಣ ಬಿಡಿಸಿಟ್ಟ ಮುತ್ಸದ್ದಿ ನಾಯಕ • ಕೆಲವು ವೇಳೆ ಭಾವುಕ ನುಡಿ • ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಸಹಿಸಿಲ್ಲ • ನಾನು ಕಂಡ ಪ್ರಧಾನಮಂತ್ರಿಗಳ ಬಗ್ಗೆ ಪುಸ್ತಕ ಬರೆಯುತ್ತೇನೆ • ರಾಜಕೀಯ ಪ್ರವಾಹದಲ್ಲಿ ಜಗ್ಗದೇ, ಬಗ್ಗದೇ ಬಂಡೆಯಂತೆ ನಿಂತಿದ್ದೇನೆ

ಮೈಸೂರು, ಮಾ.17(ಬಿಎಲ್‌ಯು)– ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಚುನಾವಣಾ ರಾಜಕೀಯ ಸುವರ್ಣ ಮಹೋತ್ಸವ ಅಭಿನಂದನಾ ಸಮಾರಂಭ ಮೈಸೂರಿನಲ್ಲಿ ಇಂದು ಅರ್ಥಪೂರ್ಣ ಹಾಗೂ ಅದ್ದೂರಿಯಿಂದ ನಡೆಯಿತು. ಈ ವೇಳೆ 50 ವರ್ಷಗಳ ರಾಜಕೀಯಕ್ಕೆ ಪೂರ್ಣ ವಿರಾಮ ಹಾಕಿದ ಶ್ರೀನಿವಾಸ ಪ್ರಸಾದ್ ಅಧಿಕೃತವಾಗಿ ರಾಜಕೀಯ ನಿವೃತ್ತಿ ಘೋಷಿಸಿದರು.

ಮೈಸೂರಿನ ಮಾನಸ ಗಂಗೋತ್ರಿಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭದಲ್ಲಿ ಇಂದು ಶ್ರೀನಿವಾಸ ಪ್ರಸಾದ್ ಅವರ ಚುನಾವಣಾ ರಾಜಕೀಯ ಸುವರ್ಣ ಮಹೋತ್ಸವಕ್ಕೆ ಸಾವಿರಾರು ಜನರು ಸಾಕ್ಷಿಯಾಗಿದ್ದರು. ಶ್ರೀನಿವಾಸ ಪ್ರಸಾದ್ ರಾಜಕೀಯ ಹಾದಿಯಲ್ಲಿ ಜೊತೆ ಜೊತೆಯಾಗಿ ಬಂದ ಸಮಾನ ಮನಸ್ಕರು, ಒಡನಾಡಿಗಳು, ಅಭಿಮಾನಿಗಳು, ಕಾಂಗ್ರೆಸ್, ಜೆಡಿಎಸ್ ಹಾಗೂ ಬಿಜೆಪಿ ಮುಖಂಡರು ಸೇರಿದಂತೆ ಇತರರು ಭಾಗವಹಿಸಿದ್ದರು. ಈ ವೇಳೆ ಶ್ರೀನಿವಾಸ ಪ್ರಸಾದ್ ಅವರಿಗೆ ಪುಷ್ಪಗುಚ್ಛ ನೀಡಿ, ಅಭಿನಂದಿಸಿದರು.

ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಮಾಜಿ ಸಚಿವ ಎನ್.ಮಹೇಶ್, ಚಾಮರಾಜನಗರದ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜ್ ಸೇರಿದಂತೆ ಹಲವರು ಸಮಾರಂಭದಲ್ಲಿ ಭಾಗವಹಿಸಿ ಆರಂಭದಿಂದ ಕೊನೆ ತನಕ ಎಲ್ಲರ ಭಾಷಣ ಆಲಿಸಿದರು. ಸಭೆಯ ಕೊನೆಯಲ್ಲಿ ಎಲ್ಲರೂ ಶ್ರೀನಿವಾಸ ಪ್ರಸಾದ್ ಅವರನ್ನು ಭೇಟಿ ಮಾಡಿ ಮುಂದಿನ ದಿನಗಳಲ್ಲಿ ಮತ್ತಷ್ಟು ಆಯುಸ್ಸು ಆರೋಗ್ಯ ದೊರೆಯಲಿ ಎಂದು ಶುಭ ಹಾರೈಸಿದರು.


ಈ ವೇಳೆ ಮಾತನಾಡಿದ ಶ್ರೀನಿವಾಸ ಪ್ರಸಾದ್, ತಮ್ಮ 50 ವರ್ಷಗಳ ಸುದೀರ್ಘ ರಾಜಕೀಯ ಪಯಣದ ಹಲವು ಮಜಲುಗಳನ್ನು ಎಳೆ ಎಳೆಯಾಗಿ ಬಿಡಿಸಿ ಹೇಳಿದರು. ಕೆಲವು ಸಂದರ್ಭಗಳಲ್ಲಂತೂ ಭಾವುಕರಾಗಿ ಮಾತನಾಡಿದರು. ರಾಜಕಾರಣವೆಂದರೆ ಸಾರ್ವಜನಿಕರ ಸೇವೆ ಮತ್ತು ಸಾಮಾಜಿಕ ಬದ್ಧತೆ ಎಂದು ತಿಳಿದು ಇಷ್ಟು ವರ್ಷ ಸಾರ್ಥಕ ರಾಜಕಾರಣ ಮಾಡಿದ್ದೇನೆ. ●6ನೇ ಪುಟಕ್ಕೆ

[ಮತ್ತಷ್ಟು ಸಚಿತ್ರ ವರದಿ ಪುಟ–8]

ಜನಮನ ಗೆದ್ದ ಮೇರು ವ್ಯಕ್ತಿತ್ವದ ರಾಜಕಾರಣಿ ಶ್ರೀನಿವಾಸಪ್ರಸಾದ್

ಮೈಸೂರು, ಮಾ.17– ಸಂಸದ ಶ್ರೀನಿವಾಸ ಪ್ರಸಾದ್ ಜನಮನ ಗೆದ್ದ ಮೇರು ವ್ಯಕ್ತಿತ್ವದ ರಾಜಕಾರಣಿ ಎಂದು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಬಣ್ಣಿಸಿದರು.

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಬಣ್ಣನೆ



ಶ್ರೀನಿವಾಸ ಪ್ರಸಾದ್ ಉಪ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದಾಗ ಶತಾಯಗತಾಯ ಅವರನ್ನು ಸೋಲಿಸಲು ಅಂದಿನ ಮುಖ್ಯಮಂತ್ರಿ ದೇವರಾಜ ಅರಸ್ ಜೊತೆಗೂಡಿ ನಾನು ಮೈಸೂರಿಗೆ ಬಂದಿದ್ದೆ. ಅಂದು ಅಶೋಕಪುರಂಗೆ ಪ್ರಚಾರಕ್ಕೆ ಹೋದಾಗ ನಮ್ಮನ್ನು ಬೆಂಬಲಿಸುವ ಹೆಚ್ಚು ಜನರು ಸಿಗದೆ ಎಲ್ಲರೂ ಶ್ರೀನಿವಾಸ ಪ್ರಸಾದ್ ಪರವಾಗಿದ್ದರು ಎಂದರು.

ಮುಖ್ಯಮಂತ್ರಿಯಾಗಿ ಎರಡು ವರ್ಷವಾಗಿದ್ದ ಕಾರಣ ದೇವರಾಜ ಅರಸ್ ಅವರಿಗೆ ಆ ಚುನಾವಣೆ ಪ್ರತಿಷ್ಠೆಯ ಕಣವಾಗಿತ್ತು. ಈ ಹಿನ್ನೆಲೆ ಶ್ರೀನಿವಾಸಪ್ರಸಾದ್ ●6ನೇ ಪುಟಕ್ಕೆ

ಮಾ.21ರಿಂದ ರಾಜ್ಯದಲ್ಲಿ ಮಳೆ: ಹವಾಮಾನ ಇಲಾಖೆ ಮುನ್ಸೂಚನೆ

ಬೆಂಗಳೂರು, ಮಾ.17– ಮಾ.21ರಿಂದ ರಾಜ್ಯದ ಹಲವು ಭಾಗಗಳಲ್ಲಿ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ಕೊಟ್ಟಿದೆ.

ಎರಡು ದಿನಗಳ ಕಾಲ 12 ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಲಿದೆ. ಬೆಳಗಾವಿ, ಬೀದರ್, ಧಾರವಾಡ, ಕಲಬುರಗಿ, ದಕ್ಷಿಣ ಒಳನಾಡಿನ ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ತುಮಕೂರಿನಲ್ಲಿ ಮಳೆಯಾಗಲಿದೆ.

ಉಳಿದ ಜಿಲ್ಲೆಗಳಲ್ಲಿ ಒಣಹವೆ ಮುಂದುವರೆಯಲಿದೆ. ಅಲ್ಲದೇ ಮಾ.21ರ ಬಳಿಕ ಇನ್ನಷ್ಟು ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ತಿಳಿಸಿದೆ.

ಕರ್ನಾಟಕದಲ್ಲಿ ರೂ. 125 ಕೋಟಿ ಹೂಡಿಕೆಗೆ ಮದರ್ ಡೇರಿ ನಿರ್ಧಾರ

ನವದೆಹಲಿ, ಮಾ.17– ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ತನ್ನ ವ್ಯಾಪಾರದ ನೆಲೆಯ ವಿಸ್ತರಣೆಗೆ ಮುಂದಾಗಿರುವ ಮದರ್ ಡೇರಿಯು, ರೂ. 650 ಕೋಟಿ ಬಂಡವಾಳ ಹೂಡಿಕೆಗೆ ನಿರ್ಧರಿಸಿದೆ.

ಮಹಾರಾಷ್ಟ್ರದ ನಾಗ್ಪುರದಲ್ಲಿ ರೂ. 525 ಕೋಟಿ ವೆಚ್ಚದಡಿ ಹೊಸದಾಗಿ ಹಾಲು ಸಂಸ್ಕರಣಾ ಘಟಕ ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಘಟಕದಲ್ಲಿ ಪ್ರತಿದಿನ 6 ಲಕ್ಷ ಲೀಟರ್ ಹಾಲು ಸಂಸ್ಕರಿಸುವ ಗುರಿ ಹೊಂದಲಾಗಿದೆ. ಅಲ್ಲದೆ, 10 ಲಕ್ಷ ಲೀಟರ್‌ಗೂ ವಿಸ್ತರಿಸುವ ನಿಟ್ಟಿನಲ್ಲಿ ಘಟಕ ನಿರ್ಮಿಸಲಾಗುತ್ತದೆ ಎಂದು ಮದರ್ ಡೇರಿಯ ಹಣ್ಣುಗಳು ಮತ್ತು ತರಕಾರಿಗಳ ●6ನೇ ಪುಟಕ್ಕೆ

ಸುಮಲತಾಗೆ ಬಿಜೆಪಿ ಹೈಕಮಾಂಡ್ ಬುಲಾವ್

ಬೆಂಗಳೂರು, ಮಾ.17– ಮಂಡ್ಯ ಲೋಕಸಭಾ ಕ್ಷೇತ್ರವನ್ನು ಮೈತ್ರಿ ಪಕ್ಷ ಜೆಡಿಎಸ್‌ಗೆ ಬಿಟ್ಟುಕೊಡಲು ಬಿಜೆಪಿ ಹೈಕಮಾಂಡ್



ಒಪ್ಪಿಗೆ ಸೂಚಿಸಿದೆ ಎನ್ನಲಾಗುತ್ತಿದೆ. ಈ ನಡುವೆ ಬಿಜೆಪಿ ಬೆಂಬಲಿತ ಸಂಸದೆ ಸುಮಲತಾ ಅಂಬರೀಶ್ ಅವರನ್ನು ಬಿಜೆಪಿ ಹೈಕಮಾಂಡ್ ದೆಹಲಿಗೆ ಆಹ್ವಾನಿಸಿದ್ದು, ದೇವನಹಳ್ಳಿಯಲ್ಲಿರುವ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ರಾಜಧಾನಿಗೆ ತೆರಳಿದ್ದಾರೆ.

ಪಕ್ಷೇತರವಾಗಿ ಸ್ಪರ್ಧಿಸಿ ಗೆಲುವು ಸಾಧಿಸಿದ ನಂತರ ಬಿಜೆಪಿಯನ್ನು ಬೆಂಬಲಿಸಿರುವ ಸುಮಲತಾ ಅವರು ಈ ಬಾರಿ ಮಂಡ್ಯದ ಬಿಜೆಪಿ ಟಿಕೆಟ್‌ಗಾಗಿ ಪೈಪೋಟಿ ನಡೆಸುತ್ತಿದ್ದಾರೆ. ತನಗೆ ಟಿಕೆಟ್ ಸಿಗುವ ವಿಶ್ವಾಸ ಇದೆ ಎಂದು ಹಲವು ಬಾರಿ ಹೇಳಿದ್ದಾರೆ. ಆದರೆ, ಮಂಡ್ಯ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡಲು ಬಿಜೆಪಿ ಹೈಕಮಾಂಡ್ ಒಪ್ಪಿಗೆ ಸೂಚಿಸಿದೆ ಎಂದು ಹೇಳಲಾಗುತ್ತಿದೆ. ಇದೇ ಕಾರಣಕ್ಕೆ ಕುಮಾರಸ್ವಾಮಿ ಅವರು ಕ್ಷೇತ್ರದಲ್ಲಿ ಕಾರ್ಯಕರ್ತರ ಸಭೆ ನಡೆಸುತ್ತಿದ್ದಾರೆ.

ಬಿಜೆಪಿ ಹೈಕಮಾಂಡ್ ಕರೆ ಮಾಡಿದ ಹಿನ್ನೆಲೆ ಸುಮಲತಾ ಅಂಬರೀಶ್ ಅವರು ದೆಹಲಿಗೆ ತೆರಳಿದ್ದು, ಅಲ್ಲಿ ಬಿಜೆಪಿ ಚಾಣಕ್ಯ ಖ್ಯಾತಿಯ ಕೇಂದ್ರ ಗೃಹ ಸಚಿವ ಸಚಿವ ಅಮಿತ್ ಶಾ ಹಾಗೂ ಪಕ್ಷದ ಅಧ್ಯಕ್ಷ ಜೆಪಿ ನಡ್ಡಾ ಅವರನ್ನು ಭೇಟಿಯಾಗುವ ಸಾಧ್ಯತೆ ಇದೆ. ಸದ್ಯ, ಈ ಪ್ರಯಾಣವು ಕುತೂಹಲ ಮೂಡಿಸಿದೆ.

ಮಾ.20ರಂದು ಕಾಂಗ್ರೆಸ್ 2ನೇ ಪಟ್ಟಿ ಘೋಷಣೆ

ಬೆಂಗಳೂರು, ಮಾ.17– ಮಾ.20ರಂದು ಕಾಂಗ್ರೆಸ್ ಅಭ್ಯರ್ಥಿಗಳ 2ನೇ ಪಟ್ಟಿ ಪ್ರಕಟ ಮಾಡಲಾಗುವುದು ಎಂದು ಡಿಸಿಎಂ ಡಿಕೆ ಶಿವಕುಮಾರ್ ಹೇಳಿದ್ದಾರೆ. ನಗರದ ಕೆಪಿಸಿಸಿ ಕಚೇರಿಯಲ್ಲಿ ಮಾತನಾಡಿದ ಅವರು, ಮಾರ್ಚ್ 19ರಂದು ಸಭೆ ಇದ್ದು ಅಂದೇ ತೀರ್ಮಾನಿಸುತ್ತೇವೆ. ಆದರೆ, ನಾವು ಮಾ.20ರಂದು ಘೋಷಣೆ ಮಾಡುತ್ತೇವೆ ಎಂದು ಸ್ಪಷ್ಟನೆ ನೀಡಿದ್ದಾರೆ. ಇಂದು ಭಾರತ್ ಜೋಡೋ ಸಮಾರೋಪ ಸಮಾರಂಭ ಕಾರ್ಯಕ್ರಮ ನಡೆಯುತ್ತಿದೆ. ನಾವೆಲ್ಲ ಆ ಕಾರ್ಯಕ್ರಮಕ್ಕೆ ಮುಂಬೈಗೆ ಹೋಗುತ್ತಿದ್ದೇವೆ. ಶಿವಾಜಿ ಪಾರ್ಕ್‌ನಲ್ಲಿ ಕಾರ್ಯಕ್ರಮ ಇದೆ. ಹೀಗಾಗಿ ಮಾ. 20ರಂದು ಘೋಷಣೆ ಮಾಡುತ್ತೇವೆ ಎಂದು ಹೇಳಿದ್ದಾರೆ.



ಗ್ಯಾರಂಟಿ ಅಧ್ಯಕ್ಷರನ್ನು ಪ್ರತಿ ತಾಲೂಕಿನಲ್ಲಿ ಮಾಡಿದ್ದೇವೆ. ಅವರದೆಲ್ಲ ಒಂದು ಸಭೆ ಕರೆಯುತ್ತೇವೆ. ಮಾ.21ರಂದು ಸಭೆ ಕರೆಯಬೇಕು ಎಂದು ತೀರ್ಮಾನ ಮಾಡಿದ್ದೇವೆ. ಸರ್ಕಾರ ಯಾರನ್ನೆಲ್ಲ ಗ್ಯಾರಂಟಿ ಸಮಿತಿಗೆ ನೇಮಕ ಮಾಡಿದೆ ಅವರನ್ನೆಲ್ಲ ನಾವು ಇಲ್ಲಿಗೆ ಕರೆಯುತ್ತೇವೆ. ಅವರಿಗೆಲ್ಲಾ ಚುನಾವಣೆ ಜವಾಬ್ದಾರಿ ಕೊಡುತ್ತೇವೆ. ಈ ಚುನಾವಣೆಯಲ್ಲಿ ನಾಮಿನೇಶನ್ ಮಾಡುವುದು ಅಷ್ಟೇ ಅಲ್ಲಾ, ಪಕ್ಷಕ್ಕೂ ದುಡಿಯಬೇಕು.

ಇತ್ತೀಚೆಗೆ ಕಾಂಗ್ರೆಸ್ ತನ್ನ ಅಭ್ಯರ್ಥಿಗಳ ವೊದಲ ಪಟ್ಟಿ ಪ್ರಕಟಿಸಿತ್ತು. ಕರ್ನಾಟಕದ 7 ಲೋಕಸಭಾ ಕ್ಷೇತ್ರಗಳು ಸೇರಿ ಒಟ್ಟು 39 ಕ್ಷೇತ್ರಗಳಿಗೆ ಕದನ ಕಲಿಗಳನ್ನು ಘೋಷಿಸಿತ್ತು. ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಡಿ.ಕೆ. ಸುರೇಶ್ ಹೆಸರು ಘೋಷಣೆ ಆಗಿದ್ದರೆ, ಶಿವಮೊಗ್ಗದಿಂದ ಗೀತಾ ಶಿವರಾಜ್‌ಕುಮಾರ್ ಎರಡನೇ ಬಾರಿ ಅದೃಷ್ಟ ಪರೀಕ್ಷೆಗೆ ಇಳಿಯುತ್ತಿದ್ದಾರೆ. ಇನ್ನು ಬಿಜೆಪಿ ಬಿಟ್ಟು ಘರ್‌ವಾಪ್ಸಿ ಮಾಡಿದ್ದ ಮುದ್ದಹನುಮೇಗೌಡರಿಗೆ ತುಮಕೂರು ಲೋಕಸಭಾ ಕ್ಷೇತ್ರದ ಟಿಕೆಟ್ ಘೋಷಣೆ ಆಗಿದೆ.

ಮಹಿಳಾ ಐಪಿಎಲ್: ಆರ್‌ಸಿಬಿ ಚೊಚ್ಚಲ ಚಾಂಪಿಯನ್

ದೆಹಲಿ, ಮಾ.17– 16 ಆವೃತ್ತಿ ಕಳೆದರೂ ಒಮ್ಮೆಯೂ ಟ್ರೋಫಿ ಎತ್ತಿ ಹಿಡಿಯದ ಆರ್‌ಸಿಬಿ ಪುರುಷರ ತಂಡಕ್ಕೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮಹಿಳಾ ತಂಡ ಮಾದರಿಯಾಗಿದೆ. ಆ ಮೂಲಕ ಮಹಿಳಾ ಪ್ರೀಮಿಯರ್ ಲೀಗ್ 2ನೇ ಆವೃತ್ತಿಯಲ್ಲೇ ಆರ್‌ಸಿಬಿ ಚಾಂಪಿಯನ್ ಕಿರೀಟ ಮುಡಿಗೇರಿಸಿಕೊಂಡರೆ, ಡೆಲ್ಲಿ ಕ್ಯಾಪಿಟಲ್ಸ್ ಸತತ 2ನೇ ಬಾರಿಯೂ ರನ್ನರ್ ಅಪ್ ಪ್ರಶಸ್ತಿಗೆ ತೃಪ್ತಿಪಟ್ಟುಕೊಂಡಿತು.

ಪುರುಷರ ತಂಡ ಪ್ರೋತ್ಸಾಹಿಸುತ್ತಿದ್ದ ಅಭಿಮಾನಿಗಳು ಮಹಿಳಾ ತಂಡದ ಗೆಲುವನ್ನು ಹೆಮ್ಮೆಯಿಂದ ಕೊಂಡಾಡಿದರು. ಕೊನೆ ರನ್ ಸಿಡಿಸುತ್ತಿದ್ದಂತೆ ಅಭಿಮಾನಿಗಳು, ಮಹಿಳಾಮಣಿಗಳು ಮೈದಾನದಲ್ಲೇ ಕುಣಿದು ಕುಪ್ಪಳಿಸಿದರು. ಆರ್‌ಸಿಬಿ ಪರ ಹರ್ಷೋದ್ಗಾರ ಕೂಗುತ್ತಾ ಗೆಲುವಿನ ಕೇಕೆ ಹಾಕಿದರು. ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಫೈನಲ್ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ 18.3 ಓವರ್‌ಗಳಲ್ಲಿ 113 ರನ್‌ಗೆ ಆಲೌಟಾಯಿತು. 114 ರನ್‌ಗಳ ಗುರಿ ಬೆನ್ನತ್ತಿದ ಆರ್‌ಸಿಬಿ 19.3 ಓವರ್‌ಗಳಲ್ಲೇ 2 ವಿಕೆಟ್ ನಷ್ಟಕ್ಕೆ 115 ರನ್ ಗಳಿಸಿ 8 ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸಿತು.



114 ರನ್‌ಗಳ ಸುಲಭ ಗುರಿ ಬೆನ್ನತ್ತಿದ್ದ ಆರ್‌ಸಿಬಿ ನಿಧಾನಗತಿ ಬ್ಯಾಟಿಂಗ್ ನಡೆಸಿತು. ವಿಕೆಟ್ ತೆಗೆಯದಿದ್ದರೂ ಡೆಲ್ಲಿ ಕ್ಯಾಪಿಟಲ್ಸ್ ತಂಡ ಉತ್ತಮ ಫೀಲ್ಡಿಂಗ್ ಪ್ರದರ್ಶನ ತೋರಿತ್ತು. ಇದರಿಂದ ವಿಜಯಲಕ್ಷ್ಮಿ ಯಾರ ಪಾಲಿಗೆ ಒಲಿಯುತ್ತಾಳೆ ಎಂಬ ಕುತೂಹಲ ಕೊನೆಯವರೆಗೂ ಇತ್ತು ಪ್ರತಿ ಓವರ್‌ನಲ್ಲೂ ಒಂದೊಂದು ಎಸೆತ ಏನಾಗುತ್ತದೆ ಎಂದು ಅಭಿಮಾನಿಗಳು ಕುತೂಹಲದಿಂದಲೇ ವೀಕ್ಷಿಸುತ್ತಾ, ಕ್ಷಣ ಕ್ಷಣಕ್ಕೂ ಆರ್‌ಸಿಬಿ, ಆರ್‌ಸಿಬಿ ಘೋಷಣೆ ಕೂಗುತ್ತಿದ್ದರು. ಆರ್‌ಸಿಬಿ ಪರ ಸ್ಮೃತಿ ಮಂದಾನ 31, ಸೋಫಿ ಡಿವೈನ್ 32 ರನ್ ಗಳಿಸಿದರೆ, ಕೊನೆವರೆಗೂ ಹೋರಾಟ ನಡೆಸಿದ ಆಲ್‌ರೌಂಡರ್ ಎಲ್ಲಿಸ್ ಪೆರ್ರಿ 35 ರನ್, ರಿಚಾ ಘೋಷ್ 17 ರನ್ ಗಳಿಸುವ ಮೂಲಕ ಗೆಲುವಿಗೆ ಕಾರಣರಾದರು.

ಇದಕ್ಕೂ ಮುನ್ನಾ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ ನಾಯಕಿ ಮೆಗ್ ಲ್ಯಾನ್ನಿಂಗ್, ಶಫಾಲಿ ವರ್ಮಾ ಸ್ಫೋಟಕ ಪ್ರದರ್ಶನ ತೋರಿದ್ದರು. ಪವರ್ ಪ್ಲೇನಲ್ಲಿ 6 ಓವರ್‌ಗಳಿಗೆ ●6ನೇ ಪುಟಕ್ಕೆ

ಬಿಜೆಪಿ ಅಭ್ಯರ್ಥಿ ಯದುವೀರ್ ಬಹಿರಂಗ ಪ್ರಚಾರಕ್ಕೆ ಚಾಲನೆ

ಮೈಸೂರು, ಮಾ.17(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಲೋಕಸಭಾ ಚುನಾವಣೆ ಅಖಾಡ ರಂಗೇರುತ್ತಿದ್ದು, ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭಾನುವಾರ ಕ್ಯಾತಮಾರನಹಳ್ಳಿಯ ಶ್ರೀ ಹುಲಿಯಮ್ಮ ದೇವಿಗೆ ಪೂಜೆ ಸಲ್ಲಿಸಿ ಚುನಾವಣಾ ಪ್ರಚಾರ ಆರಂಭಿಸಿದ್ದಾರೆ.

ಕ್ಯಾತಮಾರನಹಳ್ಳಿಯ ಟೆಂಟ್ ಸರ್ಕಲ್‌ನಲ್ಲಿ ರಂಗೋಲಿಯಿಂದ ಬಿಡಿಸಿದ್ದ ಬಿಜೆಪಿ ಚಿಹ್ನೆ(ಕಮಲ)ಗೆ ಹೂ ಹಾಕಿ, ಶ್ರೀ ಹುಲಿಯಮ್ಮ ದೇವಸ್ಥಾನದವರೆಗೆ ಪಾದಯಾತ್ರೆ ಮೂಲಕ ಆಗಮಿಸಿದ ಅವರು, ಶ್ರೀ ಹುಲಿಯಮ್ಮ ದೇವಸ್ಥಾನ ಹಾಗೂ ಬಸವನಗುಡಿ ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸುವ ಮೂಲಕ ಚುನಾವಣಾ ಪ್ರಚಾರ ಆರಂಭಿಸಿದರು. ಬಳಿಕ ವಾಪಸ್ ಟೆಂಟ್ ಸರ್ಕಲ್‌ವರೆಗೆ ಪಾದಯಾತ್ರೆ ನಡೆಸಿ, ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಮೊದಲು ಕೂಡ ಕ್ಯಾತಮಾರನಹಳ್ಳಿಗೆ ಬಂದಿದ್ದೇನೆ. ದತ್ತು ಸ್ವೀಕಾರದ ಸಂದರ್ಭದಲ್ಲಿ ಮೈಸೂರು ರಾಜಮನೆತನದೊಂದಿಗೆ ಕನ್ನಡ





ಕ್ಯಾತಮಾರನಹಳ್ಳಿಯ ಶ್ರೀ ಹುಲಿಯಮ್ಮ ದೇವಿಗೆ ಭಾನುವಾರ ಪೂಜೆ ಸಲ್ಲಿಸಿದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಚುನಾವಣಾ ಬಹಿರಂಗ ಪ್ರಚಾರ ಆರಂಭಿಸಿ, ವೇದಿಕೆ ಕಾರ್ಯಕ್ರಮದಲ್ಲಿ ಜನತೆಯನ್ನು ಉದ್ದೇಶಿಸಿ ಮಾತನಾಡಿದರು. ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಬಿಜೆಪಿ ಮುಖಂಡರಾದ ಬಿ.ಪಿ.ಮಂಜುನಾಥ್, ಹೆಚ್.ಜಿ.ಗಿರಿಧರ್, ಮೈವಿ ರವಿಶಂಕರ್, ಹೇಮಂತ್ ಕುಮಾರ್‌ಗೌಡ ಮತ್ತಿತರರಿದ್ದರು.

ಸಮುದಾಯ ಭಾವನಾತ್ಮಕ ಸಂಬಂಧ ಹೊಂದಿದೆ. ಅದನ್ನು ತಿಳಿಯಬೇಕಾದರೆ ಒಮ್ಮೆ ಕ್ಯಾತಮಾರನಹಳ್ಳಿಗೆ ಹೋಗಬೇಕು ಎನ್ನುತ್ತಿದ್ದರು. ಇಂದು ಇಲ್ಲಿಗೆ ಬಂದಾಗ ತಮ್ಮೊಂದಿಗೆ ಅರಮನೆ ಹೊಂದಿರುವ ಭಾವನಾತ್ಮಕ ಸಂಬಂಧ ಏನೆಂಬುದು ತಿಳಿಯಿತು. ದೊಡ್ಡಮಟ್ಟದಲ್ಲಿ ನನ್ನನ್ನು ಮಗ, ಸಹೋದರನಂತೆ ಸ್ವಾಗತ ಮಾಡಿರುವ ಗ್ರಾಮಸ್ಥರಿಗೆ ಧನ್ಯವಾದ ಎಂದರು.

ಮೈಸೂರು ಸಂಸ್ಥಾನದ ಕೊಡುಗೆ, ನಮ್ಮ ಪೂರ್ವಜರು ಮಾಡಿರುವ ಕೆಲಸದಂತೆಯೇ ಕೇಂದ್ರ ಸರ್ಕಾರದಿಂದ ಮೈಸೂರು ಅಭಿವೃದ್ಧಿಯ ಪ್ರತಿಧ್ವನಿ ಕೇಳಿ ಬರುತ್ತಿದೆ. ಮೈಸೂರು ಮಾತ್ರವಲ್ಲದೆ ದೇಶವನ್ನು ವಿಶ್ವದಲ್ಲಿ ಬ್ರಾಂಡ್ ಮಾಡುವ ನಿಟ್ಟಿನಲ್ಲಿ ಅಭಿವೃದ್ಧಿ ಮಾಡಲಾಗುತ್ತಿದೆ. ಪ್ರತಿಯೊಬ್ಬರಿಗೂ ದೊರೆಯುವ ಉತ್ತಮ ಯೋಜನೆಗಳು ಬರುತ್ತಿವೆ. ಮೈಸೂರು ಸಂಸ್ಥಾನ ಅಂದಿನ ಕಾಲದಲ್ಲೇ ನೀಡಿದ ಯೋಜನೆಗಳು ನೂರು ವರ್ಷ ಸೇವೆ ನೀಡಿವೆ. ಅದರಂತೆ ಭವಿಷ್ಯದಲ್ಲಿ ಶ್ರೇಷ್ಠ ವಿಕಸಿತ ಭಾರತ ನಿರ್ಮಾಣಕ್ಕೆ ಪ್ರಧಾನಿ ●6ನೇ ಪುಟಕ್ಕೆ

ಭಾರತ ಮಾತೆ ತೇರು ಎಳೆಯಲು ಕೈ ಜೋಡಿಸಿ...!

ಚಾಮುಂಡೇಶ್ವರಿ ತಾಯಿ ತೇರು ಎಳೆಯುವ ಹಾಗೂ ತೆಂಗಿನ ಕಾಯಿ ಒಡೆಯುವ ಹಕ್ಕು ನಿಮ್ಮದೆ(ಕ್ಯಾತಮಾರನಹಳ್ಳಿ). ಹಾಗೆಯೇ ದೇಶದ ಭಾರತ ಮಾತೆಯ ತೇರನ್ನು ಎಳೆಯುವ ಸಂದರ್ಭ ಬಂದಿದ್ದು, ನಮ್ಮೊಂದಿಗೆ ಕೈ ಜೋಡಿಸಿ. ಮುಂಬರುವ ದಿನಗಳಲ್ಲಿಯೂ ಕ್ಯಾತಮಾರನಹಳ್ಳಿಗೆ ಬರುತ್ತಿರುತ್ತೇನೆ. ನಿಮ್ಮ ವಿಶ್ವಾಸ ನನ್ನ ಮೇಲಿರಲಿ. ತಾಯಿ ಹುಲಿಯಮ್ಮ, ಮಲೆ ಮಹದೇಶ್ವರ ಎಲ್ಲರಿಗೂ ಒಳ್ಳೆಯದನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. - **ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್,**
ಬಿಜೆಪಿ ಅಭ್ಯರ್ಥಿ, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ

ಅವರ ಗುರುತು ಹಸ್ತ....!

ಬಿಜೆಪಿ ಮುಖಂಡ ಹಾಗೂ ಚುನಾವಣೆ ಉಸ್ತುವಾರಿ ಮೈವಿ ರವಿಶಂಕರ್ ಮಾತಿನ ಬರದಲ್ಲಿ, ಏ.26 ರಂದು ನಡೆಯುವ ಲೋಕಸಭಾ ಚುನಾವಣೆಯಲ್ಲಿ ನಮ್ಮ, ನಿಮ್ಮೆಲ್ಲರ ನೆಚ್ಚಿನ ಅಭ್ಯರ್ಥಿಯಾದ ಯದುವೀರ್ ಅವರ ಗುರುತು ಹಸ್ತ...! ಎನ್ನುವ ಮೂಲಕ ಯದುವೀರ್ ಅವರ ಮೊದಲ ಚುನಾವಣಾ ಪ್ರಚಾರ ಕಾರ್ಯಕ್ರಮದಲ್ಲೇ ಮುಜುಗರಕ್ಕೀಡಾದರು. ಈ ವೇಳೆ ಬಿ.ಪಿ. ಮಂಜುನಾಥ್ ಅವರು ರವಿಶಂಕರ್ ಶರ್ಟ್ ಎಳೆದು ಎಚ್ಚರಿಸಿದಾಗ ಎಚ್ಚೆತ್ತುಕೊಂಡ ಅವರು, ಗುರುತು ಕಮಲ... ಕಮಲದ ಗುರುತಿಗೆ ದಯವಿಟ್ಟು ನಾವೆಲ್ಲರೂ ಮತವನ್ನು ನೀಡಬೇಕು ಎಂದರಲ್ಲದೆ ನನ್ನ ಬಾಯಿಂದ ಯಾತಕ್ಕೆ ತಪ್ಪು ಬಂತೋ... ಕ್ಷಮೆ ಇರಲಿ... ನಮ್ಮ ಗುರುತು ಯಾವಾಗಲೂ ಕಮಲ, ಕಮಲದ ಗುರುತಿಗೆ ನಮ್ಮೆಲ್ಲರ ಮತ ಎಂದರು.

ವರ್ತಮಾನದ ವ್ಯವಹಾರಿಕ ಜಗತ್ತಿನಲ್ಲಿ ಗ್ರಾಹಕರು ಸೂಕ್ಷ್ಮಮತಿಗಳಾಗಿರಬೇಕು

ಇಸ್ರೋ ನಿವೃತ್ತ ಪ್ರಾಧ್ಯಾಪಕ ಪ್ರೊ.ವಿ.ಜಗನ್ನಾಥ್ ಅಭಿಮತ



ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ವಿಶ್ವ ಗ್ರಾಹಕರ ಹಕ್ಕುಗಳ ದಿನದ ಕಾರ್ಯಕ್ರಮವನ್ನು ಇಸ್ರೋದ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ.ವಿ.ಜಗನ್ನಾಥ್ ಉದ್ಘಾಟಿಸಿದರು.

ಮೈಸೂರು,ಮಾ.17–ಮಾತೃಭಾಷೆಯಲ್ಲಿ ವಿಜ್ಞಾನದ ಕಲಿಕೆಯಿಂದ ಮಕ್ಕಳಲ್ಲಿ ಸ್ವಂತಿಕೆ ಹೆಚ್ಚಾಗುತ್ತದೆ. ಬಹಳಷ್ಟು ದೇಶಗಳು ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿವೆ ಎಂದು ಇಸ್ರೋದ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ.ವಿ.ಜಗನ್ನಾಥ್ ತಿಳಿಸಿದರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ವಿಶ್ವ ಗ್ರಾಹಕರ ಹಕ್ಕುಗಳ ದಿನದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳು ಹಾಗೂ ಜಾಗತಿಕ ತಾಪಮಾನದಿಂದಾಗುತ್ತಿರುವ ಹವಾಮಾನ ವೈಪರೀತ್ಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ಗ್ರಾಹಕರು ತಮ್ಮ ಹಕ್ಕುಗಳ ಬಗ್ಗೆ ತಿಳಿದುಕೊಳ್ಳಬೇಕು. ವ್ಯಾಪಾರದಲ್ಲಿ ಗ್ರಾಹಕರಿಗೆ ಆಗಬಹುದಾದ ತೊಂದರೆಗಳು ಹಾಗೂ ಆಗುಹೋಗುಗಳ ಬಗ್ಗೆ ಅರಿವಿದ್ದರೆ ಗ್ರಾಹಕರು ಮೋಸ ಹೋಗುವುದರಿಂದ ತಪ್ಪಿಸಿಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಉತ್ತರಪ್ರದೇಶದ ರೋರ್ಕಿ ಐ.ಐ.ಟಿ ಕ್ಯಾಂಪಸ್‌ನ ಪ್ರಾಧ್ಯಾಪಕ ಡಾ.ಪಾಂಡುರಂಗ ಮೂರ್ತಿ ಮಾತನಾಡಿ, ವಿಶ್ವ–ನಾವಿಕ, ನಮ್ಮ ಗ್ರಾಹಕ, ಗ್ರಾಹಕರ ಸುರಕ್ಷತೆ ಕಾಯ್ದೆಯ ಪ್ರಕಾರ ಗ್ರಾಹಕರಾಗಿ ಯಾವುದೇ ವಸ್ತು ಖರೀದಿಸುವಾಗ ವಸ್ತುವಿನ ಗುಣಮಟ್ಟ, ಸುರಕ್ಷತೆ, ವಸ್ತುವಿನ ಉತ್ಪಾದನೆ ಮತ್ತು ಅದರ ಕೊನೆಯ ಅವಧಿಯನ್ನು ಪರಿಶೀಲಿಸಬೇಕು. ಭಾರತದಲ್ಲೂ ಪ್ರತಿ ವರ್ಷ ಗ್ರಾಹಕರ ಹಕ್ಕುಗಳ ದಿನವನ್ನು ಮಾರ್ಚ್ 15ರಂದು ಆಚರಿಸಲಾಗುತ್ತದೆ. ಈ ದಿನದಂದು ವಿಚಾರ ಸಂಕಿರಣಗಳು, ಚರ್ಚಾ ಗೋಷ್ಠಿಗಳು, ಪ್ರಬಂಧ ಸ್ಪರ್ಧೆಗಳನ್ನು ಆಯೋಜಿಸುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುತ್ತಿದೆ ಎಂದು ವಿದ್ಯಾರ್ಥಿಗಳಿಗೆ ಮಾಹಿತಿ ಕೊಟ್ಟರು.

ಮೈಸೂರು ಗ್ರಾಹಕರ ವೇದಿಕೆ ಅಧ್ಯಕ್ಷರು, ವಿದ್ಯಾವರ್ಧಕ ಸಂಸ್ಥೆಯ ಗೌರವ ಕೋಶಾಧ್ಯಕ್ಷ ಶ್ರೀಶೈಲರಾಮಣ್ಣವರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಗ್ರಾಹಕರ ಹಕ್ಕುಗಳು ಹಾಗೂ ಮೈಸೂರಿನಲ್ಲಿ ವೇದಿಕೆ ವತಿಯಿಂದ ಹಮ್ಮಿಕೊಂಡಿರುವ ಕಾರ್ಯಚಟುವಟಿಕೆಗಳ ಬಗ್ಗೆ ವಿವರಿಸಿದರು. ಪ್ರಾಸ್ತಾವಿಕ ನುಡಿಗಳನ್ನಾಡಿದ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡರು ಗ್ರಾಹಕರ ಹಕ್ಕುಗಳಾದ ಸುರಕ್ಷತೆಯ ಹಕ್ಕು, ಮಾಹಿತಿ ಪಡೆಯುವ ಹಕ್ಕು, ಆಯ್ಕೆಯ ಹಕ್ಕು, ಆಲಿಸುವ ಹಕ್ಕು, ಕುಂದುಕೊರತೆಗಳನ್ನು ನಿವಾರಿಸಿಕೊಳ್ಳುವ ಹಕ್ಕು ಹಾಗೂ ಗ್ರಾಹಕರ ಶಿಕ್ಷಣದ ಹಕ್ಕುಗಳ ಕುರಿತು ವಿಷದವಾಗಿ ತಿಳಿಸಿದರು.

ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯ ತನ್ನ ವೈಭವ ಕಳೆದುಕೊಳ್ಳುತ್ತಿದೆ

● ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ಎಸ್.ಆರ್.ನಿರಂಜನ ವಿಷಾದ ● ವಿವಿ ಘನತೆ ಕುಸಿಯುತ್ತಿರುವುದನ್ನು ಸ್ವತಃ ಉನ್ನತ ಶಿಕ್ಷಣ ಸಚಿವರೇ ಹೇಳಿದ್ದಾರೆ

ಮೈಸೂರು, ಮಾ.17(ಎಂಕೆ)– ಶತಮಾನದ ಇತಿಹಾಸವುಳ್ಳ ಮೈಸೂರು ವಿಶ್ವವಿದ್ಯಾನಿಲಯ ತನ್ನ ವೈಭವವನ್ನು ಕಳೆದುಕೊಂಡಿದೆ ಎಂಬುದು ಕಣ್ಣಿಗೆ ನೇರವಾಗಿ ಕಾಣುತ್ತಿದೆ. ಅಧ್ಯಯನದ ಗುಣಮಟ್ಟ ಕಡಿಮೆಯಾಗಿದ್ದು, ಪ್ರತಿಯೊಬ್ಬರಲ್ಲಿ ತಾನು ಲೀಡರ್ ಆಗಬೇಕೆನ್ನುವ ಮನಸ್ಥಿತಿಯಿಂದಾಗಿ ಕಲಿಕೆಯ ಹಾದಿ ತಪ್ಪಿದೆ ಎಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ಎಸ್.ಆರ್.ನಿರಂಜನ ಬೇಸರ ವ್ಯಕ್ತಪಡಿಸಿದರು.



'ಮೈಸೂರು ವಿವಿ ಸಸ್ಯಶಾಸ್ತ್ರ ವಿಭಾಗ ಹಿರಿಯ ವಿದ್ಯಾರ್ಥಿಗಳ ಸಂಘ'ವನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ಎಸ್.ಆರ್.ನಿರಂಜನ ಉದ್ಘಾಟಿಸಿದರು. ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಗುಲ್ಬರ್ಗ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿಗಳಾದ ಪ್ರೊ.ಮುನಿಯಮ್ಮ, ಪ್ರೊ.ಪುಟ್ಟಯ್ಯ ಮತ್ತಿತರರಿದ್ದರು.

ಮೈಸೂರು ವಿವಿ ಮಾನಸಗಂಗೋತ್ರಿಯಲ್ಲಿರುವ ಸಸ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ 'ಮೈಸೂರು ವಿವಿ ಸಸ್ಯಶಾಸ್ತ್ರ ವಿಭಾಗ ಹಿರಿಯ ವಿದ್ಯಾರ್ಥಿಗಳ ಸಂಘ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದ ಘನತೆಗೆ ಧಕ್ಕೆ ಬಂದಿದೆ ಎಂಬ ಮಾತನ್ನು ಸ್ವತಃ ಉನ್ನತ ಶಿಕ್ಷಣ ಸಚಿವರೇ ಹೇಳಿದ್ದಾರೆ. ಅದಕ್ಕೆ ಕಾರಣವಾಗಿರುವುದು ಮೌಲ್ಯಮಾಪನದಿಂದಲೋ, ಆಡಳಿತ, ಉನ್ನತ ಶಿಕ್ಷಣದಲ್ಲಿನ ಲೆಕ್ಕಾಚಾರ, ಸಂಶೋಧನೆ ಅಥವಾ ಸಿಬ್ಬಂದಿ ಕೊರತೆಯಿಂದಲೋ ಎಂಬುದನ್ನು ಗಂಭೀರವಾಗಿ ಚಿಂತಿಸಬೇಕಿದೆ ಎಂದರು.

ಇತ್ತೀಚೆಗಷ್ಟೇ ಪ್ರಧಾನ ಮಂತ್ರಿಗಳ 'ಪಿಎಂ ಉಷಾ' ಯೋಜನೆಯಡಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಯಾವ ತರಹದ ಅನುದಾನವೂ ಸಿಗಲಿಲ್ಲ. ಬೆಂಗಳೂರು ಹಾಗೂ ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ ತಲಾ 100 ಕೋಟಿ ರೂ. ಅನುದಾನ ಪಡೆದವು. ಎರಡನೇ ಹಂತದಲ್ಲಿಯೂ ಗುಲ್ಬರ್ಗ, ಮಂಗಳೂರು, ಧಾರವಾಡ ಮತ್ತು ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾನಿಲಯ ಅನುದಾನ ಪಡೆದವೇ ಹೊರತು ಅಲ್ಲಿಯೂ ಮೈಸೂರು ವಿವಿಗೆ ಹಿನ್ನಡೆಯಾಯಿತು. ಇದರಿಂದಾಗಿ ನಾವು ನೋಡುತ್ತಿದ್ದಂತಹ ಪ್ರಾಧ್ಯಾಪಕರು, ಸಂಶೋಧನೆ, ಅಧ್ಯಯನದ ಗುಣಮಟ್ಟ ಕಡಿಮೆಯಾದಂತಿದೆ. ಪ್ರಾಧ್ಯಾಪಕರು–ವಿದ್ಯಾರ್ಥಿಗಳ ಸಂಬಂಧ ಮೊದಲಿನಂತಿಲ್ಲ. ಎಲ್ಲರೂ ಲೀಡರ್ ಆಗಬೇಕೆನ್ನುವ ಮನಸ್ಥಿತಿಯಿಂದ ಕಲಿಕೆ ಹಾದಿ ತಪ್ಪುತ್ತಿದ್ದೇವೆ ಎಂದು ವಿಷಾದಿಸಿದರಲ್ಲದೆ, ವಿವಿ ಪ್ರತಿಯೊಂದು ವಿಭಾಗದಲ್ಲಿಯೂ ಹಿರಿಯ ವಿದ್ಯಾರ್ಥಿಗಳ ಸಂಘ ಸ್ಥಾಪಿಸುವ ಮೂಲಕ ಅಧ್ಯಯನಕ್ಕೆ, ಶೈಕ್ಷಣಿಕ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡುವಂತೆ ಸಲಹೆ ನೀಡಿದರು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಾತನಾಡಿ, ಸಸ್ಯಶಾಸ್ತ್ರ ಅತ್ಯುತ್ತಮ ಅಧ್ಯಯನ ವಿಷಯವಾಗಿದ್ದು, ಮನುಷ್ಯನ ಜೀವನದ ಕೊಂಡಿಯಾಗಿದೆ. ಸೂರ್ಯನ ಬೆಳಕಿನಿಂದ ಬೆಳೆಯುವ ಸಸಿಗಳು ಆಕ್ಸಿಜನ್ ನೀಡುವುದು ವಿಸ್ಮಯವಾಗಿದೆ. ಇದರ ಬಗ್ಗೆ ಅಧ್ಯಯನ ಅತ್ಯಂತ ಅವಶ್ಯವಾಗಿದೆ. ಹಾಗೆಯೇ ಇದೇ ವಿಭಾಗದ ಹಿರಿಯ ವಿದ್ಯಾರ್ಥಿಗಳ ಸಂಘಕ್ಕೆ ಒಳಿತಾಗಲಿ ಎಂದು ಅವರು ಶುಭಕೋರಿದರು.

ಗುರಿ ಸರಳವಾಗಿ ಸವಾಲಾಗಿರಲಿ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿ, ಸ್ಪರ್ಧಾತ್ಮಕ ಯುಗದಲ್ಲಿ ಗುರಿ ಸರಳವಾಗಿ ಸವಾಲಾಗಿರುವಂತಿರಬೇಕು. ಚಿಂತನಾ ಶಕ್ತಿ ಪರಿಶುದ್ಧವಾಗಿದ್ದರೆ ಸಾಧನೆ ಸಾಕಾರಗೊಂಡು ಜೀವನ ಸುಖಮಯವಾಗುತ್ತದೆ. ಪ್ರತಿಯೊಂದು ಸವಾಲುಗಳನ್ನು ಸರಳವಾಗಿ ಸ್ವೀಕರಿಸಿ, ಜಾಣ್ಮೆಯಿಂದ ನಿಭಾಯಿಸಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರಲ್ಲದೆ, ಪ್ರತಿಯೊಂದು ವಿಭಾಗಗಳಲ್ಲಿ ಹಿರಿಯ ವಿದ್ಯಾರ್ಥಿಗಳ ಸಂಘ ಸ್ಥಾಪನೆಗೆ ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದರು.

ಗುಲ್ಬರ್ಗ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿಗಳಾದ ಪ್ರೊ.ಎಂ.ಮುನಿಯಮ್ಮ, ಪ್ರೊ.ಈ.ಟಿ.ಪುಟ್ಟಯ್ಯ, ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಕೆ.ಎನ್.ಅಮೃತೇಶ್, ಹಿರಿಯ ಪ್ರಾಧ್ಯಾಪಕರಾದ ಪ್ರೊ.ಜಿ.ಆರ್.ಜನಾರ್ಧನ, ಪ್ರೊ.ಜಿ.ಆರ್. ಶಿವಮೂರ್ತಿ, ಬಟಾನಿಕಲ್ ಸೊಸೈಟಿ ಕಾರ್ಯದರ್ಶಿ ಪ್ರೊ.ರಾಜ್‌ಕುಮಾರ್ ಹೆಚ್.ಗಾರಂಪಳ್ಳಿ, ಮೈಸೂರು ವಿವಿ ಐಕ್ಯುಎಸಿ(ಆಡಳಿತ) ಸಂಯೋಜಕ ಡಾ.ಜೆ.ಲೋಹಿತ್, ಡಾ.ನಿಂಗರಾಜು ಮತ್ತಿತರರಿದ್ದರು.





ಕಾಂಗ್ರೆಸ್ ಯುವ ಮುಖಂಡರೂ ಆದ ತ್ಯಾಗು ಏಜೆನ್ಸಿಸ್ ಮಾಲೀಕ ಪೈ. ತ್ಯಾಗರಾಜು ಅವರ ಹುಟ್ಟುಹಬ್ಬವನ್ನು ಅಭಿಮಾನಿಗಳು ಸಂಭ್ರಮದಿಂದ ಆಚರಿಸಿದರು. ಈ ವೇಳೆ ಮಂಜುನಾಥ್, ರವಿಕುಮಾರ್, ಸೋಮಶೇಖರ್, ಪ್ರೇಮ್‌ಕುಮಾರ್, ತಿಲಕ್, ಚಂದು, ಹರ್ಷ, ಶರತ್, ಭೈರಪ್ಪ, ಗಗನ್, ನಾಗರಾಜು, ಸುನೀಲ್, ಅಜಿತ್ ಇನ್ನಿತರರಿದ್ದರು.

ಸುಳ್ಳುಗಳೇ ಮೋದಿ ಸರ್ಕಾರದ ಗ್ಯಾರಂಟಿ

ಆಮ್ ಆದ್ಮಿ ಪಕ್ಷದ ರಾಜ್ಯ ಕಾರ್ಯದರ್ಶಿ ಸೋಸಲೆ ಸಿದ್ದರಾಜು

ಮೈಸೂರು,ಮಾ.17(ಜಿಎ)–ಸುಳ್ಳುಗಳೇ ಮೋದಿ ಸರ್ಕಾರದ ಗ್ಯಾರಂಟಿಯಾಗಿದ್ದು, ಲೋಕಸಭಾ ಚುನಾವಣೆ ಪ್ರಚಾರಕ್ಕೆ ಆಗಮಿಸುವ ಅವರನ್ನು ರಾಜ್ಯದ ಪ್ರಜ್ಞಾವಂತ ಮತದಾರರು ಪ್ರಶ್ನಿಸಬೇಕು ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಕಾರ್ಯದರ್ಶಿ ಸೋಸಲೆ ಸಿದ್ದರಾಜು ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ಮೋದಿಯವರು 2014 ರಿಂದಲೂ ಸುಳ್ಳಿನ ಸರಮಾಲೆಯನ್ನೇ ಹೆಣೆದು ಭಾರತೀಯರನ್ನು ವಂಚಿಸುತ್ತಿದ್ದಾರೆ. ಪ್ರತಿ ಕುಟುಂಬಕ್ಕೂ 15 ಲಕ್ಷ, ವರ್ಷಕ್ಕೆ 2 ಕೋಟಿ ಉದ್ಯೋಗ ಎಂದು ನೀಡಿದ ಭರವಸೆ ಇಂದಿಗೂ ಈಡೇರಿಲ್ಲ. ಚುನಾವಣಾ ಬಾಂಡ್ ಹೆಸರಿನಲ್ಲಿ ಭ್ರಷ್ಟಾಚಾರ ಮಾಡಲಾಗಿದೆ. ಇಂಥವರನ್ನು ಮತ್ತೆ ಆಯ್ಕೆ ಮಾಡುವುದು ಸೂಕ್ತವಲ್ಲ. ರಾಜ್ಯಕ್ಕೆ ಆಗಮಿಸುವ ಮೋದಿಯವರನ್ನು ನಾವು ಧಿಕ್ಕರಿಸುತ್ತೇವೆ ಎಂದರು.

ಇಂಡಿಯಾ ಮೈತ್ರಿಕೂಟದೊಂದಿಗೆ ನಾವು ಪಾಲುದಾರರಾಗಿದ್ದು, ರಾಜ್ಯದಲ್ಲಿ ಕೆಲ ಲೋಕಸಭಾ ಕ್ಷೇತ್ರಕ್ಕೆ ಆಕಾಂಕ್ಷೆ ವ್ಯಕ್ತಪಡಿಸಿದ್ದೇವೆ. ತೀರ್ಮಾನ ವರಿಷ್ಠರಿಗೆ ಬಿಟ್ಟಿದ್ದು, ಬಿಜೆಪಿ ವಿರುದ್ಧ ಹೋರಾಡುವುದೇ ನಮ್ಮ ಗುರಿ ಎಂದರು. ಸುದ್ದಿಗೋಷ್ಠಿಯಲ್ಲಿ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಎಲ್.ರಂಗಯ್ಯ, ಪ್ರಧಾನ ಕಾರ್ಯದರ್ಶಿ ಐಶ್ವರ್ಯ, ಸಂಘಟನಾ ಕಾರ್ಯದರ್ಶಿ ವಿಶ್ವನಾಥ್ ಕುಲಕರ್ಣಿ, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಉಷಾ ಸಂಪತ್‌ಕುಮಾರ್, ಕಾರ್ಮಿಕ ಘಟಕದ ಉಪಾಧ್ಯಕ್ಷ ಮೈಸೂರು ಲೋಕೇಶ್ ಇದ್ದರು.



ಜಯಪುರ ಪೊಲೀಸ್ ಠಾಣೆಯಲ್ಲಿ ಡಿವೈಎಸ್ಪಿ ಕರೀಂ ರಾವತರ್, ಪಿಎಸ್‌ಐ ಸುರೇಶ್ ಬೋಪಣ್ಣ ನೇತೃತ್ವದಲ್ಲಿ ಪ.ಜಾತಿ–ಪಂಗಡದ ಹಿತರಕ್ಷಣಾ ಸಮಿತಿ ಸಭೆ ನಡೆಯಿತು. ಈ ವೇಳೆ ಜಯಪುರ ಠಾಣಾ ವ್ಯಾಪ್ತಿಯ ಗ್ರಾಮಗಳ ಮುಖಂಡರು ಪಾಲ್ಗೊಂಡಿದ್ದರು.

ಮಾ.29ರಿಂದ ಬೆಳಕು, ಶಬ್ದ ತಂತ್ರಗಾರಿಕೆ ಕಾರ್ಯಾಗಾರ

ಮೈಸೂರು,ಮಾ.17(ಜಿಎ)–ಮೈಸೂರಿನ ಕುವೆಂಪುನಗರದ ನುಡಿರಂಗ ಫೌಂಡೇಶನ್ ಹಾಗೂ ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆಯಿಂದ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಮಾರ್ಚ್ 29ರಿಂದ 31ರವರೆಗೆ ಬೆಳಕು ಮತ್ತು ಶಬ್ದ ತಂತ್ರಗಾರಿಕೆ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಫೌಂಡೇಷನ್ ಅಧ್ಯಕ್ಷ ಸ.ರ.ಸುದರ್ಶನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಂಗಭೂಮಿ ತಂತ್ರಜ್ಞ ಅರುಣಮೂರ್ತಿ ನೇತೃತ್ವದಲ್ಲಿ ಕಾರ್ಯಾಗಾರ ನಡೆಯಲಿದ್ದು, ಬೆಳಕು ಮತ್ತು ಧ್ವನಿಗೆ ಸಂಬಂಧಿಸಿದ ತಾಂತ್ರಿಕ ವಿಚಾರಗಳನ್ನು ತಿಳಿಸಿಕೊಡಲಿದ್ದಾರೆ.

ಕಾರ್ಯಕ್ರಮಕ್ಕೆ ಬೆಳಕು ಮತ್ತು ಧ್ವನಿಯನ್ನು ಹೇಗೆ ನಿರ್ವಹಿಸಬೇಕು ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿ ನೀಡಲಾಗುತ್ತದೆ. ಕಾರ್ಯಾಗಾರದಲ್ಲಿ ಭಾಗವಹಿಸಲು ಇಚ್ಚಿಸುವವರು 98458 98982 ಸಂಪರ್ಕಿಸಬಹುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಧರ್ಮದರ್ಶಿ ನುಡಿ ಸುದರ್ಶನ, ಕಾರ್ಯದರ್ಶಿ ಸವಿತಾ ಪ. ಮಲ್ಲೇಶ್, ಶ್ರೀವಿದ್ಯಾ ಕಾಮತ್ ಉಪಸ್ಥಿತರಿದ್ದರು.

ಹಸಿರು ನಮ್ಮ ಉಸಿರು

ವಿದ್ಯಾರ್ಥಿ ದೆಸೆಯಲ್ಲೇ ಪ್ರತಿಭೆ ಅನಾವರಣಗೊಳಿಸಿದರೆ ಉತ್ತಮ ಕ್ರೀಡಾಪಟುಗಳಾಗಬಹುದು

ಚೆಸ್ ಮತ್ತು ಟೆನ್ನಿಸ್ ಪಂದ್ಯಾವಳಿ ಉದ್ಘಾಟಿಸಿದ ವಿಶ್ರಾಂತ ಪ್ರಾಂಶುಪಾಲ ಡಾ.ಶಶಿಧರ್ ಭಟ್ ಅಭಿಮತ

ಮೈಸೂರು,ಮಾ.17(ಎಂಟಿವೈ)–ಉತ್ತಮ ಕ್ರೀಡಾಪಟುಗಳಾಗಿ ಹೊರಹೊಮ್ಮಬೇಕಾದರೇ ವಿದ್ಯಾರ್ಥಿ ದೆಸೆಯಲ್ಲಿಯೇ ತಮ್ಮಲ್ಲಿರುವ ಪ್ರತಿಭೆಯನ್ನು ಅನಾವರಣಗೊಳಿಸಬೇಕು ಎಂದು ಬಾಸುದೇವ ಸೋಮಾನಿ ಕಾಲೇಜಿನ ವಿಶ್ರಾಂತ ಪ್ರಾಂಶುಪಾಲ ಡಾ.ಶಶಿಧರ್ ಭಟ್ ಸಲಹೆ ನೀಡಿದ್ದಾರೆ.



ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಮೈಸೂರು ವಿಶ್ವವಿದ್ಯಾನಿಲಯದ ಚಾಮುಂಡಿ ವಲಯ ಅಂತರ ಕಾಲೇಜು ಪುರುಷರ ಟೇಬಲ್ ಟೆನ್ನಿಸ್, ಮೈಸೂರು ನಗರ ಅಂತರ ಕಾಲೇಜುಗಳ ಮಹಿಳೆ ಹಾಗೂ ಪುರುಷರ ಚೆಸ್ ಮತ್ತು ಟೆನ್ನಿಸ್ ಪಂದ್ಯಾವಳಿಯನ್ನು ಬಾಸುದೇವ ಸೋಮಾನಿ ಕಾಲೇಜಿನ ವಿಶ್ರಾಂತ ಪ್ರಾಂಶುಪಾಲ ಡಾ.ಶಶಿಧರ್ ಭಟ್ ಉದ್ಘಾಟಿಸಿದರು.

ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ನಡೆದ ಮೈಸೂರು ವಿಶ್ವವಿದ್ಯಾನಿಲಯದ ಚಾಮುಂಡಿ ವಲಯ ಅಂತರ ಕಾಲೇಜು ಪುರುಷರ ಟೇಬಲ್ ಟೆನ್ನಿಸ್ ಸ್ಪರ್ಧೆ, ಮೈಸೂರು ನಗರ ಅಂತರ ಕಾಲೇಜುಗಳ ಮಹಿಳೆ ಹಾಗೂ ಪುರುಷರ ಚೆಸ್ ಮತ್ತು ಟೆನ್ನಿಸ್ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿ ದೆಸೆಯಿಂದಲೇ ಆಸಕ್ತ ಕ್ರೀಡೆಗಳಲ್ಲಿ ತಮ್ಮಲ್ಲಿರುವ ಪ್ರತಿಭೆಯನ್ನು ಹೊರಹಾಕಿ ತಮ್ಮ ಸಾಮರ್ಥ್ಯ ಪ್ರದರ್ಶಿಸಬೇಕು. ನಕಾರಾತ್ಮಕ ಅಂಶಗಳನ್ನು ಬದಿಗೊತ್ತಿ ಸಕಾರಾತ್ಮಕ ಚಿಂತನೆಯೊಂದಿಗೆ ಅವಕಾಶವನ್ನು ಬಳಸಿಕೊಂಡು ಯಶಸ್ಸಿನ ಹಾದಿಯಲ್ಲಿ ಸಾಗಬೇಕು. ಇತ್ತೀಚಿನ ದಿನಗಳಲ್ಲಿ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ಸಿಗುತ್ತಿದೆ. ಅದನ್ನು ಸದ್ಬಳಕೆ ಮಾಡಿಕೊಂಡು ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡುವತ್ತ ಗಮನ ಹರಿಸಬೇಕು ಎಂದು ಹೇಳಿದರು.

ಕ್ರೀಡೆಗಳಲ್ಲಿ ಪಾಲ್ಗೊಳ್ಳುವುದರಿಂದ ಶಿಸ್ತು ಮೈಗೂಡುತ್ತದೆ. ಅಲ್ಲದೆ, ಚಂಚಲತೆ ದೂರವಾಗಿ ಏಕಾಗ್ರತೆ ಹೆಚ್ಚುತ್ತದೆ. ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಂಡಾಗ ಮೆದುಳು ಮತ್ತು ಶಾರೀರಿಕ ಅಂಗಗಳು ಸಂಯೋಜನೆಗೊಳ್ಳುವುದರಿಂದ ಯಶಸ್ಸು ಸಾಧಿಸಲು ನೆರವಾಗುತ್ತದೆ. ಉತ್ತಮ ಕ್ರೀಡಾ ಪ್ರದರ್ಶನವನ್ನು ನೀಡಿದರೆ, ಅವಕಾಶಗಳು ಒದಗಿ ಬರಲಿದೆ. ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಉತ್ತಮ ಶ್ರೇಯಾಂಕಗಳನ್ನು ಗಳಿಸಿದರೆ ಉನ್ನತ ವಿದ್ಯಾಭ್ಯಾಸದಲ್ಲಿ ಹಾಗೂ ಉದ್ಯೋಗದಲ್ಲಿ ಮೀಸಲಾತಿ ಸೌಲಭ್ಯ ಪಡೆದುಕೊಳ್ಳಬಹುದು ಎಂದು ತಿಳಿಸಿದರು.

ಇದೇ ವೇಳೆ ಕಾಲೇಜಿನ ಪ್ರಾಚಾರ್ಯ ಡಾ.ಎಸ್.ಮರೀಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿದ್ಯಾವರ್ಧಕ ಸಂಘದ ಗೌರವ ಕೋಶಾಧ್ಯಕ್ಷ ಶ್ರೀಶೈಲ ರಾಮಣ್ಣವರ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಡಾ.ಕೆ.ಎನ್.ಹರಿಪ್ರಸಾದ್ ಉಪಸ್ಥಿತರಿದ್ದರು. ಇದೇ ವೇಳೆ ಕು.ಅನು ಪ್ರಾರ್ಥಿಸಿದರೆ, ಕಾಲೇಜಿನ ಕ್ರೀಡಾ ಸಮಿತಿಯ ಸದಸ್ಯೆ ಪ್ರೊ.ಕುಮುದ.ಡಿ.ಆರ್ ಸ್ವಾಗತಿಸಿದರು. ಗ್ರಂಥಪಾಲಕ ಟಿ.ಎಂ.ಮಾದೇಶ್ ಗೌಡ ವಂದಿಸಿದರು. ಮೈಸೂರು ನಗರದ ಹಾಗೂ ವಿಶ್ವವಿದ್ಯಾನಿಲಯ ವ್ಯಾಪ್ತಿಗೊಳಪಡುವ ಕಾಲೇಜುಗಳಿಂದ ಮೂರೂ ಸ್ಪರ್ಧೆಗಳಿಗೂ ಸುಮಾರು 50ಕ್ಕೂ ಹೆಚ್ಚು ತಂಡಗಳು ಸ್ಪರ್ಧೆಯಲ್ಲಿ ಪಾಲ್ಗೊಂಡಿವೆ.



ಕಾಲಿಗೆ ಪೆಟ್ಟಾಗಿ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿರುವ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಅವರನ್ನು ಭಾನುವಾರ ಸಂಸದ ಪ್ರತಾಪ್ ಸಿಂಹ ಭೇಟಿಯಾಗಿ ಅವರ ಆರೋಗ್ಯ ವಿಚಾರಿಸಿದರು.

ಮಾದಿಗರು ಬಹುಸಂಖ್ಯಾತರಾದರೂ ಸೌಲಭ್ಯ ಪಡೆಯುವಲ್ಲಿ ವಂಚಿತರಾಗಿದ್ದಾರೆ


ಜನಾಂದೋಲನ ವೇದಿಕೆ ಕೃಷ್ಣ

ಮೈಸೂರು, ಮಾ.17(ಜಿಎ)–ಪರಿಶಿಷ್ಟ ಜಾತಿ ದೃಢೀಕರಣ ಪತ್ರದಲ್ಲಿ ಮೂಲ ಜಾತಿಯನ್ನು ಪರಿಗಣಿಸಿ, ಅದಕ್ಕೆ ಅನುಗುಣವಾಗಿ ಮಾದಿಗ ಜಾತಿ ಎಂದು ನಮೂದಿಸಲು ಸರ್ಕಾರ ಕ್ರಮ ವಹಿಸಬೇಕು ಎಂದು ರಾಜ್ಯ ಮಾದಿಗರ ಜನಾಂದೋಲನ ವೇದಿಕೆ ಸಂಚಾಲಕ ಕೃಷ್ಣ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಯಲ್ಲಿ ಕಂಡುಬರುವ 101 ಜಾತಿಗಳ ಪೈಕಿ ಮಾದಿಗರು ಬಹುಸಂಖ್ಯಾತರಾಗಿದ್ದರು. ರಾಜಕೀಯ ಆರ್ಥಿಕ ಸೌಲಭ್ಯಗಳು ದೊರೆಯದೆ ವಂಚನೆಗೊಳಗಾಗಿದ್ದಾರೆ. ಜಾತಿ ಜನಗಣತಿ ವೇಳೆಯಲ್ಲಿ ಎಡಗೈ ಮತ್ತು ಬಲಗೈ ಸಮುದಾಯದವರು ಆದಿ ಕರ್ನಾಟಕ ಎಂದು ನಮೂದಿಸಿದ್ದು ಮೂಲ ಮಾದಿಗರಿಗೆ ಸಮಸ್ಯೆ ಉಂಟಾಗಲಿದೆ ಈ ಗೊಂದಲವನ್ನು ಬಗೆಹರಿಸಿ ನಮ್ಮ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡಬೇಕು ಎಂದರು.


ಸುದ್ದಿಗೋಷ್ಠಿಯಲ್ಲಿ ವೇದಿಕೆ ಜಿಲ್ಲಾ ಘಟಕದ ಅಧ್ಯಕ್ಷ ಶಂಕರ್ ಹಲಗಯ್ಯನ ಹುಂಡಿ, ತಾಲೂಕು ಅಧ್ಯಕ್ಷ ಸ್ವಾಮಿ ಹಡಜನ, ಮುಖಂಡರಾದ ಜಯಪುರ ಶಿವಣ್ಣ ಮಹೇಶ್ ಉಪಸ್ಥಿತರಿದ್ದರು.

ಮಂಡ್ಯದ ಮಹಿಳೆ ನಾಪತ್ತೆ



ಮೈಸೂರು, ಮಾ.17– ಮಾರ್ಚ್ 11ರಂದು ಮಂಡ್ಯದ ನಿವಾಸಿ ಮಹಿಳೆಯು ಕಾಣೆಯಾಗಿದ್ದು, ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 5.5 ಅಡಿ ಎತ್ತರ, ಗೋಧಿ ಮೈಬಣ್ಣ, ಕೋಲುಮುಖ ಹೊಂದಿದ್ದು, ಹಿಂದಿ ಮತ್ತು ಮರಾಠಿ ಭಾಷೆಯನ್ನು ಬಲ್ಲವರಾಗಿರುತ್ತಾರೆ. ಕಾಣೆಯಾದ ಸಂದರ್ಭದಲ್ಲಿ ಗುಲಾಬಿ ಬಣ್ಣದ ಎಂಬ್ರ್ಯಾಯಿಡರಿವುಳ್ಳ ಕುರ್ತಿ, ಬಿಳಿ ಬಣ್ಣದ ಸಿಗರೇಟ್ ಪ್ಯಾಂಟ್, ಬಿಳಿ ಬಣ್ಣದ ದುಪ್ಪಟ, ಕತ್ತಿನಲ್ಲಿ ಬೆಳ್ಳಿಯ ಕರಿಮಣಿ ಸರ, ಕಿವಿಯಲ್ಲಿ ಬಂಗಾರದ ಸಣ್ಣ ಓಲೆ ಮತ್ತು ನೀಲಿ ಬಣ್ಣದ ಬಂಗಾರದ ಉಂಗುರ ಧರಿಸಿರುತ್ತಾರೆ. ಮಹಿಳೆ ಬಗ್ಗೆ ಮಾಹಿತಿ ಕಂಡುಬಂದಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆಯ ದೂ.ಸಂ:0821–2516579/9480802122 ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ರೈಲ್ವೆ ಪೊಲೀಸ್ ಠಾಣೆಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.3.2024 ಸೋಮವಾರ, ಮಳೆ ನಕ್ಷತ್ರ: ಉತ್ತರಾಭಾದ್ರ 17.03.2024ರಿಂದ 30.03.2024 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಆರ್ದ್ರಾ, ರಾಹುಕಾಲ: ಸಂಜೆ 7.30 ರಿಂದ 9 ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಸದ್ಗುರು ಸೇವಾ ಟ್ರಸ್ಟ್ :** ಟ್ರಸ್ಟ್ ಉದ್ಘಾಟನೆ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರ, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ವಿಶೇಷ ಆಹ್ವಾನಿತರು: ವೇದಬ್ರಹ್ಮ ಡಾ.ವಿ.ಭಾನುಪ್ರಕಾಶ್, ಮುಖ್ಯ ಅತಿಥಿಗಳು: ಡಾ.ಎಸ್.ಪಿ.ಯೋಗಣ್ಣ, ಡಾ.ಸೀಮಾ ಯೋಗಣ್ಣ, ಡಾ.ರಾಜೇಂದ್ರ ಪ್ರಸಾದ್, ಸ್ಥಳ: ಶ್ರೀ ವರಸಿದ್ಧ ಮಹದೇಶ್ವರ ದೇವಸ್ಥಾನ, ಪಡುವಾರಹಳ್ಳಿ, ಬೆಳಗ್ಗೆ 9 ಗಂಟೆಗೆ.

■ **ಕಲಾನಿಕೇತನ ಸ್ಕೂಲ್ ಆಫ್ ಆರ್ಟ್:** ಡಿಜಿಟಲ್ ಆರ್ಟ್ ಕಲಾ ಪ್ರದರ್ಶನ, ಉದ್ಘಾಟನೆ: ಮೈಸೂರಿನ ವಿದ್ವತ್ ಕಂಪನಿ ಸಂಸ್ಥಾಪಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಯೋಗೇಶ್(ರೋಹಿತ್ ಎಂ.ಪಾಟೀಲ್), ಅತಿಥಿಗಳು: ಪಿ.ಎಂ.ವಿನಯ್, ಆರ್.ಪ್ರವೀಣ್, ಅಧ್ಯಕ್ಷತೆ: ಕಲಾನಿಕೇತನ ಸ್ಕೂಲ್ ಆಫ್ ಆರ್ಟ್‌ನ ಕಾರ್ಯದರ್ಶಿ ಬಾಬುರಾವ್. ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 11 ಗಂಟೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ– ಗಣೇಶ್ ಹೆಗ್ಡೆ, 6.15 ಗೀತಾರಾಧನ, 6.35 ಹಾಗೂ 6.10 "ಅಂಚೆ–ಅಂಕನ" ಆಕಾಶವಾಣಿ ಅಂಕಣ: ಪ್ರಾಯೋಜಿತ ಬಾನುಲಿ ಸರಣಿ, 6.40 ಪದಸಂಸ್ಕೃತಿ: ಡಾ.ಬಿ.ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು: ಪುತ್ತೂರು ನರಸಿಂಹನಾಯಕ್, 9.05 ಸಾಹಿತ್ಯ ಕ್ಷೇತ್ರದ ಹಿರಿಯ ಕಾದಂಬರಿಕಾರರು ಹಾಗೂ ಬರಹಗಾರರಾದ ಆರ್.ಕೆ. ನಾರಾಯಣ ಅವರೊಂದಿಗೆ ಪ್ರೊ.ಸಿ.ಡಿ.ನರಸಿಂಹನ್ ಅವರು ನಡೆಸಿದ್ದ ಸಂವಾದ, 10.00 ಡಾ.ಕೆ.ಜೆ. ಏಸುದಾಸ್– ಹಾಡುಗಾರಿಕೆ. **ಮಧ್ಯಾಹ್ನ:** 12.30 ದೇವರನಾಮ: ಸಂಗೀತಾ ಕಟ್ಟಿ, ರಾಧಾ ಜಯಲಕ್ಷ್ಮಿ, 12.45 ನಮ್ಮ ಆರೋಗ್ಯ: ಡೌನ್ ಸಿಂಡ್ರೋಮ್ ಕಾಯಿಲೆಯ ಲಕ್ಷಣಗಳು ಮತ್ತು ಚಿಕಿತ್ಸೆ" ಕುರಿತು ಡಾ.ಶಶಿಕಿರಣ್ ಕೆ.ಬಿ. ಮತ್ತು ಡಾ.ಅನುಷಾರಾಜ್ ಕೆ. ಅವರೊಂದಿಗೆ ಮಾತುಕತೆ, 1.20 ಭಾವಗೀತೆಗಳು– ಪುರುಷೋತ್ತಮ್, 3.00 ಹೈದರಾಬಾದ್ ಸಹೋದರರು– ಹಾಡುಗಾರಿಕೆ. **ಸಂಜೆ:** 4.00 ಮಹಿಳಾರಂಗ: ಚರ್ಚೆ ವಿಷಯ– ಪರೀಕ್ಷಾ ಸಮಯದಲ್ಲಿ ಪೋಷಕರ ಆತಂಕಗಳು ಭಾಗವಹಿಸುವವರು ಶಿಕ್ಷಕಿ ಕವಿತಾ ಹೆಚ್.ಎಸ್., ಗೃಹಿಣಿ ಶೀಲಾ ಸತೀಶ್, ಉದ್ಯಮಿ ಕವಿತಾ ಎಸ್.ಬಿ. ನಡೆಸಿಕೊಡುತ್ತಾರೆ ಆಪ್ತ ಸಮಾಲೋಚಕಿ ರಶ್ಮಿಹರೀಶ್, 4.45 ಹಿಂದಿ ಪಾಠ– ಸಂಧ್ಯಾ ಜವಳಿ, 6.00 "ಅಂಚೆ–ಅಂಕನ ಆಕಾಶವಾಣಿ ಅಂಕಣ": ಪ್ರಾಯೋಜಿತ ಬಾನುಲಿ ಸರಣಿ 6.50 ಕೃಷಿರಂಗ: "ಹಣ್ಣು–ಹೊನ್ನು": ಹನಿ ನೀರಾವರಿ ಹಾಘೂ ಹನಿ ರಸಾವರಿ ಪ್ರಾಮುಖ್ಯತೆ ಕುರಿತು ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವರು ಡಾ. ಜಿ. ಜನಾರ್ಧನ್ ಪ್ರಸ್ತುತಿ– ಎನ್.ಕೇಶವಮೂರ್ತಿ. **ರಾತ್ರಿ:** 9.30 ಮತ್ತೆ ಕೇಳಿ "ಹಾದಿಯಲ್ಲಿ ಕಂಡ ಮುಖ" ಭಾಗವಹಿಸುವವರು ನಂಜನಗೂಡು ತಾಲೂಕು ಮಲ್ಲಹಳ್ಳಿಯ ಜೇಡಿಮಣ್ಣು ಸಿದ್ದಮ್ಮ, ಪ್ರಸ್ತುತಿ– ಅಬ್ದುಲ್ ರಶೀದ್, 10.30 ಸವಿನೆನಪು.

■ **ಜೆಎಸ್‌ಎಸ್ ವಿಕಲಚೇತನರ ಪಾಲಿಟೆಕ್ನಿಕ್:** ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ, ರಸ್ತೆ ಸುರಕ್ಷತೆ ಪ್ರಾತ್ಯಕ್ಷಿಕೆ, ಅಧ್ಯಕ್ಷತೆ: ಪಾಲಿಟೆಕ್ನಿಕ್‌ನ ಎಟಿ ಮತ್ತು ಎಫ್‌ಟಿ ವಿಭಾಗದ ಮುಖ್ಯಸ್ಥೆ ಜಿ.ಸಂಜನಾ, ಮುಖ್ಯ ಅತಿಥಿ: ವಿವಿಪುರಂ ಸಂಚಾರ ಠಾಣೆಯ ಇನ್ಸ್‌ಪೆಕ್ಟರ್ ಎ.ಟಿ.ಭಾನು, ಬೆಳಗ್ಗೆ 11ಕ್ಕೆ. ಸೈಬರ್ ಸೆಕ್ಯೂರಿಟಿ ಮತ್ತು ಡಿಜಿಟಲ್ ಇಮೇಜ್ ಫೋರೆನ್ಸಿಕ್ ಕುರಿತು ಉಪನ್ಯಾಸ: ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿ ಕಂಪ್ಯೂಟರ್ ಅಪ್ಲಿಕೇಷನ್ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಹೆಚ್.ಆರ್.ಚೆನ್ನಮ್ಮ, ಅಧ್ಯಕ್ಷತೆ: ಪಾಲಿಟೆಕ್ನಿಕ್‌ನ ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ.ಎಸ್.ಜಿ.ಶ್ರೀಕಂಠಸ್ವಾಮಿ, ಸಂಜೆ 4ಕ್ಕೆ.

ಮೈಸೂರು ಮಿತ್ರ

ಕೆಎಸ್‌ಐಸಿಯಲ್ಲಿ ರಿಯಾಯಿತಿ ದರದ ರೇಷ್ಮೆ ಸೀರೆ ಖರೀದಿಗೆ ಮುಗಿಬಿದ್ದ ನಾರಿಯರು

ಮೈಸೂರು, ಮಾ.17(ಜಿಎ)–ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೋರೇಷನ್ (ಕೆಎಸ್‌ಐಸಿ) ಕಾರ್ಖಾನೆ ವತಿಯಿಂದ ನಡೆದ ರೇಷ್ಮೆ ಸೀರೆಗಳ ಮೂರು ದಿನಗಳ ರಿಯಾಯಿತಿ ಮಾರಾಟಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಮಹಿಳೆಯರು ಮುಗಿಬಿದ್ದು ರೇಷ್ಮೆ ಸೀರೆ ಖರೀದಿಸಿದರು.

ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿರುವ ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೋರೇಷನ್ (ಕೆಎಸ್‌ಐಸಿ) ಕಾರ್ಖಾನೆಯ 'ಶತಮಾನೋತ್ಸವ ಕಟ್ಟಡ'ದಲ್ಲಿ ಮಾ.15ರಿಂದ 17ರವರೆಗೆ ರೇಷ್ಮೆ ಸೀರೆಗಳ ಮೂರು ದಿನಗಳ ರಿಯಾಯಿತಿ ಮಾರಾಟವನ್ನು ಏರ್ಪಡಿಸಲಾಗಿತ್ತು. ಕಳೆದ ಮೂರು ದಿನಗಳಿಂದ ಬೆಳಗ್ಗೆಯಿಂದಲ್ಲೇ ನಗರದ ವಿವಿಧ ಭಾಗಗಳಿಂದ ಸಾವಿರಾರು ಮಹಿಳೆಯರು ರಿಯಾಯಿತಿ ದರದಲ್ಲಿ ರೇಷ್ಮೆ ಸೀರೆ ಖರೀದಿಗೆ ಮುಗಿಬಿದ್ದರು.



ರಿಯಾಯಿತಿ ದರದಲ್ಲಿ ರೇಷ್ಮೆ ಸೀರೆ ಖರೀದಿಸಲು ಮಹಿಳೆಯರು ಮಾನಂದವಾಡಿ ರಸ್ತೆಯಲ್ಲಿರುವ ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೋರೇಷನ್ (ಕೆಎಸ್‌ಐಸಿ) ಕಾರ್ಖಾನೆಯ ಶತಮಾನೋತ್ಸವ ಕಟ್ಟಡದ ಮುಂಭಾಗ ಕಾದುನಿಂತರು.

ರಿಯಾಯಿತಿ ಮಾರಾಟದ ಕೊನೆ ದಿನವಾದ ಭಾನುವಾರ ರಜಾ ದಿನವಾದ ಹಿನ್ನೆಲೆಯಲ್ಲಿ ಬೆಳಗ್ಗೆ 6 ಗಂಟೆಯಿಂದಲೇ ಸ್ಥಳಕ್ಕಾಗಮಿಸಿದ ಮಹಿಳೆಯರಿಂದ ಆವರಣ ತುಂಬಿ ತುಳುಕುತ್ತಿತ್ತು. ಬೆಳಗ್ಗೆ 10.30ಕ್ಕೆ ಗೇಟ್‌ಗಳು ತೆರೆದಾಗ ಮಹಿಳೆಯರು ಸ್ಥಳಕ್ಕೆ ಧಾವಿಸಿ ಗದ್ದಲ ಉಂಟು ಮಾಡಿದರು. ಈ ವೇಳೆ ಪರಿಸ್ಥಿತಿ ನಿಭಾಯಿಸಲು ಪೊಲೀಸ್ ಸಿಬ್ಬಂದಿ ಮತ್ತು ಗೃಹರಕ್ಷಕ ದಳದವರು ಹರಸಾಹಸಪಟ್ಟರು. ರಿಯಾಯಿತಿ ಮಾರಾಟಕ್ಕೆ ಝರಿ ಮತ್ತು ಝರಿ ರಹಿತವಾದ 3,000 ಸೀರೆಗಳು ಬಂದಿದ್ದವು. ಝರಿ ಸೀರೆಗಳ ಬೆಲೆ ರೂ. 10,000ರಿಂದ ರೂ. 2.5 ಲಕ್ಷಗಳಿದ್ದರೆ, ಝರಿಯೇತರ ಸೀರೆಗಳ ಬೆಲೆ ರೂ. 6,000ರಿಂದ ರೂ. 10,000ರಷ್ಟಿತ್ತು. ಈ ಬೆಲೆಗಳ ಅನುಗುಣವಾಗಿ ಶೇ.30ರಷ್ಟು ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಯಿತು.

ಕೆಎಸ್‌ಐಸಿ ಪ್ರಧಾನ ವ್ಯವಸ್ಥಾಪಕ (ಮಾರಾಟ) ಭಾನುಪ್ರಕಾಶ್ ಮಾತನಾಡಿ, ತಿರಸ್ಕೃತ ರೇಷ್ಮೆ ಸೀರೆಗಳ ರಿಯಾಯಿತಿ ಮಾರಾಟವನ್ನು ಇಲ್ಲಿ ಮಾಡಲಾಗುತ್ತಿದೆ. ಏಕೆಂದರೆ ಅವುಗಳನ್ನು ಕೆಎಸ್‌ಐಸಿ ಮಳಿಗೆಗಳಲ್ಲಿ ಮಾರಾಟ ಮಾಡುವುದರಿಂದ ಬ್ರ್ಯಾಂಡ್ ಮೌಲ್ಯಕ್ಕೆ ಹಾನಿಯಾಗುತ್ತದೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಈ ವೇಳೆ ಕೆಲವು ಮಹಿಳೆಯರು ಮಾತನಾಡಿ, ಸೀರೆಗಳು ಉತ್ತಮವಾಗಿವೆ. ಆದರೆ, ಮತ್ತಷ್ಟು ಸೂಕ್ತ ವ್ಯವಸ್ಥೆ ಕಲ್ಪಿಸಬಹುದಾಗಿತ್ತು ಎಂದು ತಿಳಿಸಿದರು.

ಎಲ್‌ಡಿಕೆ ಲಯನ್ಸ್‌ಗೆ ಮಿನಿ ಟೆನಿಸ್‌ಬಾಲ್ ಕ್ರಿಕೆಟ್ ಟ್ರೋಫಿ



ಮೈಸೂರು, ಮಾ.17(ಎಂಟಿವೈ)–ಮೈಸೂರು ತಾಲೂಕಿನ ಲಿಂಗದೇವರ ಕೊಪ್ಪಲಿನಲ್ಲಿ ಜೋಡಿ ಮಾರಮ್ಮನ ಹಬ್ಬದ ಅಂಗವಾಗಿ ಕನಕ ಗ್ರೂಪ್ ಆಯೋಜಿಸಿದ್ದ 2ನೇ ವರ್ಷದ ಹೊನಲು ಬೆಳಕಿನ ಮಿನಿ ಟೆನಿಸ್‌ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಎಲ್.ಡಿ.ಕೆ ಲಯನ್ಸ್ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತು.

ಮಿನಿ ಟೆನಿಸ್‌ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ 32 ತಂಡಗಳು ಭಾಗವಹಿಸಿದ್ದವು. ರೋಚಕವಾಗಿ ನಡೆದ ಪಂದ್ಯಾವಳಿಯಲ್ಲಿ ಎಲ್.ಡಿ.ಕೆ. ಲಯನ್ಸ್ ತಂಡ ಪ್ರಥಮ, ಎಸಿಟಿ ತಂಡ ರನ್ನರ್ ಅಪ್ ಹಾಗೂ ಕನಕ ಗ್ರೂಪ್ ಲಿಂಗದೇವರ ಕೊಪ್ಪಲು ತಂಡ ಮೂರನೇ ಬಹುಮಾನ ಪಡೆದುಕೊಂಡಿತು. ಪ್ರಥಮ ಬಹುಮಾನ 20 ಸಾವಿರ ಮತ್ತು ಟ್ರೋಫಿ, ದ್ವಿತೀಯ ಬಹುಮಾನ 10 ಸಾವಿರ ರೂ. ನಗದು ಮತ್ತು ಟ್ರೋಫಿ, ತೃತೀಯ ಬಹುಮಾನ ಪಡೆದ ತಂಡಕ್ಕೆ 5 ಸಾವಿರ ರೂ. ನಗದು ಹಾಗೂ ಟ್ರೋಫಿ ವಿತರಿಸಲಾಯಿತು.

ಸಮಾರೋಪ ಸಮಾರಂಭದಲ್ಲಿ ಕಾಂಗ್ರೆಸ್ ಮುಖಂಡ ಕೆ.ಎಸ್.ಕರೀಗೌಡ ವಿಜೇತ ತಂಡಕ್ಕೆ ಬಹುಮಾನ ವಿತರಿಸಿದರು. ಬಳಿಕ ಮಾತನಾಡಿದ ಅವರು, ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬಹುದು. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರು ಯಾವುದಾದರೊಂದು ಕ್ರೀಡೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಶಾಸಕ ಡಿ.ರವಿಶಂಕರ್, ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯ ಡಾ.ಶುಶ್ರೂತ್‌ಗೌಡ, ಜಿ.ಪಂ. ಮಾಜಿ ಸದಸ್ಯ ಬೀರಿಹುಂಡಿ ಬಸವಣ್ಣ, ಸೆಂಟ್ರಿಂಗ್ ರವಿಕುಮಾರ್, ಕನ್ನೇಗೌಡ, ಪೈಲ್ವಾನ್ ಕುಮಾರ್, ಟೈಲರ್ ರಮೇಶ್, ಮಂಜು, ನಾಗರಾಜು, ಕೆ.ಆರ್.ಪೇಟೆ ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಗೋವಿಂದರಾಜು, ಪಂದ್ಯಾವಳಿಯ ಆಯೋಜಕರಾದ ದರ್ಶನ್, ಮಂಜು, ಮಹೇಶ್, ರಾಜು ಉಪಸ್ಥಿತರಿದ್ದರು.

ಸೀಮೆಎಣ್ಣೆ ಬಳಕೆ ಶೇ.26ರಷ್ಟು ಇಳಿಕೆ

ನವದೆಹಲಿ: ದೇಶದಲ್ಲಿ ಸೀಮೆಎಣ್ಣೆ ಬಳಕೆ ಪ್ರಮಾಣವು 2013–14ರಿಂದ 2022–23ರ ನಡುವೆ ಶೇ.26ರಷ್ಟು ಇಳಿಕೆಯಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ



(ಎನ್‌ಎಸ್‌ಒ) ತಿಳಿಸಿದೆ. ಕೇಂದ್ರ ಸರ್ಕಾರವು ನವೀಕರಿಸಬಹುದಾದ ಇಂಧನ ನೀತಿಗೆ ಒತ್ತು ನೀಡಿದೆ. ಹಾಗಾಗಿ, ಈ ಅವಧಿಯಲ್ಲಿ ಸೀಮೆಎಣ್ಣೆ ಬಳಕೆ ಕುರಿತಾದ ಸಂಯುಕ್ತ ವಾರ್ಷಿಕ ಬೆಳವಣಿಗೆ ದರವು (ಸಿಎಜಿಆರ್) ಇಳಿಕೆಯಾಗಿದೆ ಎಂದು ಎನ್‌ಎಸ್‌ಒ ಇತ್ತೀಚೆಗೆ ಪ್ರಕಟಿಸಿರುವ 'ಭಾರತದ ಇಂಧನದ ಅಂಕಿ–ಅಂಶ 2024' ವರದಿ ತಿಳಿಸಿದೆ. 2022–23ರಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಪೈಕಿ ಹೈ ಸ್ಪೀಡ್ ಡೀಸೆಲ್ ಆಯಿಲ್ (ಎಚ್‌ಎಸ್‌ಡಿಒ–ಡೀಸೆಲ್) ಬಳಕೆ ಪ್ರಮಾಣ ಹೆಚ್ಚಿದೆ (ಶೇ.38.52). 2021–22ನೇ ಸಾಲಿಗೆ ಹೋಲಿಸಿದರೆ ಬಳಕೆ ಪ್ರಮಾಣದಲ್ಲಿ ಶೇ 12.05ರಷ್ಟು ಏರಿಕೆ ಆಗಿದೆ. ಪೆಟ್ರೋಲ್ ಬಳಕೆಯು ಶೇ.13.38ರಷ್ಟು ಇದ್ದರೆ, ಕಲ್ಲಿದ್ದಲಿಗೆ ಪರ್ಯಾಯವಾಗಿ ಬಳಕೆಯಾಗುವ ಪೆಟ್ರೋಲಿಯಂ ಕೋಕ್ ಬಳಕೆಯು ಶೇ.28.68ರಷ್ಟಿದೆ. ಹೈ ಸ್ಪೀಡ್ ಡೀಸೆಲ್ (ಎಚ್‌ಎಸ್‌ಡಿ–ಡೀಸೆಲ್) ಬಳಕೆಯು ಶೇ.12.05ರಷ್ಟು ಹೆಚ್ಚಳವಾಗಿದೆ.

ಬಸವತತ್ವ ಮನುಷ್ಯತ್ವದ ಸಂಜೀವಿನಿ

ಸಾಹಿತಿ ಬನ್ನೂರು ಕೆ. ರಾಜು ಅಭಿಮತ



ಮೈಸೂರು, ಮಾ. 17– ವಿಶ್ವಗುರು ಬಸವಣ್ಣ ಬರೀ ಕರ್ನಾಟಕದ ಸಾಂಸ್ಕೃತಿಕ ನಾಯಕರಷ್ಟೇ ಆಗಿರದೆ ಇಡೀ ಜಗತ್ತಿನ ಮಾನವ ಕುಲದ ಉದ್ಧಾರಕರೆಂದು ಪತ್ರಕರ್ತರೂ ಆದ ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯಪಟ್ಟರು.

ಹನ್ನೆರಡನೇ ಶತಮಾನದಲ್ಲಿ ಮಾನವೀಯತೆಯ ನೆಲೆಯಲ್ಲಿ ಬಸವಯುಗವನ್ನೇ ಸೃಷ್ಟಿಸಿದ ಜಗಜ್ಯೋತಿ ಬಸವೇಶ್ವರರನ್ನು ನಮ್ಮ ರಾಜ್ಯ ಸರ್ಕಾರ ಪ್ರಸ್ತುತ "ಕರ್ನಾಟಕದ ಸಾಂಸ್ಕೃತಿಕ ನಾಯಕ"ರೆಂದು ಘೋಷಿಸಿದ ಹಿನ್ನೆಲೆಯಲ್ಲಿ ನಗರದ ಕೆ.ಆರ್.ಮೊಹಲ್ಲಾದ ಕೃಷ್ಣಮೂರ್ತಿಪುರಂನ ನಮನ ಕಲಾ ಮಂಟಪದಲ್ಲಿ ಶ್ರೀಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಆಶ್ರಯದಲ್ಲಿ ಆಯೋಜಿಸಿದ್ದ ಬಸವೇಶ್ವರರ ಭಾವಚಿತ್ರವುಳ್ಳ ಬಹುವರ್ಣದ ದಿನದರ್ಶಿಕೆ ಬಿಡುಗಡೆ ಮತ್ತು "ಶರಣ ಯುವಸಿರಿ" ಪ್ರಶಸ್ತಿ ಪ್ರದಾನ ಸಮಾರಂಭವನ್ನು ಜ್ಯೋತಿ ಬೆಳಗುವುದರ ಮೂಲಕ ಉದ್ಘಾಟಿಸಿದ ಅವರು, ಇವನಾರವನೆನ್ನದೆ ಎಲ್ಲರನ್ನೂ ನಮ್ಮವನೆನ್ನುವ ಮನುಷ್ಯತ್ವವೇ ಬಸವ ತತ್ವವೆಂದರು.

ಕನ್ನಡ ಚಳವಳಿ ನಾಯಕ ಮೂಗೂರು ನಂಜುಂಡಸ್ವಾಮಿ, ಕವಿ ಜಯಪ್ಪ ಹೊನ್ನಾಳಿ, ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಹಾಗೂ ನಗರಪಾಲಿಕೆ ಮಾಜಿ ಸದಸ್ಯ ಎಂ.ಪ್ರದೀಪ್‌ಕುಮಾರ್ ಅವರು ಬಸವೇಶ್ವರರ ಭಾವಚಿತ್ರವುಳ್ಳ ದಿನದರ್ಶಿಕೆಯನ್ನು ಬಿಡುಗಡೆ ಮಾಡಿದರು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಾದ ಸುಮಾ ರಾಜ್‌ಕುಮಾರ್ (ಕಲಾ ಕ್ಷೇತ್ರ), ಪುಷ್ಪಾ (ಉದ್ಯಮ ಕ್ಷೇತ್ರ), ನಜರ್‌ಬಾದ್ ನಟರಾಜ್ (ಸಮಾಜ ಸೇವೆ) ಅವರಿಗೆ 'ಶರಣ ಯುವಸಿರಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ತುಂಡು ಗುತ್ತಿಗೆ ಕಾಮಗಾರಿ ನೀಡುವಲ್ಲಿ ಅವ್ಯವಹಾರ ಆರೋಪ

ಜಿಪಂ ಕಚೇರಿ ಮುಂದೆ ಪ್ರತಿಭಟನೆ



ಕರ್ನಾಟಕ ವೀರಕೇಸರಿ ಪಡೆಯಿಂದ ಮೈಸೂರು ಜಿಪಂ ಕಚೇರಿ ಮುಂಭಾಗ ಪ್ರತಿಭಟನೆ.

ಮೈಸೂರು, ಮಾ.17(ಜಿಎ)–ಜಿಲ್ಲಾ ಪಂಚಾಯತಿಯಲ್ಲಿ ತುಂಡುಗುತ್ತಿಗೆ ಕಾಮಗಾರಿ ನೀಡುವಲ್ಲಿ ಅವ್ಯವಹಾರ ನಡೆಯುತ್ತಿದೆ ಎಂದು ಆರೋಪಿಸಿ ಕರ್ನಾಟಕ ವೀರಕೇಸರಿ ಪಡೆ ವತಿಯಿಂದ ಮೈಸೂರು ಜಿಲ್ಲಾ ಪಂಚಾಯತಿ ಕಚೇರಿ ಮುಂಭಾಗ ಪತ್ರಿಭಟನೆ ನಡೆಸಲಾಯಿತು.

ಮೈಸೂರು, ಕೆ.ಆರ್.ನಗರ ತಾಲೂಕುಗಳಲ್ಲಿ ಅರ್ಜಿ ಸಲ್ಲಿಸಿದ ಗುತ್ತಿಗೆದಾರರಿಗೆ ತುಂಡು ಗುತ್ತಿಗೆ ಕಾಮಗಾರಿ ನೀಡದೆ, ಅರ್ಜಿಯೇ ಸಲ್ಲಿಸದ ಗುತ್ತಿಗೆದಾರರಿಗೆ ಅತಿ ಹೆಚ್ಚು ಕಾಮಗಾರಿ ನೀಡುತ್ತಿದ್ದು, ಗುತ್ತಿಗೆದಾರರ ಅನುಭವದ ಆಧಾರ, ದರ್ಜೆಗನುಸಾರ ಗುತ್ತಿಗೆದಾರರಿಗೆ ಅಭಿಯಂತರರು ತುಂಡುಗುತ್ತಿಗೆ ಕಾಮಗಾರಿಯನ್ನು ವಹಿಸಲು ಶಿಫಾರಸು ಮಾಡಬೇಕು. ಆದರೆ ಅಧಿಕಾರಿಗಳು ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿ ಕೇವಲ ರಾಜಕಾರಣಿಗಳ ಹಿಂಬಾಲಕರಿಗೆ ಮಾತ್ರ ತುಂಡು ಗುತ್ತಿಗೆ ನೀಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನೋಂದಾಯಿತ ಗುತ್ತಿಗೆದಾರರಿಗೆ ನೇರವಾಗಿ ತುಂಡುಗುತ್ತಿಗೆ ನೀಡದೆ, ಆಯಾಯ ಕ್ಷೇತ್ರದ ಕಾರ್ಯಕರ್ತರಿಗೆ ತುಂಡುಗುತ್ತಿಗೆ ನೀಡುತ್ತಿದ್ದಾರೆ. ಅರ್ಜಿ ಸಲ್ಲಿಸಿದ ಗುತ್ತಿಗೆದಾರರು ಕಾರ್ಯಕರ್ತರಿಗೆ ಶೇ.15ರಿಂದ 20ರಷ್ಟು ಕಮಿಷನ್ ನೀಡಿ, ಕಾಮಗಾರಿ ಪಡೆಯುವ ದುಸ್ಥಿತಿ ನಿರ್ಮಾಣವಾಗಿದ್ದು, ಆದ್ದರಿಂದ ತುಂಡುಗುತ್ತಿಗೆ ಬಗ್ಗೆ ಆಗುತ್ತಿರುವ ಅಕ್ರಮಗಳ ಬಗ್ಗೆ ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ವಹಿಸುವಂತೆ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಅಧ್ಯಕ್ಷ ಮಧುವನ ಚಂದ್ರು, ಮಹದೇವು, ಅಲಗೂಡು ಬಸವರಾಜು, ಹೊಸಕೋಟೆ ರಾಮನಾಯಕ, ಎಂ,ರವೀಂದ, ನಾಗರಾಜು, ಧನಗಳ್ಳಿ ನಾಗರಾಜು, ಪರಮೇಶ್ವರ್ ಮತ್ತಿತರರು ಪಾಲ್ಗೊಂಡಿದ್ದರು.

'ಮೈಂಡ್ ಫೆಸ್ಟ್' ಅಂತರ ಕಾಲೇಜು ರಸಪ್ರಶ್ನೆಯಲ್ಲಿ ಜೆಎಸ್‌ಎಸ್ ವೈದ್ಯಕೀಯ ಕಾಲೇಜು ತಂಡ ಪ್ರಥಮ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಮೈಸೂರು ಬುಕ್ ಕ್ಲಬ್ ಆಯೋಜಿಸಿದ್ದ 'ಮೈಂಡ್ ಫೆಸ್ಟ್' ಅಂತರ ಕಾಲೇಜು ರಸಪ್ರಶ್ನೆ ಕಾರ್ಯಕ್ರಮ ನಡೆಯಿತು. ಇಂಜಿನಿಯರ್ ಆನಂದ್ ವೆಂಕಟರಾಮನ್, ಮೈಸೂರು ಬುಕ್ ಕ್ಲಬ್ ಅಧ್ಯಕ್ಷೆ ಶುಭ ಸಂಜಯ್ ಅರಸ್ ಮತ್ತಿತರರಿದ್ದರು.

ಮೈಸೂರು,ಮಾ.17(ಎಂಕೆ)– ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಮೈಸೂರು ಬುಕ್ ಕ್ಲಬ್ ಆಯೋಜಿಸಿದ್ದ 'ಮೈಂಡ್ ಫೆಸ್ಟ್' ಅಂತರ ಕಾಲೇಜು ರಸಪ್ರಶ್ನೆ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ವೈದ್ಯಕೀಯ ಕಾಲೇಜು ತಂಡದ ಅರುಶ್ ಸುದನ್, ಕೃಷ್ಣ ರಾಜಮೋಹನ್, ಯಶವರ್ಧನ್ ಗೌರ್ ಪ್ರಥಮ ಸ್ಥಾನ ಪಡೆದರು.

ಹಾಗೆಂಯೇ ಎಸ್‌ಜೆಸಿಇ ಕಾಲೇಜಿನ ಜಿ.ಅನುರಾಗ್, ನಿನಾದ್ ಎ ಕಲ್ಲರ್ ಹಾಗೂ ಸರ್ಕಾರಿ ಪಿಯು ಕಾಲೇಜಿನ ವೈ.ಎಂ. ವಿಶ್ವಾಸ್ ದ್ವಿತೀಯ ಸ್ಥಾನ ಪಡೆದರೆ, ಯುವರಾಜ ಕಾಲೇಜಿನ ಡಿ.ಸಿ.ಚೇತನ್, ಕೆ.ವಿ.ಆಭಾ ಉನ್ನಿ, ಅನೀಶ್ ಆರ್ ಭಟ್ ತೃತೀಯ ಬಹುಮಾನ ಪಡೆದರು. ಜೊತೆಗೆ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಸುಥಯ್, ಸೋನಾ, ವೈದೇಹಿ, ವಿವಿಧ ಶಿಕ್ಷಣ ಸಂಸ್ಥೆಗಳ ಎಂ.ಕೆ.ಅಮೋಘ ವೇದಾಂತ್ ರಾಯ್, ಎಂ.ಎಸ್.ಹರ್ಷ ಕುಮಾರ್, ಸೈಯದ್ ಮೊಹಮ್ಮದ್ ಮುಜಾಕಿರ್, ಕಾರ್ತಿಕ್, ಶ್ರೇಯಸ್, ಅದ್ವಿತ್, ಮನನ್ ಬಜಾಜ್, ನಂದಿನಿ ಸಮಾಧಾನಕರ ಬಹುಮಾನ ಪಡೆದರು.

ಇದಕ್ಕೂ ಮುನ್ನ ಮೈಸೂರು ಬುಕ್ ಕ್ಲಬ್ ಅಧ್ಯಕ್ಷೆ ಶುಭ ಸಂಜಯ್ ಅರಸ್ ಮಾತನಾಡಿ, ವಿದ್ಯಾರ್ಥಿಗಳನ್ನು ಬೌದ್ಧಿಕವಾಗಿ ಉತ್ತೇಜಿಸುವ ಕಾರ್ಯಕ್ರಮ ಇದಾಗಿದೆ. ವಿದ್ಯಾರ್ಥಿಗಳು ಇತಿಹಾಸ, ಪ್ರಚಲಿತ ವಿದ್ಯಮಾನ, ಕ್ರೀಡೆ ಸೇರಿದಂತೆ ಎಲ್ಲಾ ಬಗೆಯ ವಿಚಾರಗಳನ್ನು ಅರಿಯುವುದು ಅವಶ್ಯವಾಗಿದೆ ಎಂದು ತಿಳಿಸಿದರು. ಕ್ವಿಜ್ ಮಾಸ್ಟರ್‌ಗಳಾದ ಬರ್ಟಿ ಆಶ್ಲೇ ಮತ್ತು ಅಭಿಷೇಕ್ ವೀರಾಘವನ್ ಅವರು ರಸಪ್ರಶ್ನೆ ಕಾರ್ಯಕ್ರಮ ನಡೆಸಿಕೊಟ್ಟರು. ಅಮೇರಿಕಾದಲ್ಲಿನ ಇಂಜಿನಿಯರ್ ಆನಂದ್ ವೆಂಕಟರಾಮನ್ ವಿಜೇತರಿಗೆ ಬಹುಮಾನ ವಿತರಿಸಿದರು. ಮೀನು ಬ್ರೌವರ್ ಮತ್ತು ಕುಸುಮಾ ಮೂರ್ತಿ ತೀರ್ಪುಗಾರರಾಗಿದ್ದರು.

ದ್ವಿತಳಿ ಹುಳು ಬೆಳೆಸುವುದರಿಂದ ಗುಣಮಟ್ಟದ ಅಧಿಕ ರೇಷ್ಮೆ ಇಳುವರಿ

ಕೇಂದ್ರ ರೇಷ್ಮೆ ಸಂಶೋಧನೆ–ತರಬೇತಿ ಸಂಸ್ಥೆ ವಿಜ್ಞಾನಿ ಎಲ್.ಕುಸುಮಾ

ಮೈಸೂರು, ಮಾ.17– ರೈತರು ದ್ವಿತಳಿ ಹುಳು ಬೆಳೆಸುವುದರಿಂದ ಗುಣಮಟ್ಟದ ಅಧಿಕ ರೇಷ್ಮೆ ಇಳುವರಿ ಪಡೆಯಲು ಸಾಧ್ಯ ಎಂದು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ವಿಜ್ಞಾನಿ ಎಲ್.ಕುಸುಮಾ ಹೇಳಿದರು.

ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ 'ರೇಷ್ಮೆ ಕೃಷಿ – ನೂತನ ಸಾಕಾಣಿಕಾ ಪದ್ಧತಿಗಳು ಮತ್ತು ಮಾರುಕಟ್ಟೆ ವ್ಯವಸ್ಥೆ' ಕುರಿತು ಹಮ್ಮಿಕೊಂಡಿದ್ದ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಾರುಕಟ್ಟೆಯಲ್ಲಿ ಹೆಚ್ಚು ಬೇಡಿಕೆಯಿರುವ FC1 x FC2 (ದ್ವಿತಳಿ) ಬೆಳೆಯುವುದರಿಂದ ಗುಣಮಟ್ಟದ ಗೂಡು ಉತ್ಪಾದನೆ ಮಾಡಿ ರೈತರು ಹೆಚ್ಚು ಲಾಭ ಗಳಿಸಬಹುದು. ರೈತರು V1 ತಳಿ ಹಿಪ್ಪನೇರಳೆ ಗಿಡಗಳನ್ನು ಬೆಳೆಯಬೇಕು. ಹುಳು ಸಾಕಾಣಿಕೆ ಮನೆ, ಸುತ್ತಮುತ್ತಲಿನ ಪರಿಸರ ಮತ್ತು ಸಾಮಗ್ರಿಗಳ ಸೋಂಕು ನಿವಾರಣೆ ಹಾಗೂ ನೈರ್ಮಲ್ಯವನ್ನು ಕಾಪಾಡುವುದು ರೋಗಗಳು ಬರದಂತೆ ತಡೆಗಟ್ಟಲು ಬಹಳ ಮುಖ್ಯ ಕ್ರಮಗಳಾಗಿವೆ ಎಂದರು.

> “ರೇಷ್ಮೆ ಇಲಾಖೆಯಿಂದ ನರೇಗಾ ಯೋಜನೆಯಡಿ ರೇಷ್ಮೆ ಕೃಷಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದೆ. ರೈತರು ಟ್ರೆಂಚಿಂಗ್ ಮತ್ತು ಮಲ್ಚಿಂಗ್ ಪದ್ಧತಿಯಲ್ಲಿ ರೇಷ್ಮೆ ಬೆಳೆಯಲು ಮುಂದಾಗಬೇಕು. ರೇಷ್ಮೆ ಮನೆ ನಿರ್ಮಿಸಲು ಮತ್ತು ಇತರೆ ಪರಿಕರಗಳನ್ನು ಸಹಾಯಧನದಲ್ಲಿ ನೀಡಲಾಗುತ್ತಿದೆ. **–ವೃಷಬೇಂದ್ರ, ಉಪನಿರ್ದೇಶಕ, ರೇಷ್ಮೆ ಇಲಾಖೆ**

ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಉಪ ಕೃಷಿ ನಿರ್ದೇಶಕ ಡಾ.ಜಿ.ಹೆಚ್. ಯೋಗೇಶ್ ಮಾತನಾಡಿ, ರೇಷ್ಮೆ ತ್ಯಾಜ್ಯಗಳನ್ನು ಕಾಂಪೋಸ್ಟ್ ಅಥವಾ ಎರೆಹುಳು ಗೊಬ್ಬರವಾಗಿ ಪರಿವರ್ತಿಸಿ ಮರುಬಳಕೆ ಮಾಡುವ ಮೂಲಕ ಮಣ್ಣಿನ ಫಲವತ್ತತೆ ಕಾಪಾಡಲು ರೈತರು ಮುಂದಾಗಬೇಕು ಎಂದರು ಹೇಳಿದರು.

ರೇಷ್ಮೆ ತಜ್ಞೆ ಡಾ.ಮೇಘಲಾದೇವಿ ಮಾತನಾಡಿ, ರೇಷ್ಮೆ ಬೆಳೆ ಮತ್ತು ಹುಳುಗಳಿಗೆ ಬರುವ ರೋಗ ಮತ್ತು ಕೀಟಗಳ ನಿರ್ವಹಣೆಗೆ ಪರತಂತ್ರ ಜೀವಿಗಳನ್ನು ಬಳಸುವುದರ ಜೊತೆಗೆ ಸಮಗ್ರ ಹತೋಟಿ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಶೆಟ್ಟನಾಯಕನಹಳ್ಳಿ ಪ್ರಗತಿಪರ ರೈತ ಎಸ್.ಬಿ.ಸ್ವಾಮಿ ಮಾತನಾಡಿ, ತಮ್ಮ 4 ಎಕರೆ ಜಮೀನಿನಲ್ಲಿ ಹಿಪ್ಪುನೇರಳೆ ಬೆಳೆದು ಪ್ರತಿ ಬ್ಯಾಚ್‌ನಲ್ಲಿ 300 ಮೊಟ್ಟೆ ಸಾಕಾಣಿಕೆ ಮಾಡುವ ಮೂಲಕ ಉತ್ತಮ ಆದಾಯ ಗಳಿಸುತ್ತಿದ್ದೇನೆ ಎಂದರು. ಕಾರ್ಯಕ್ರಮದಲ್ಲಿ ಸಹಾಯಕ ಕೃಷಿ ನಿರ್ದೇಶಕಿ ವಜ್ರೇಶ್ವರಿ ಎಸ್.ಕುಲಕರ್ಣಿ, ಕೃಷಿ ಅಧಿಕಾರಿ ಮಾಲತಿ ಸೇರಿದಂತೆ ಇನ್ನಿತರರಿದ್ದರು.

ತ.ನಾಡಿಗೆ ಕಾವೇರಿ ನೀರು ಖಂಡಿಸಿ ಕಾವೇರಿ ನೀರಾವರಿ ನಿಗಮಕ್ಕೆ ಮುತ್ತಿಗೆ

ಮೈಸೂರು, ಮಾ.17 (ಜಿಎ)–ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ, ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಮೈಸೂರು–ಕೆಆರ್‌ಎಸ್ ರಸ್ತೆಯಲ್ಲಿರುವ ಕಾವೇರಿ ನೀರಾವರಿ ನಿಗಮ ಇಲಾಖೆ ಕಚೇರಿಗೆ ಮುತ್ತಿಗೆ ಹಾಕುವ ಮೂಲಕ ಪ್ರತಿಭಟನೆ ನಡೆಸಲಾಯಿತು.



ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಕಾವೇರಿ ನೀರಾವರಿ ನಿಗಮ ಇಲಾಖೆ ಕಚೇರಿ ಮುಂದೆ ಪ್ರತಿಭಟಿಸಲಾಯಿತು.

ಕಾವೇರಿ ನೀರಾವರಿ ನಿಗಮದ ಕಚೇರಿ ಮುಂದೆ ಜಮಾಯಿಸಿದ ಕಾವೇರಿ ಕ್ರಿಯಾ ಸಮಿತಿ ಕಾರ್ಯಕರ್ತರು, ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಈ ಕೂಡಲೇ ರಾಜ್ಯ ಸರ್ಕಾರ ತಮಿಳುನಾಡಿಗೆ ಬಿಡುತ್ತಿರುವ ನೀರನ್ನು ನಿಲ್ಲಿಸಬೇಕು. ನಮ್ಮ ರಾಜ್ಯದಲ್ಲಿ ಈಗಾಗಲೇ ಬಹಳ ಭೀಕರ ಬರ ತಾಂಡವವಾಡುತ್ತಿದೆ. ನಮ್ಮಲ್ಲಿ ಕುಡಿಯಲೇ ನೀರಿಲ್ಲ. ಇಂತಹ ಸಮಯ ದಲ್ಲಿ ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಬಿಡುತ್ತಿರುವುದು ಅತ್ಯಂತ ಖಂಡನೀಯ. ಈ ಕೂಡಲೇ ಮುಖ್ಯಮಂತ್ರಿಗಳು ಪ್ರಧಾನಮಂತ್ರಿಗಳಿಗೆ ಪತ್ರ ಬರೆದು ತಮಿಳುನಾಡಿಗೆ ನೀರು ಬಿಡುವುದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು. ಪತ್ರಿಭಟನೆಯಲ್ಲಿ ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್, ಪ್ರಧಾನ ಸಂಚಾಲಕ ಮೂಗೂರು ನಂಜುಂಡಸ್ವಾಮಿ, ತೇಜೇಶ್ ಲೋಕೇಶ್‌ಗೌಡ, ಆಟೋ ಮಹದೇವು, ಹನುಮಂತೇಗೌಡ, ನಾಗರಾಜ್, ಪ್ರಭುಶಂಕರ್, ಹನುಮಂತಯ್ಯ, ನೇಹಾ, ಮಂಜುಳಾ, ಭಾಗ್ಯಮ್ಮ, ಸಿಂಧುವಳ್ಳಿ ಶಿವಕುಮಾರ್, ಪುಷ್ಪವತಿ, ರವೀಶ್, ರಘು, ವಿಷ್ಣು, ಪ್ರಭಾಕರ, ಪ್ರಮೋದ್, ಕೃಷ್ಣೇಗೌಡ, ಬಸವರಾಜು ಮತ್ತಿತರರಿದ್ದರು.



ಮೈಸೂರು ಪಾಲಿಕೆ ವಾರ್ಡ್ ನಂ.4ರ ವ್ಯಾಪ್ತಿಯ ಹೆಬ್ಬಾಳ ಕಾಲೋನಿಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿ ನಿರ್ಮಾಣಕ್ಕೆ ಶಾಸಕ ಕೆ.ಹರೀಶ್‌ಗೌಡ ಗುದ್ದಲಿಪೂಜೆ ನೆರವೇರಿಸಿದರು. ಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್, ಕಾಲೋನಿ ಮುಖಂಡರು ಇದ್ದರು.

ಆಸ್ತಿ ವಿವಾದ; ವ್ಯಕ್ತಿ ಹತ್ಯೆ

ಮೈಸೂರು, ಮಾ.17(ಎಂಕೆ)– ತಾಲ್ಲೂಕಿನ ಗೆಜ್ಜಗಳ್ಳಿಯಲ್ಲಿ ಆಸ್ತಿ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ವ್ಯಕ್ತಿಯೊಬ್ಬರನ್ನು ದೊಣ್ಣೆಯಿಂದ ಹೊಡೆದು ಆತನ ಚಿಕ್ಕಪ್ಪ ಮತ್ತು ಚಿಕ್ಕಪನ ಮಗನೇ ಹತ್ಯೆ ಗೈದಿರುವ ಘಟನೆ ನಡೆದಿದೆ.

ಇಲ್ಲಿನ ನಿವಾಸಿ ಮಲ್ಲೇಶ್(45) ಹತ್ಯೆಯಾದ ವ್ಯಕ್ತಿಯಾಗಿದ್ದು, ಅವರ ಚಿಕ್ಕಪ್ಪನಾದ ವೀರಭದ್ರಪ್ಪ(70) ಹಾಗೂ ಆತನ ಮಗ ಪ್ರಕಾಶ್(35) ಹತ್ಯೆ ಮಾಡಿದ್ದಾರೆ.

ಹಲವು ವರ್ಷಗಳಿಂದ ಆಸ್ತಿ ಸಂಬಂಧ ಕಲಹ ನಡೆದಿದ್ದು, ಶನಿವಾರ ರಾತ್ರಿ 11 ಗಂಟೆ ಸುಮಾರಿಗೆ ದೊಣ್ಣೆಯಿಂದ ಹೊಡೆದು ಹತ್ಯೆ ಮಾಡಿದ್ದಾರೆ. ಆರೋಪಿಗಳನ್ನು ಬಂಧಿಸಿರುವ ಮೈಸೂರು ಗ್ರಾಮಾಂತರ ಠಾಣೆ ಪೊಲೀಸರು, ಪ್ರಕರಣ ದಾಖಲಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಅಪ್ಪು ಸ್ಮರಣಾರ್ಥ ಉಚಿತ ಸಾಮೂಹಿಕ ವಿವಾಹ ಆಯೋಜನೆ

ದುಂದುವೆಚ್ಚ, ಆಡಂಬರದ ಮದುವೆ ಬೇಡ: ನಟ ಚಿಕ್ಕಣ್ಣ ಸಲಹೆ

ಮೈಸೂರು, ಮಾ.17(ಜಿಎ)–ದುಂದುವೆಚ್ಚ ಮಾಡಿ ಆಡಂಬರದ ಮದುವೆ ಮಾಡಿಕೊಳ್ಳಬೇಡಿ ಎಂದು ನಟ ಚಿಕ್ಕಣ್ಣ ಸಲಹೆ ನೀಡಿದರು.

ನಟ ದಿ.ಡಾ.ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬದ ಅಂಗವಾಗಿ ಪುನೀತ್ ರಾಜ್‌ಕುಮಾರ್ ಸಮಾಜ ಸೇವಾ ಸಮಿತಿ ವತಿಯಿಂದ ಮೈಸೂರಿನ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಏರ್ಪಡಿಸಿದ್ದ ಉಚಿತ ಸಾಮೂಹಿಕ ವಿವಾಹದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಅಪ್ಪು ಅವರ ಹುಟ್ಟುಹಬ್ಬದ ದಿನದಂದು ಪುನೀತ್ ರಾಜ್‌ಕುಮಾರ್ ಅವರ ಅಭಿಮಾನಿಗಳು ಉತ್ತಮವಾದ ಕೆಲಸ ಮಾಡುತ್ತಿದ್ದಾರೆ. ಹೆಣ್ಣು ಹೆತ್ತವರು ವರದಕ್ಷಿಣೆ ಸೇರಿದಂತೆ ವಿವಿಧ ಖರ್ಚುಗಳಿಗೆ ಸಾಕಷ್ಟು ಕಷ್ಟಪಡುತ್ತಾರೆ. ನಮ್ಮ ಮನೆಯಲ್ಲಿ ಅಕ್ಕ–ತಂಗಿಯರ ಮದುವೆ ಮಾಡಿರುವುದರಿಂದ ಅದರ ಅನುಭವ ನನಗಿದೆ. ಆದ್ದರಿಂದ ದುಂದುವೆಚ್ಚ ಮಾಡಿ ಆಡಂಬರದ ಮದುವೆಗಳನ್ನು ಮಾಡಿಕೊಳ್ಳಬೇಡಿ. ಅದರ ಬದಲು ಅದೇ ಹಣವನ್ನು ಜೀವನದ ಏಳಿಗೆಗೆ ಬಳಸಿಕೊಳ್ಳಿ ಎಂದರು.



ನಟ ಡಾ.ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬದ ಅಂಗವಾಗಿ ಪುನೀತ್ ರಾಜ್‌ಕುಮಾರ್ ಸಮಾಜ ಸೇವಾ ಸಮಿತಿ ವತಿಯಿಂದ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಉಚಿತ ಸಾಮೂಹಿಕ ವಿವಾಹದಲ್ಲಿ ನವ ಜೋಡಿಗಳು ನೂತನ ಜೀವನಕ್ಕೆ ಕಾಲಿಟ್ಟರು.

ಈಡಿಗ ಸಮುದಾಯದ ರೇಣುಕಾನಂದ ಸ್ವಾಮೀಜಿ ಮಾತನಾಡಿ, ಅಪ್ಪು ಅವರು ನಮ್ಮ ನೆನಪುಗಳಲ್ಲಿ ಮಾತ್ರವಲ್ಲದೆ, ನಮ್ಮ ಆಲೋಚನೆಗಳು ಹಾಗೂ ನಾವು ಮಾಡುವ ಸತ್ಕಾರ್ಯಗಳಲ್ಲಿಯೂ ನಮ್ಮ ನಡುವೆ ಸದಾ ಜೀವಂತವಾಗಿದ್ದಾರೆ. ಅಪ್ಪು ಅಜರಾಮರ ಎನ್ನುವಂತೆ ಅಪ್ಪು ಹುಟ್ಟುಹಬ್ಬದಂದು ನಡೆಯುವ ಸಾಮಾಜಿಕ ಕಾರ್ಯಗಳಿಗೆ ಲೆಕ್ಕವಿಲ್ಲ ಎಂದರು.

ಪರಸ್ಪರ ಒಬ್ಬರೊಬ್ಬರನ್ನು ಅರ್ಥ ಮಾಡಿಕೊಂಡು ಜೀವನ ನಡೆಸಿ, ದಾಂಪತ್ಯ ಜೀವನವನ್ನು ಮಾದರಿಯಾಗಿ ನಡೆಸುವ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡಬೇಕು ಎಂದು ಕಿವಿಮಾತು ಹೇಳಿದರು.

ವಸ್ತುಪ್ರದರ್ಶನ ಆವರಣದ ಕಾಳಿಂಗರಾವ್ ಸಭಾಂಗಣದಲ್ಲಿ ಅಪ್ಪು ಅಭಿಮಾನಿಗಳು ಸಿದ್ಧಪಡಿಸಿದ ವೇದಿಕೆಯಲ್ಲಿ 9 ಜೋಡಿಗಳು ಹಸೆಮಣೆ ಏರಿದರು. ಶಾಸಕ ಶ್ರೀವತ್ಸ ಮಂಗಳ ಸೂತ್ರ ನೀಡಿ ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಸಮಿತಿ ಅಧ್ಯಕ್ಷ ಎನ್.ರಾಜು, ಈಡಿಗ ಸಮುದಾಯದ ಮುಖಂಡರಾದ ಸಾಧನಹಳ್ಳಿ ನಾರಾಯಣ್, ವಿದ್ಯಾಸಾಗರ್ ಕದಂಬ, ಕೆ.ಎಸ್. ಮುರುಳಿನಾಗರಾಜು ಸರಗೂರು, ಸುರೇಶ್, ಸಿದ್ದಪ್ಪ, ತಮ್ಮಣ್ಣೇಗೌಡ, ಸಿದ್ದಪ್ಪ ರಾಜೀವ್ ನಗರ, ಕೃಷ್ಣಮೂರ್ತಿ, ಎಸ್.ಎ.ಶ್ರೀನಿವಾಸ್,ನಿಧಿ ಚನ್ನಪ್ಪ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಗಂಡ : ನಾನು ದುಬೈಗೆ ಹೋಗ್ತೀನಿ
ಹೆಂಡ್ತಿ : ನಾನು ಬರ್ತೇನೆ ಬಂಗಾರ ತರಬೇಕು
ಗಂಡ : ನಾನು ಲಂಡನ್‌ಗೆ ಹೋಗ್ತೀನಿ
ಹೆಂಡ್ತಿ : ನಾನು ಬರ್ತೇನೆ ಮೇಕಪ್ ಕಿಟ್ ತರಬೇಕು
ಗಂಡ : ನಾನು ನರಕಕ್ಕೇ ಹೋಗ್ತೀನಿ
ಹೆಂಡ್ತಿ : ನಾನು ಬರೋಲ್ಲ ದೇವ್ರು ನನಗೆ ಎಲ್ಲಾ ಕೊಟ್ಟಿದ್ದಾನೆ

ಮೈಸೂರು ಮಿತ್ರ

ಸೋಮವಾರ, 18 ಮಾರ್ಚ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ನಮಗೇನು ಗೊತ್ತಿದೆ ಮತ್ತು ಏನು ಗೊತ್ತಿಲ್ಲ ಎನ್ನುವುದನ್ನು ತಿಳಿದುಕೊಳ್ಳುವುದೇ ನಿಜವಾದ ಜ್ಞಾನ. –ಕನ್‌ಫ್ಯೂಶಿಯಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮನೆ ಮುರಿದರೆ ಕಟ್ಟಬಹುದು,
ಮನ ಮುರಿದರೆ ಕಟ್ಟಬಹುದೇ?

ನಿಮ್ಮ ಪತ್ರಗಳು

■ ವಿದ್ಯುತ್, ನೀರನ್ನು ಪೋಲು ಮಾಡದಿರಿ...

ಮಾನ್ಯರೇ,

ಪರಿಸರ ರಕ್ಷಣೆ ನಮ್ಮ ಆದ್ಯ ಕರ್ತವ್ಯ. ಇದು ಅರ್ಥಪೂರ್ಣವಾಗಿ ಇರಬೇಕಾದರೆ ಮನೆಗಳಿಂದಲೇ ಪರಿಸರ ಸ್ನೇಹಿ ಕೆಲಸಗಳು ಆರಂಭಿಸಬೇಕು .ಇದರ ಮೊದಲ ಹಂತವೇ ವಿದ್ಯುತ್ ಉಳಿಕೆ. ಜೀವನದ ಬಹುತೇಕ ಎಲ್ಲಾ ಕ್ಷೇತ್ರಗಳಲ್ಲಿ ವಿದ್ಯುತ್ ಅತ್ಯಗತ್ಯವಿದೆ. ಎಲ್ಲಾ ಸೌಕರ್ಯಗಳು ಮತ್ತು ಸೇವೆಗಳಿಂದ ಆರಾಮದಾಯಕ ಜೀವನ ನಡೆಸಲು ನಮಗೆ ವಿದ್ಯುತ್ ಬಹುಮುಖ್ಯ.

ಮನೆಗಳಲ್ಲಾಗಲಿ, ಬೀದಿದೀಪಗಳಾಗಲಿ ವಿದ್ಯುತ್ ಅನವಶ್ಯಕವಾಗಿ ಉರಿಯುವುದನ್ನು ನಿಲ್ಲಿಸಬೇಕು .ಹಗಲು ಹೊತ್ತಿನಲ್ಲಿಯೂ ಲೈಟ್‌ಗಳನ್ನು ಆನ್ ಮಾಡುವುದು ಹಾಗೂ ತುಂಬಾ ತಂಪಾಗಿರುವಾಗ ಫ್ಯಾನ್ ಬಳಸುವುದು ಇಂತಹ ಅನಗತ್ಯ ವಿದ್ಯುತ್ ಬಳಕೆಯನ್ನು ತಪ್ಪಿಸಬೇಕು. ಬೆಳಕು ಹಾಗೂ ಗಾಳಿ ಬರಲು ಕಿಟಕಿಗಳನ್ನು ತೆರೆಯಬೇಕು. ಫೋನ್, ಲ್ಯಾಪ್‌ಟಾಪ್ ಸಂಪೂರ್ಣವಾಗಿ ಚಾರ್ಜ್ ಆದ ನಂತರ ಅನ್ ಪ್ಲಗ್ ಮಾಡಲು ಮರೆಯಬಾರದು. ಬೇಸಿಗೆ ಕಾಲದಲ್ಲಿ ನೀರು ಹಾಗೂ ವಿದ್ಯುತ್ ಅಭಾವ ಇರುವುದರಿಂದ ಫ್ಯಾನ್‌ಗಳು, ಲೈಟ್‌ಗಳು, ವಾಷಿಂಗ್ ಮೆಷಿನ್‌ಗಳು, ರೆಫ್ರಿಜಿರೇಟರ್‌ಗಳು, ಟೆಲಿವಿಷನ್‌ಗಳು, ಕಂಪ್ಯೂಟರ್‌ಗಳು, ಗ್ರೈಂಡರ್‌ಗಳನ್ನು ಅವಶ್ಯಕತೆ ಇದ್ದಾಗ ಮಾತ್ರ ಬಳಸಬೇಕು.

ವಿದ್ಯುತ್ ಹಾಗೂ ನೀರು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ನೀರು ಎಲ್ಲಾ ಜೀವಿಗಳಿಗೆ ಅಗತ್ಯವಾದ ವಸ್ತು ಆದ್ದರಿಂದ ನೀರನ್ನು ಜೀವದಾಯಿ ಎನ್ನಲಾಗುತ್ತದೆ. ಭೂಮಿಯ ಶೇ.70ರಷ್ಟು ಭಾಗ ನೀರು ಆವರಿಸಿದ್ದರೂ ಕೂಡ ಬಳಸಲು ಯೋಗ್ಯವಾದದ್ದು ಶೇಕಡ ಮೂರರಷ್ಟು ಮಾತ್ರ. ಉಳಿದದ್ದು ಸಮುದ್ರದ ಉಪ್ಪು ನೀರು. ಹೀಗಿರುವಾಗ ನೀರನ್ನು ಪೋಲು ಮಾಡುವುದು ಎಷ್ಟು ಸರಿ ಎಂಬುದನ್ನು ನಾವೆಲ್ಲರೂ ಯೋಚಿಸಬೇಕಾಗಿದೆ. ನೀರಿನ ಉಳಿತಾಯ ಹಾಗೂ ಮಿತ ಬಳಕೆ ಪ್ರತಿ ನಾಗರಿಕನ ಕರ್ತವ್ಯ. ಮನೆಗಳಲ್ಲಾಗಲಿ, ದೊಡ್ಡ ದೊಡ್ಡ ಕಟ್ಟಡಗಳಲ್ಲಿ ನಾವು ದಿನನಿತ್ಯ ಬಳಕೆಗೆ ನೀರನ್ನು ಬಳಸುತ್ತೇವೆ. ಬಳಸುವ ನೀರನ್ನು ಎಷ್ಟು ಸಾಧ್ಯವೋ ಅಷ್ಟು ಮಿತವಾಗಿ ಬಳಸುವುದನ್ನು ರೂಢಿಸಿಕೊಳ್ಳಬೇಕು.

ಬ್ರಷ್ ಮಾಡುವಾಗ, ಸ್ನಾನ ಮಾಡುವಾಗ, ಪಾತ್ರೆಗಳನ್ನು ತೊಳೆಯುವಾಗ ಟ್ಯಾಪ್ ಆನ್ ಮಾಡಿಕೊಳ್ಳುವ ಅಭ್ಯಾಸ ಕೆಲವರಲ್ಲಿದೆ. ಈ ಕೆಟ್ಟ ಅಭ್ಯಾಸ ನಿಲ್ಲಿಸಿದಲ್ಲಿ ನೀರಿನ ಉಳಿತಾಯ ಸಾಧ್ಯ. ಲೀಕೇಜ್ ಇರುವ ಪೈಪ್, ಟ್ಯಾಪ್‌ಗಳನ್ನು ತಕ್ಷಣದಲ್ಲಿ ಸರಿಪಡಿಸಿಕೊಳ್ಳುವುದು, ಮನೆಗಳಲ್ಲಿ ಶವರ್ ಬಳಕೆ ಕಡಿಮೆ ಮಾಡಿಕೊಳ್ಳುವುದು ಹಾಗೂ ವಾಹನಗಳನ್ನು ತೊಳೆಯುವಾಗ ನೀರನ್ನು ಮಿತವಾಗಿ ಬಳಸುವುದು ಹೀಗೆ ಹತ್ತು ಹಲವಾರು ವಿಧಾನಗಳಿಂದ ನೀರನ್ನು ಉಳಿತಾಯ ಮಾಡಬಹುದಾಗಿದೆ. ವಿದ್ಯುತ್ ಹಾಗೂ ನೀರನ್ನು ವಿವೇಚನೆಯಿಂದ ಬಳಸಿ, ಉಳಿಸಿ. ಭವಿಷ್ಯದ ಅನಾಹುತಗಳನ್ನು ತಪ್ಪಿಸಿ. **–ಕೆಂಡಗಣ್ಣಸ್ವಾಮಿ, ಶಿಕ್ಷಕರು, ಬಿದರಹಳ್ಳಿ ಹುಂಡಿ**

■ ಚಾ.ನಗರ ಕ್ಷೇತ್ರದಿಂದ ಖರ್ಗೆ ಸ್ಪರ್ಧಿಸಲಿ

ಮಾನ್ಯರೆ,

ಚಾಮರಾಜನಗರ ಲೋಕಸಭಾ ಮೀಸಲು ಕ್ಷೇತ್ರದಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಸ್ಪರ್ಧಿಸುವುದು ಸೂಕ್ತ. ಈ ಕ್ಷೇತ್ರ ಗೆಲುವಿಗೂ ಪೂರಕವಾಗಿದೆ. ಜೊತೆಗೆ ಹಿಂದುಳಿದ ಜಿಲ್ಲೆಯ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಈ ಹಿಂದೆ ಆರ್.ಧ್ರುವನಾರಾಯಣ ಮತ್ತು ಶ್ರೀನಿವಾಸ ಪ್ರಸಾದ್‌ರಂತಹ ಘಟಾನುಘಟಿ ನಾಯಕರನ್ನು ಗೆಲ್ಲಿಸಿದಂತಹ ಕ್ಷೇತ್ರ. ಚಾಮರಾಜನಗರದಲ್ಲಿ ವಿಶೇಷವಾಗಿ ಎಲ್ಲ ಸಮುದಾಯದವರು ಪಕ್ಷದ ಬೆಂಬಲಕ್ಕಿದ್ದಾರೆ. ಹೆಚ್ಚಿನದ್ದಾಗಿ ಕಾಂಗ್ರೆಸ್ ಬೆಂಬಲಿತ ಶಾಸಕರೆ ವಿಧಾನಸಭೆಯಲ್ಲಿ ಆಯ್ಕೆಯಾಗಿದ್ದಾರೆ. ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಮತಗಳು ಸಾಕಷ್ಟಿವೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿ ಇರಿಸಿಕೊಂಡು ಚಾಮರಾಜನಗರದಿಂದ ಸ್ಪರ್ಧಿಸಿದರೆ ಗೆಲುವು ನಿಶ್ಚಿತ. ರಾಜ್ಯ ನಾಯಕರು ಇದರ ಬಗ್ಗೆ ಚರ್ಚಿಸಿ ನಿರ್ಧರಿಸುವುದು ಸೂಕ್ತ. ಖರ್ಗೆ ಅಭ್ಯರ್ಥಿಯಾದರೆ ಪ್ರಚಾರಕ್ಕೆ ಬರಬೇಕಿಲ್ಲ. ಪಕ್ಷದ ಶಾಸಕರೇ ನಿಂತು ಗೆಲ್ಲಿಸುತ್ತಾರೆ. ಅಲ್ಲದೆ ಕಳೆದ ಲೋಕಸಭಾ ಚುನಾವಣೆಗೂ ಈ ಚುನಾವಣೆಗೂ ಸಾಕಷ್ಟು ವ್ಯತ್ಯಾಸವಿದೆ ಕಳೆದ ಬಾರಿ ಪ್ರಸಾದ್ ಅವರಿಗೆ ಆದ ಅನ್ಯಾಯದ ವಿರುದ್ಧದ ಮತಗಳು ಅವರ ಗೆಲುವಿಗೆ ಕಾರಣವಾಗಿತ್ತು ಎಂಬುದು ಗಮನಾರ್ಹ. ಈ ಬಾರಿ ಪಕ್ಷ ಮತ್ತು ವ್ಯಕ್ತಿಯ ವರ್ಚಸ್ಸಿನ ಮೇಲೆ ಅವಲಂಬಿತವಾಗಿದೆ.



–ಯದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ

■ ಬೋರ್ಡ್ ಪರೀಕ್ಷೆ; ಸಲ್ಲದ ಗೊಂದಲ...

ಮಾನ್ಯರೆ,

ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಶಾಲೆಗಳ 5, 8 ಹಾಗೂ 9ನೇ ತರಗತಿಗಳಿಗೆ ಬೋರ್ಡ್ ಪರೀಕ್ಷೆ ನಡೆಯುವುದಕ್ಕೆ ಅನುವು ಮಾಡಿಕೊಟ್ಟಿದ್ದ ಹೈಕೋರ್ಟ್ ವಿಭಾಗೀಯ ಪೀಠದ ಮಧ್ಯಂತರ ಆದೇಶವನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಶಿಕ್ಷಣ ಇಲಾಖೆಯು ಇದೀಗ ಬೋರ್ಡ್ ಪರೀಕ್ಷೆಗಳನ್ನು ಮುಂದೂಡಿರುವುದು ಗೊಂದಲಕ್ಕೆ ಕಾರಣವಾಗಿದೆ. ಈ ಬೆಳವಣಿಗೆಯಿಂದ ಶಿಕ್ಷಣ ಇಲಾಖೆಗೆ ಹಿನ್ನಡೆಯಾಗಿದ್ದು ಮಾತ್ರವಲ್ಲ, ಲಕ್ಷಾಂತರ ವಿದ್ಯಾರ್ಥಿಗಳು, ಪಾಲಕರಲ್ಲಿ ಆತಂಕ ಮನೆಮಾಡಿದೆ. ಬೋರ್ಡ್ ಪರೀಕ್ಷೆಗೆ ಸಂಬಂಧಿಸಿದ ಅನಿಶ್ಚಿತ ಸ್ಥಿತಿಯಿಂದ ಮಕ್ಕಳು ರೋಸಿಹೋಗಿದ್ದರೆ. ಇಲಾಖೆಯು ಮಕ್ಕಳ ಮೇಲೆ ಇಂತಹ ಪ್ರಯೋಗ ಮಾಡುವುದನ್ನು ಬಿಟ್ಟು, ಸರಿಯಾದ ಕ್ರಿಯಾಯೋಜನೆ ರೂಪಿಸಿ ಅದರಂತೆ ನಡೆದುಕೊಳ್ಳಬೇಕು. ಈಗಾಗಲೇ ಮುದ್ರಿತವಾದ ಪ್ರಶ್ನೆ ಪತ್ರಿಕೆಯ ವೆಚ್ಚದ ಹೊರೆ ಒಂದೆಡೆಯಾದರೆ, ಮಕ್ಕಳಿಗೆ ಮತ್ತು ಪಾಲಕರಿಗೆ ಮುಂದೇನು ಎಂಬುವುದೇ ದೊಡ್ಡ ಪ್ರಶ್ನೆಯಾಗಿದೆ. ಇಂತಹ ಸಮಸ್ಯೆಗಳಿಗೆ ಇಲಾಖೆ ಸೂಕ್ತ ಪರಿಹಾರ ಕಂಡುಕೊಳ್ಳಬೇಕಿದೆ. **–ಕೆ.ಎಸ್.ಸುರೇಶ್, ಶಿಕ್ಷಕರು, ಕೆ.ಜಿ.ಹಳ್ಳಿ, ಹೆಚ್.ಡಿ.ಕೋಟೆ.**

■ 7ನೇ ವೇತನ ಆಯೋಗದ ಗ್ಯಾರಂಟಿಯೆಂದು!?

ಮಾನ್ಯರೆ,

ಸರ್ಕಾರದ ಮಹತ್ವಾಕಾಂಕ್ಷೆಯ ಗೃಹಜ್ಯೋತಿ, ಗೃಹಲಕ್ಷ್ಮಿ, ಯುವನಿಧಿ, ಶಕ್ತಿ ಯೋಜನೆ, ಅನ್ನಭಾಗ್ಯದಂತಹ **ಪಂಚ** ಗ್ಯಾರಂಟಿಗಳನ್ನು ಪರಿಣಾಮಕಾರಿಯಾಗಿ ಜನತೆಗೆ ತಲುಪಿಸುತ್ತಿರುವ ರಾಜ್ಯ ಸರ್ಕಾರ, ನೌಕರರಿಗೆ 14 ತಿಂಗಳುಗಳು ಕಳೆದರೂ... 7ನೇ ವೇತನದ ಆಯೋಗದ 'ಗ್ಯಾರಂಟಿ' ಜಾರಿಯಾಗದಿರುವುದು ವಿಪರ್ಯಾಸ!


–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

ಭಕ್ತಿ ಎಂಬ ಶಕ್ತಿಯೂ... ದೌರ್ಬಲ್ಯವೂ...!



ದೇವರು ಎಲ್ಲೆಡೆ ಇದ್ದಾನೆ, ಎಲ್ಲರಿಗೂ ಇದ್ದಾನೆ ಎಂಬುದು ನಂಬಿಕೆ. ಈ ನಂಬಿಕೆಯಿಂದ ಮನುಷ್ಯ ನಿತ್ಯವೂ ಜೀವಿಸಬೇಕು. ಹಾಗೆಯೆ ಮತ್ತೊಂದು ನಂಬಿಕೆ ಇರಿಸಿಕೊಳ್ಳಬೇಕು. ಪರಿಶ್ರಮಿಯೊಂದಿಗೆ ದೇವರು ಇರುತ್ತಾನೆ ಎಂಬುದು. ಏಕೆಂದರೆ ಎಷ್ಟೋ ವಿಶೇಷಚೇತನರೂ ಊಹೆಗೂ ಮೀರಿದ ಸಾಧನೆ ಮಾಡಿರುತ್ತಾರೆ. ಅವರಿಗೆ ಇರುವ ದೈಹಿಕ ದೌರ್ಬಲ್ಯವನ್ನು ಶಪಿಸುತ್ತಾ ಕೂರದೆ, ತಮ್ಮ ಕೈಲಾದ ಪ್ರಯತ್ನ ಮಾಡುತ್ತಾ ದೇಹದ ಅಂಗಾಂಗಗಳು ಚೆನ್ನಾಗಿರುವವರು ನಾಚುವಂತಹ ಸಾಧನೆಗಳನ್ನು ಮಾಡಿರುತ್ತಾರೆ. ಕೈ ಇಲ್ಲದವನು ಸಹ ನನ್ನ ಕೈಯಲ್ಲಿ ಆಗದು ಎನ್ನದೆ ಕಾಲಿನಲ್ಲಿ ಆಗುವುದನ್ನು ಮಾಡಿ ಜಯಿಸಿರುತ್ತಾನೆ. ಕೈಗಳು ಇರುವ ಪುಣ್ಯಾತ್ಮ ದೇವರಿಗೆ ಸದಾ ನಮಿಸುತ್ತಾ, ಇರುವ ಕೈಗಳಲ್ಲಿ ಕೆಲಸ ಮಾಡದೆ ಭಕ್ತಿಯನ್ನು ದೌರ್ಬಲ್ಯ ಮಾಡಿಕೊಂಡು ಜೀವನವಿಡೀ ನರಳುವಂತೆ ಬದುಕನ್ನು ಮಾಡಿಕೊಂಡಿರುತ್ತಾನೆ.

'ಭಕ್ತಿ ಎಂಬುದು ಶಕ್ತಿಯೂ ಹೌದು, ದೌರ್ಬಲ್ಯವೂ ಹೌದು' ಎಂದು ಪ್ರಪಂಚ ಕಂಡ ಅಪರೂಪದ ಸಂತ ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಈ ಮಾತನ್ನು ಅವಲೋಕಿಸಿದಾಗ ವಿವೇಕಾನಂದರು ಜನರ ನಾಡಿಮಿಡಿತವನ್ನು ಅರಿತೇ ಹೀಗೆ ಉದ್ಗರಿಸಿರಬಹುದು ಎನಿಸುತ್ತದೆ. ಸ್ವಾಮಿ ವಿವೇಕಾನಂದರ ಮತ್ತೊಂದು ಮಾತು ಈ ಮಾತಿಗೆ ಪೂರಕವಾಗಿದೆ, ಅದೇನೆಂದರೆ 'ಶಕ್ತಿಯೇ ಜೀವನ, ದೌರ್ಬಲ್ಯವೇ ಮರಣ' ಎಂಬುದು. ಹೌದು ಯಾರು ಭಕ್ತಿಯನ್ನು ಶಕ್ತಿಯಾಗಿ ಪರಿಗಣಿಸುತ್ತಾರೋ ಅವರಿಗೆ ಬದುಕು ಚೇತೋಹಾರಿಯಾಗಿರುತ್ತದೆ. ಯಾರು ಭಕ್ತಿಯನ್ನು ದೌರ್ಬಲ್ಯವಾಗಿಸಿಕೊಳ್ಳುತ್ತಾರೋ ಅವರು ನಿತ್ಯವೂ ಸಾಯುತ್ತಲೇ ಇರುತ್ತಾರೆ ಎನ್ನಬಹುದು. ಭಕ್ತಿಯು ಶಕ್ತಿಯಾದರೆ ಸಾಧನೆಯ ಸೌಧಗಳು ನಿರ್ಮಾಣವಾಗುತ್ತವೆ, ಅದೇ ಭಕ್ತಿ ದೌರ್ಬಲ್ಯವಾದರೆ ಸಮಾಧಿಗಳು ನಿರ್ಮಾಣವಾಗುತ್ತವೆ ಅಷ್ಟೆ. ಭಕ್ತಿಯ ಪರಾಕಾಷ್ಠೆಯೇ ಅಂತದ್ದು, ಅದು ಅಸಾಧ್ಯವಾದುದ್ದನ್ನು ಸಾಧ್ಯವಾಗಿಸಿಬಿಡುತ್ತದೆ.

ನಮ್ಮ ದೇಶದಲ್ಲಿ ಮುಗಿಲೆತ್ತರಕ್ಕೆ ನಿರ್ಮಾಣಗೊಂಡಿರುವ ದೇವಾಲಯಗಳನ್ನು ಕಂಡಾಗ ಭಕ್ತಿಯ ಶಕ್ತಿ ಅರ್ಥವಾಗುತ್ತದೆ. ರಾಜಮಹಾರಾಜರುಗಳು ನೂರಾರು ವರ್ಷಗಳ ಹಿಂದೆಯೇ, ಇಂದಿನ ತಾಂತ್ರಿಕ ವ್ಯವಸ್ಥೆ ಇಲ್ಲದ ಕಾಲದಲ್ಲಿಯೇ ಬೃಹತ್ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಅವುಗಳನ್ನು ಕಂಡಾಗ ಇದು ಮನುಷ್ಯನಿಂದ ಸಾಧ್ಯವೇ ಎಂದು ಆಶ್ಚರ್ಯವಾಗುತ್ತದೆ. ದೇವಸ್ಥಾನಗಳನ್ನು ನಿರ್ಮಾಣ ಮಾಡಿರುವ ಶಿಲ್ಪಿಗಳು, ಕೆಲಸಗಾರರು ದೈವಕೃಪೆಯನ್ನು ನಂಬಿದ ಕಾರಣಕ್ಕೆ ಇಂತಹ ಅಪರೂಪದ ದೇವಾಲಯಗಳು ನಿರ್ಮಾಣವಾಗಲು ಸಾಧ್ಯವಾಗಿದೆ. ಅವರುಗಳಿಗೆ ಭಕ್ತಿ ಒಂದು ದೌರ್ಬಲ್ಯವಾಗಿದ್ದರೆ ಅಂತಹ ದೊಡ್ಡ ಕಲ್ಪನೆಯೇ ಬರುತ್ತಿರಲಿಲ್ಲವೇನೋ? ಭಕ್ತಿಯನ್ನು ಶಕ್ತಿಯಾಗಿಸಿಕೊಂಡವರು ಅನನ್ಯವಾದುದನ್ನು ಸಾಧಿಸುತ್ತಾರೆ, ದೌರ್ಬಲ್ಯ ಹೊಂದಿರುವವರು ಅಲ್ಪತೃಪ್ತರು.

ಮನುಷ್ಯನ ಪ್ರಯತ್ನದ ಮುಂದೆ ಬೇರಾವ ಶಕ್ತಿಯೂ ಇಲ್ಲ ಎನ್ನಬಹುದು. ಶೇ.90 ಪ್ರಯತ್ನ ಮಾಡಿ ಉಳಿದ ಶೇ.10 ಭಕ್ತಿಯಿಂದ ದೇವರನ್ನು ಬೇಡಿದರೆ ಮತ್ತಷ್ಟು ಶಕ್ತಿ ಉದ್ದೀಪನಗೊಂಡು ಆಗುವ ಕೆಲಸದಲ್ಲಿ ವೇಗ ಹೆಚ್ಚಾಗಿ ಅಚ್ಚರಿ ಎನ್ನುವಂತಹ ಫಲಿತಾಂಶ ಲಭಿಸುತ್ತದೆ. ಅದಬಿಟ್ಟು ಶೇ.10 ರಷ್ಟೂ ಪ್ರಯತ್ನಿಸದೆ, ದೇವರನ್ನು ನಂಬಿದ್ದೇನೆ, ದೇವರ ಮೇಲೆ ಭಾರ ಹಾಕಿದ್ದೇನೆ, ದೇವರಿಗೆ ತಿಳಿಯದೆ?, ಎಲ್ಲವನ್ನೂ ಅವನೇ ಮಾಡುತ್ತಾನೆ ಎಂದು ಭಜಿಸುತ್ತಾ ಕುಳಿತರೆ ಆಗುವ ಕೆಲಸವು ಆಗದು. ಭಕ್ತಿಯು ಶಕ್ತಿಯಾಗಿ ಗೋಚರಿಸುವುದು ವ್ಯಕ್ತಿಯು ಪ್ರಾಮಾಣಿಕವಾಗಿ, ನಿಷ್ಠೆಯಿಂದ, ಶ್ರದ್ಧೆಯಿಂದ ತಾನು ಮಾಡುವ ಕೆಲಸವನ್ನು ಮಾಡಿದಲ್ಲಿ ದೇವರು ಅವನ ಪರ ಸದಾ ಇರುತ್ತಾನೆ. ಅವನಿಗೆ ಮತ್ತಷ್ಟು ಶಕ್ತಿ ತುಂಬುತ್ತಾನೆ. ದೇವರ ಮೇಲೆ ಭಾರ ಹಾಕಿದ್ದೇನೆ ಎಂಬುದು ದೌರ್ಬಲ್ಯದ ಸಂಕೇತ. ಎಲ್ಲವನ್ನೂ ದೇವರಿಗೆ ಬಿಟ್ಟು ಸೋಮಾರಿತನದಿಂದ ವರ್ತಿಸಿದರೆ ದೇವರು ಯಾವ ಕಾರಣಕ್ಕೂ ಆಶೀರ್ವದಿಸಲಾರ, ಶಕ್ತಿ ತುಂಬಲಾರ.

ಪ್ರತಿಯೊಬ್ಬ ಸಾಧಕ ವ್ಯಕ್ತಿಯ ಹಿಂದೆ ಅನೇಕ ವರ್ಷಗಳ ತ್ಯಾಗ, ಪರಿಶ್ರಮ ಅಡಗಿರುತ್ತದೆ. ಅದನ್ನು ಅರಿಯದೆ ಕೇವಲ ಅದೃಷ್ಟದಿಂದ ಅವರು ಸಾಧನೆ ಮಾಡಲು ಸಾಧ್ಯವಾಗಿದೆ ಎಂದು ಭಾವಿಸುವುದು ಮೂರ್ಖತನ. 'ಸಂಕಟ ಬಂದಾಗ ವೆಂಕಟರಮಣ' ಎಂಬ ಗಾದೆ ಮಾತಿನಂತೆ ವಿದ್ಯಾರ್ಥಿಗಳಿಗೆ ಪರೀಕ್ಷೆಗಳು ಹತ್ತಿರವಾದಾಗ ದೇವರ ಕುರಿತು ಇನ್ನಿಲ್ಲದ ಭಕ್ತಿ ಮೂಡುತ್ತದೆ. ದೇವರಿಗೆ ಪೂಜೆ ಸಲ್ಲಿಸಿದ ಮಾತ್ರಕ್ಕೆ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಲು ಸಾಧ್ಯವಿಲ್ಲ. ಇಡೀ ವರ್ಷ ಕಷ್ಟಪಟ್ಟು ಓದಿ ನಂತರ ದೇವರು ನನ್ನನ್ನು ಕೈಬಿಡುವುದಿಲ್ಲ ಎಂದು ನಂಬಿದರೆ ಕೆಲವೊಮ್ಮೆ ಮರೆತು ಹೋಗಿದ್ದ ಉತ್ತರಗಳು ಹೊಳೆಯುತ್ತವೆ. ಪುಸ್ತಕವನ್ನೆ ತೆರೆಯದೆ ಪರೀಕ್ಷಾ ದಿನ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ದೇವರು ನನ್ನ ಕೈಯಲ್ಲಿ ಪರೀಕ್ಷೆ ಬರೆಯಿಸುತ್ತಾನೆ ಎಂದು ನಂಬುವುದು ಮೂರ್ಖತನದ ಪರಮಾವಧಿ. ಎಷ್ಟೋ ವಿದ್ಯಾರ್ಥಿಗಳು ಅರ್ಥವಿಲ್ಲದ ಪೂಜೆ ಮಾಡುವ ಬದಲು, ದೇವರಿಗೆ ನಮಿಸಿ ಉಳಿದ ಸಮಯ ಅಭ್ಯಾಸದಲ್ಲಿ ತೊಡಗಿಸಿಕೊಂಡರೆ ಅವರು ಉತ್ತಮ ಅಂಕ ಗಳಿಸುವ ಸಾಧ್ಯತೆ ಇರುತ್ತದೆ.

ಭಕ್ತಿ ಎಂಬುದು ಶಕ್ತಿ ಅಥವಾ ದೌರ್ಬಲ್ಯವಾಗುವುದರಲ್ಲಿ ಪೋಷಕರ ಪಾತ್ರ ಹೆಚ್ಚಾಗಿದೆ. ಮಕ್ಕಳಿಗೆ ಬಾಲ್ಯದಿಂದಲೇ ದೇವರ ಕುರಿತು ಧನಾತ್ಮಕವಾದ ಆಲೋಚನೆಗಳನ್ನು ಮೂಡಿಸುವ ಬದಲು ಋಣಾತ್ಮಕವಾದ ಚಿಂತನೆಗಳನ್ನು ಮನಸ್ಸಿಗೆ ತುಂಬುತ್ತಾರೆ. ಕೆಲವು ಮಕ್ಕಳು ಬೆಳೆಯುತ್ತಾ ದೇವರ ಕುರಿತು ಅಗತ್ಯ ನಂಬಿಕೆಯನ್ನು ಇರಿಸಿ ತಾವು ಮಾಡಬೇಕಾದ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತಾರೆ. ಉಳಿದ ಮಕ್ಕಳು ಭಕ್ತಿಯೆಂಬುದನ್ನೇ ಒಂದು ದೌರ್ಬಲ್ಯವಾಗಿಸಿಕೊಂಡು, ಗೀಳಾಗಿಸಿಕೊಂಡು ದಾರಿಯುದ್ದಕ್ಕೂ ಕಂಡ ಕಂಡ ಗುಡಿಗಳಿಗೆ ನಮಸ್ಕರಿಸುವ, ಶ್ರದ್ಧೆಯಿಂದ ಪೂಜೆ ಮಾಡುವ ಪರಿಪಾಠ ಹೊಂದಿರುತ್ತಾರೆ. ಆದರೆ ಪೂಜೆ ಮಾಡುವಷ್ಟು ಶ್ರದ್ಧೆಯಿಂದ ಅವರು ಮಾಡುವ ಕೆಲಸವನ್ನು ಮಾಡದೇ ಇರುವುದರಿಂದ ಅವರಿಗೆ ಬದುಕಿನಲ್ಲಿ ಸೋಲುಂಟಾಗುತ್ತದೆ. ಈ ರೀತಿಯ ಭಕ್ತಿಯನ್ನು ಕಂಡು ಶರಣರು ಹನ್ನೆರಡನೇ ಶತಮಾನದಲ್ಲಿಯೇ 'ಕಾಯಕವೇ ಕೈಲಾಸ' ಎಂಬ ಮಾತನ್ನು ತಮ್ಮ ವಚನದಲ್ಲಿ ಹೇಳಿದ್ದಾರೆ. ತಾವು ಮಾಡುವ ವೃತ್ತಿ, ಕಸುಬನ್ನು ದೇವರೆಂದು ನಂಬಿ ಪ್ರಾಮಾಣಿಕವಾಗಿ ಮಾಡಿದರೆ ಅದು ಎಂದಿಗೂ ಕೈಬಿಡದು. ಕಸುಬನ್ನು ದೇವರಂತೆ ಕಾಣುವವನು ಕಲ್ಲನ್ನು ದೇವರಂತೆ ಕಾಣಬೇಕು, ಕಸುಬನ್ನು ಕಸಕ್ಕಿಂತ ಕಡೆಯಾಗಿ ಕಂಡು ಕೇವಲ ಕಲ್ಲು ದೇವರನ್ನೇ ನೆಚ್ಚಿ ಕೂತರೆ ಅನ್ನ ತಿನ್ನುವ ಬದಲು ಮಣ್ಣನ್ನು ತಿನ್ನಬೇಕಾಗುತ್ತದೆ.

ಪ್ರತಿಯೊಬ್ಬ ಮನುಷ್ಯನ ಮನಸ್ಸು ಭಿನ್ನಭಿನ್ನವಾಗಿರುತ್ತದೆ. ಅವರವರ ಮನೋಸ್ಥೈರ್ಯದ ಮೇಲೆ ದೇವರ ಮೇಲಿನ ನಂಬಿಕೆ ಅವಲಂಬಿಸಿರುತ್ತದೆ. ಎಷ್ಟೋ ಜನ ನಾಸ್ತಿಕರ ಬದುಕು ಆಸ್ತಿಕರಿಗಿಂತ ಉತ್ತಮವಾಗಿರುತ್ತದೆ. ಅದನ್ನು ಕಂಡು ಆಸ್ತಿಕರು ಆಶ್ಚರ್ಯಪಡುತ್ತಾರೆ. ಅಷ್ಟೇ ಅಲ್ಲ ಅವರು ನಂಬಿದ ದೈವವನ್ನು ನಿಂದಿಸುತ್ತಾರೆ ಕೂಡ. ನಾಸ್ತಿಕರು ದೇವರನ್ನು ನಂಬದಿದ್ದರೆ ಏನಂತೆ ಅವರು ತಾವು ಮಾಡುವ ಕೆಲಸವನ್ನು ನಂಬುತ್ತಾರೆ. ತಮ್ಮ ಕೆಲಸ ತನ್ನ ಕುಟುಂಬದ ಹೊಣೆ ಹೊತ್ತಿದೆ ಎಂದು ಭಾವಿಸುತ್ತಾರೆ. ಯಾವ ಕೆಲಸವನ್ನು ಮಾಡದೆ ಕುಟುಂಬದ ಹೊಣೆಯನ್ನು ದೇವರ ಮೇಲೆ ಹೊರಿಸಿದರೆ, ಸೋಮಾರಿ ಆಸ್ತಿಕರ ಈ ಹೊರೆಯನ್ನು ದೇವರು ತಾನೆ ಎಷ್ಟು ಹೊರಬಲ್ಲ ! ಅಲ್ಲವೇ?

ದೈವ ಮನುಷ್ಯನನ್ನು ಹಿಂದಿನಿಂದ ಸಪೋರ್ಟ್ ಮಾಡುತ್ತದೆಯೇ ಹೊರತು ಅದೇ ಮುಂದೆ ಹೋಗಿ ಮನುಷ್ಯನನ್ನು ಸಾಧನೆಯೆಡೆಗೆ ಎಳೆದೊಯ್ಯುವುದಿಲ್ಲ. 'ಮಂತ್ರಕ್ಕೆ ಮಾವಿನಕಾಯಿ ಬೀಳುವುದಿಲ್ಲ' ಎಂಬ ನಾಣ್ನುಡಿ ಒಂದಿದೆ. ಈ ಮಾತಿನಂತೆ ಕೇವಲ ಸದಾ ದೇವರ ಪೂಜೆ ಮಾಡುವುದೇ ಕಾಯಕವಾಗಬಾರದು. ಕಾಯಕವೇ ದೇವರ ಪೂಜೆಯಾಗಬೇಕು. 'ದುಡಿದು ಕೆಟ್ಟವರಿಲ್ಲ, ಆದರೆ ಕುಳಿತು ಕೆಟ್ಟವರುಂಟು'. ಬೇರೆ ಪ್ರಾಣಿಪಕ್ಷಿಗಳಿಗೆ ಹೋಲಿಸಿಕೊಂಡರೆ ಮನುಷ್ಯನಲ್ಲಿ ಅಗಾಧವಾದ ಬುದ್ಧಿಶಕ್ತಿ ಇದೆ. ತನ್ನಲ್ಲಿರುವ ಬುದ್ಧಿಶಕ್ತಿಯನ್ನು ಅರಿಯದೆ, ಅಡ್ಡದಾರಿಯಲ್ಲಿ ಸುಲಭವಾಗಿ ಸಾಧನೆ ಮಾಡಬೇಕೆಂಬ ಹುಚ್ಚು ಆಸೆಯಿಂದ ಭಕ್ತಿಯನ್ನು ಶಕ್ತಿಯನ್ನಾಗಿಸುವ ಬದಲು ದೌರ್ಬಲ್ಯವನ್ನಾಗಿಸಿಕೊಳ್ಳುವುದು ದಡ್ಡತನ.

ಇಂದು ನಿಜಭಕ್ತಿ ಎಂಬುದು ಕಾಣೆಯಾಗುತ್ತಿದೆ. ಎಲ್ಲೆಡೆ ತೋರಿಕೆಯ ಭಕ್ತಿ, ಡಾಂಭಿಕ ಭಕ್ತಿ ರಾರಾಜಿಸುತ್ತಿದೆ. ದೇವರಿಗೆ ತೋರುವ ಭಕ್ತಿಯು ಜನರಿಗೆ ತೋರ್ಪಡಿಸುವ ಭಕ್ತಿಯಾಗಬಾರದು. ಅದೂ ಕೂಡ ಒಂದು ದೌರ್ಬಲ್ಯವೇ ಸರಿ. ವೈದ್ಯರೊಬ್ಬರು ತಾವು ರೋಗಿಗಳಿಗೆ ನೀಡುವ ಚಿಕಿತ್ಸೆಯೇ ದೇವರ ಪೂಜೆ ಎಂದು ಭಾವಿಸಿದರೆ ಖಂಡಿತಾ ದೇವರು ವೈದ್ಯರಲ್ಲಿ ಒಂದು ಶಕ್ತಿಯಾಗಿ ಪರಿಣಮಿಸುತ್ತಾನೆ. ಚಿಕಿತ್ಸೆಯನ್ನೇ ನೀಡದೆ ದೇವರು ನಿಮ್ಮನ್ನು ಕಾಪಾಡಬೇಕು ಎಂದು ಕೈಚೆಲ್ಲಿದರೆ ರೋಗಿ ಹೋಗುವುದಾದರೂ ಎಲ್ಲಿಗೆ ? ರೋಗಿಗೆ ಆ ಸಂದರ್ಭದಲ್ಲಿ ವೈದ್ಯರೇ ದೇವರು, ವೈದ್ಯರಿಗೆ ಶುಲ್ಕ ನೀಡುವ ರೋಗಿಯೇ ದೇವರು.

ಇಂದು ಭಕ್ತಿಯ ಹೆಸರಿನಲ್ಲಿ ಅನೇಕ ರೀತಿಯ ದಂಧೆಗಳು ನಡೆಯುತ್ತಿವೆ. ಜನರನ್ನು ಜಾಗೃತಗೊಳಿಸಿ ಅವರನ್ನು ಇಂದಿನ ಪ್ರಪಂಚಕ್ಕೆ ಅಣಿಯಾಗಿಸುವ ಬದಲು ಅವರಲ್ಲಿ ಮೌಢ್ಯತೆಯನ್ನೇ ಹೆಚ್ಚಾಗಿ ಬಿತ್ತುವ ಕೆಲಸವನ್ನು ಟಿ.ವಿ.ಶೋಗಳಲ್ಲಿ ಜ್ಯೋತಿಷಿಗಳು ಮಾಡುತ್ತಿದ್ದಾರೆ. ಮನುಷ್ಯನಿಗೆ ಭಯ ಉಂಟು ಮಾಡಿದರೆ ಅವನಿಗೆ ಭಕ್ತಿ ಎಂಬುದು ಒಂದು ದೌರ್ಬಲ್ಯವಾಗಿ, ಗೀಳಾಗಿ ಪರಿಣಮಿಸುತ್ತದೆ. ಮತ್ತೆ ಮತ್ತೆ ಅವರು ಜ್ಯೋತಿಷಿಗಳನ್ನು ಎಡತಾಕುತ್ತಾರೆ. ಅನೇಕ ಪರಿಹಾರ ಪೂಜೆಗಳನ್ನು ಮಾಡುತ್ತಾರೆ. ಅದರಿಂದ ಜ್ಯೋತಿಷಿಗಳು ಉದ್ಧಾರವಾಗುತ್ತಾರೆಯೇ ಹೊರತು ಪೂಜೆ ಮಾಡಿದವರಲ್ಲ. ಎಲ್ಲದಕ್ಕೂ ಒಂದು ಇತಿಮಿತಿ ಇರುವಂತೆ ಭಕ್ತಿಗೂ ಒಂದು ಮಿತಿ ಹೇರಿಕೊಳ್ಳಬೇಕು. ವೈಚಾರಿಕ ಮನೋಭಾವದಿಂದ ಎಲ್ಲವನ್ನೂ ನೋಡಬೇಕು. ಅನೇಕ ಶಿಕ್ಷಿತರೇ ಮೌಢ್ಯತೆಯ ಮೊರೆಹೋಗಿ ಅರ್ಥವಿಲ್ಲದ ಆಚರಣೆ ಮಾಡುತ್ತಿರುವುದು ಅವಿದ್ಯಾವಂತರಿಗೆ ಉತ್ತೇಜನ ನೀಡಿದಂತಾಗುತ್ತದೆ.

ನ್ಯಾಯ, ನೀತಿ, ಧರ್ಮ ಎಂದು ಬದುಕುವವನಿಗೆ ಭಕ್ತಿ ಒಂದು ಶಕ್ತಿಯೇ ಸರಿ. ಆದರೆ ಅನ್ಯಾಯ, ಅನೀತಿ, ಅಧರ್ಮ ಪಾಲಿಸುವವನಿಗೆ ಭಕ್ತಿ ಒಂದು ದೌರ್ಬಲ್ಯ. ಅವನು ತಾನು ಮಾಡಿದ ಪಾಪ ಕಾರ್ಯಗಳಿಂದ ಮುಕ್ತಿ ಪಡೆಯಲು, ಪಾಪಪ್ರಜ್ಞೆಯಿಂದ ಹೊರಬರಲು ಅನೇಕ ಪುಣ್ಯಕ್ಷೇತ್ರಗಳಿಗೆ ಭೇಟಿ ಕೊಡುತ್ತಾನೆ. ನದಿಗಳಲ್ಲಿ ಪುಣ್ಯಸ್ನಾನ ಮಾಡುತ್ತಾನೆ. ಮಾಡಬಾರದ ಪಾಪ ಮಾಡಿ ಮಾಡಬಾರದ ಪೂಜೆ ಮಾಡಿದರೆ ಅವನನ್ನು ದೇವರು ಮೆಚ್ಚಲು ಸಾಧ್ಯವೇ? ಬಸವಣ್ಣನವರ ಈ ವಚನ ಇಲ್ಲಿ ಉಲ್ಲೇಖನೀಯ. 'ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿಭೋ, ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ, ಆಚಾರವೇ ಸ್ವರ್ಗ, ಅನಾಚಾರವೇ ನರಕ, ಕೂಡಲಸಂಗಮದೇವಾ ನೀವೇ ಪ್ರಮಾಣು' ಎಂದು ಹೇಳಿರುವುದು ಮಾರ್ಮಿಕವಾಗಿದೆ.

ದೇವರು ಎಲ್ಲೆಡೆ ಇದ್ದಾನೆ, ಎಲ್ಲರಿಗೂ ಇದ್ದಾನೆ ಎಂಬುದು ನಂಬಿಕೆ. ಈ ನಂಬಿಕೆಯಿಂದ ಮನುಷ್ಯ ನಿತ್ಯವೂ ಜೀವಿಸಬೇಕು. ಹಾಗೆಯೆ ಮತ್ತೊಂದು ನಂಬಿಕೆ ಇರಿಸಿಕೊಳ್ಳಬೇಕು. ಪರಿಶ್ರಮಿಯೊಂದಿಗೆ ದೇವರು ಇರುತ್ತಾನೆ ಎಂಬುದು. ಏಕೆಂದರೆ ಎಷ್ಟೋ ವಿಶೇಷ ಚೇತನರೂ ಊಹೆಗೂ ಮೀರಿದ ಸಾಧನೆ ಮಾಡಿರುತ್ತಾರೆ. ಅವರಿಗೆ ಇರುವ ದೈಹಿಕ ದೌರ್ಬಲ್ಯವನ್ನು ಶಪಿಸುತ್ತಾ ಕೂರದೆ, ತಮ್ಮ ಕೈಲಾದ ಪ್ರಯತ್ನ ಮಾಡುತ್ತಾ ದೇಹದ ಅಂಗಾಂಗಗಳು ಚೆನ್ನಾಗಿರುವವರು ನಾಚುವಂತಹ ಸಾಧನೆಗಳನ್ನು ಮಾಡಿರುತ್ತಾರೆ. ಕೈ ಇಲ್ಲದವನು ಸಹ ನನ್ನ ಕೈಯಲ್ಲಿ ಆಗದು ಎನ್ನದೆ ಕಾಲಿನಲ್ಲಿ ಆಗುವುದನ್ನು ಮಾಡಿ ಜಯಿಸಿರುತ್ತಾನೆ. ಕೈಗಳು ಇರುವ ಪುಣ್ಯಾತ್ಮ ದೇವರಿಗೆ ಸದಾ ನಮಿಸುತ್ತಾ, ಇರುವ ಕೈಗಳಲ್ಲಿ ಕೆಲಸ ಮಾಡದೆ ಭಕ್ತಿಯನ್ನು ದೌರ್ಬಲ್ಯ ಮಾಡಿಕೊಂಡು ಜೀವನವಿಡೀ ನರಳುವಂತೆ ಬದುಕನ್ನು ಮಾಡಿಕೊಂಡಿರುತ್ತಾನೆ.

ಪದ ತಾಂಬೂಲ:

ಕೈಕೆಸರು ಮಾಡಿಕೊಂಡವನಿಗೆ ಭಕ್ತಿಯೇ ವರ,
ಕೈಕಟ್ಟಿ ಕುಳಿತವನಿಗೆ ಭಕ್ತಿಯೇ ಶಾಪ.

ಕಲಾವಿದರಾದ ಶೈಲಜಾ, ಉದಯಕುಮಾರ್ ಹೆಜ್ಜೆಗೆಜ್ಜೆಗೆ 'ರೋಟರಿ–ಕದಂಬ ರಂಗಪ್ರಶಸ್ತಿ'



ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ 'ರೋಟರಿ–ಕದಂಬ ರಂಗಪ್ರಶಸ್ತಿ'ಯನ್ನು ರಂಗಭೂಮಿ ಕಲಾವಿದೆ ಶೈಲಜಾ, ವೃತ್ತಿ ಕಲಾವಿದ ಉದಯ ಕುಮಾರ್ ಗೆಜ್ಜೆಹೆಜ್ಜೆ ಅವರಿಗೆ ಹಿರಿಯ ನಟಿ ಗಿರಿಜಾ ಲೋಕೇಶ್ ಪ್ರದಾನ ಮಾಡಿದರು.

ಮೈಸೂರು, ಮಾ.17(ಎಸ್‌ಪಿಎನ್)– ಈ ಸಾಲಿನ 'ರೋಟರಿ–ಕದಂಬ ರಂಗ ಪ್ರಶಸ್ತಿ'ಯನ್ನು ರಂಗಭೂಮಿ ಕಲಾವಿದೆ ಶೈಲಜಾ, ವೃತ್ತಿ ಕಲಾವಿದ ಉದಯಕುಮಾರ್ ಗೆಜ್ಜೆಹೆಜ್ಜೆ ಅವರಿಗೆ ಹಿರಿಯ ನಟಿ ಗಿರಿಜಾ ಲೋಕೇಶ್ ಪ್ರದಾನ ಮಾಡಿದರು.

ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ರೋಟರಿ ಮೈಸೂರು ಉತ್ತರ ಹಾಗೂ ಕದಂಬ ರಂಗವೇದಿಕೆ ಸಹಯೋಗದೊಂದಿಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ರಂಗಭೂಮಿ ಕಲಾವಿದರನ್ನು ಗುರುತಿಸುವ ಕೆಲಸ ಸಂಘ–ಸಂಸ್ಥೆಗಳಿಂದಾಗಬೇಕು. ಇದರಿಂದ ಸಮಾಜದಲ್ಲಿ ರಂಗಭೂಮಿ ಬಗ್ಗೆ ಉತ್ತಮ ಪ್ರತಿಕ್ರಿಯೆ ದೊರೆಯುತ್ತದೆ. ಹಾಗಾಗಿ ಕಿರಿಯ ಕಲಾವಿದರು ರಂಗಭೂಮಿಯಲ್ಲಿ ತೊಡಗಿಸಿಕೊಳ್ಳಬೇಕಾದರೆ, ಇಂತಹ ಸಮಾರಂಭಗಳು ಅಗತ್ಯ ಎಂದು ಗಿರಿಜಾ ಲೋಕೇಶ್ ತಿಳಿಸಿದರು.

ನಾನು ಕಳೆದ 60 ವರ್ಷಗಳಿಂದ ರಂಗಭೂಮಿ ಕಲಾವಿದರನ್ನು ಒಂದಿಲ್ಲೊಂದು ಕಾರ್ಯಕ್ರಮಗಳಲ್ಲಿ ಭೇಟಿಯಾಗುತ್ತಿರುತ್ತೇನೆ. ಅದೇ ರೀತಿ ಕದಂಬ ರಂಗ ವೇದಿಕೆ ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ನೇತೃತ್ವದಲ್ಲಿ ಆಯೋಜಿಸಿರುವ ಈ ಸಮಾರಂಭ ಸೇರಿದಂತೆ ಹಲವು 4 ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ ಎಂದರು.

ನಮ್ಮ ಕಾಲಘಟ್ಟದಲ್ಲಿ ರಂಗಭೂಮಿಯಲ್ಲಿ ತೊಡಗಿಸಿಕೊಳ್ಳಲು ಯುವಕ–ಯುವತಿಯರು ನಾನಾ ಕಾರಣಗಳಿಗೆ ಹಿಂದೇಟು ಹಾಕುತ್ತಿದ್ದರು. ಆದರೆ, ಈಗಿನ ಪರಿಸ್ಥಿತಿ ಬೇರೆಯೇ ಇದ್ದು, ಯುವ ಸಮೂಹ ರಂಗಭೂಮಿಯಲ್ಲಿ ತೊಡಗಿಸಿಕೊಳ್ಳಲು ಆಸಕ್ತಿ ತೋರುತ್ತಿದ್ದಾರೆ. ಹಾಗಾಗಿ ಕಲೆಯನ್ನು ಗೌರವಿಸುವ ಜೊತೆಗೆ ಕಲಾವಿದರನ್ನು ಗೌರವಿಸುತ್ತಿರುವ ಕದಂಬ ರಂಗ ವೇದಿಕೆ ಹಾಗೂ ರೋಟರಿ ಮೈಸೂರು ಉತ್ತರ ಪದಾಧಿಕಾರಿಗಳ ಕಾರ್ಯ ಉತ್ತಮ ಎಂದು ಬಣ್ಣಿಸಿದರು.

ಪ್ರಶಸ್ತಿ ಸ್ವೀಕರಿಸುತ್ತಿರುವ ಕಲಾವಿದೆ ಶೈಲಜಾ ಅವರು, ಯಯಾತಿ, ಓ ದೇವರೇ ಇವರನ್ನು ಕ್ಷಮಿಸು, ದುರ್ಗಾಸ್ತಮಾನ, ಕೃಷ್ಣದೇವರಾಯ ಸೇರಿದಂತೆ ಅನೇಕ ನಾಟಕಗಳಲ್ಲಿ ನಟಿಸಿದ್ದಾರೆ. ಉದಯಕುಮಾರ್ ಗೆಜ್ಜೆಹೆಜ್ಜೆ, ಮಿತ್ರ ರಮಾನಂದ ಜೊತೆಗೂಡಿ 3600 ಬೀದಿನಾಟಕಗಳನ್ನು ಪ್ರದರ್ಶಿಸಿದ್ದಾರೆ. ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಈ ವೇದಿಕೆಯಲ್ಲಿ ಕಿರಿಯ–ಹಿರಿಯ ಕಲಾವಿದರನ್ನು ಗುರುತಿಸಿ ಪ್ರಶಸ್ತಿಯನ್ನು ನೀಡುತ್ತಿರುವುದು ಸಂತೋಷದ ಸಂಗತಿ ಎಂದರು. ವೇದಿಕೆಯಲ್ಲಿ ವಲಯ–08ರ ಸಹಾಯಕ ಗವರ್ನರ್ ರೊ.ಎಂ.ಕೆ. ನಂಜಯ್ಯ, ಕದಂಬ ರಂಗವೇದಿಕೆ ಅಧ್ಯಕ್ಷ ರೊ.ರಾಜ ಶೇಖರ ಕದಂಬ, ರೋಟರಿ ಮೈಸೂರು ಉತ್ತರ ಅಧ್ಯಕ್ಷ ರೊ.ಶ್ರೀಧರ್, ಕಾರ್ಯದರ್ಶಿ ರೊ.ರಾಜು, ಕದಂಬ ರಂಗವೇದಿಕೆ ಕಾರ್ಯದರ್ಶಿ ಜಿ.ಸುಬ್ಬನರಸಿಂಹ, ರೊ.ಬಿ.ಆರ್.ಶಿವಕುಮಾರ್, ರೊ.ಆಯರಹಳ್ಳಿ ಪಿ.ವಿರೂಪಾಕ್ಷ ಇದ್ದರು.

ಮಾ.19ರವರೆಗೆ ಆನ್‌ಲೈನ್ ಸೇವೆ ಅಲಭ್ಯ

ಮೈಸೂರು: ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ಉನ್ನತೀಕರಣದ ನಿಮಿತ್ತ ಚಾವಿಸನಿನಿಯ ಆನ್‌ಲೈನ್ ಸೇವೆಗಳಾದ ವಿದ್ಯುತ್ ಬಿಲ್ಲುಗಳ ಪಾವತಿ, ಹೊಸ ಸಂಪರ್ಕ ಸೇವೆಗಳು, ಹೆಸರು ಮತ್ತು ಜಕಾತಿ ಬದಲಾವಣೆ ಇತ್ಯಾದಿ ಸೇವೆಗಳು ಮಾ.19ರವರೆಗೆ RAPDRP ನಗರ ಪ್ರದೇಶದ ಈ ಕೆಳಕಂಡ ಪಟ್ಟಣ ವ್ಯಾಪ್ತಿಗೆ ಸೇರಿದ ಉಪವಿಭಾಗದ ಗ್ರಾಹಕರಿಗೆ ಆನ್‌ಲೈನ್ ಸೇವೆಗಳು ಲಭ್ಯವಿರುವುದಿಲ್ಲ.

ವಿವಿ ಮೊಹಲ್ಲಾ, ಹೂಟಗಳ್ಳಿ, ಕುವೆಂಪು ನಗರ, ರಾಮಕೃಷ್ಣನಗರ, ಕೇಂದ್ರೀಯ ಉಪವಿಭಾಗ, ಚಾಮುಂಡಿಪುರಂ, ಎನ್.ಆರ್ ಮೊಹಲ್ಲಾ, ಜ್ಯೋತಿನಗರ, ನಂಜನಗೂಡು, ಕೆ.ಆರ್.ನಗರ, ಹುಣಸೂರು, ಚಾಮರಾಜನಗರ, ಕೊಳ್ಳೇಗಾಲ, ಮಡಿಕೇರಿ, ಮಂಡ್ಯ, ಮಳವಳ್ಳಿ, ಹಾಸನ, ಚನ್ನರಾಯ ಪಟ್ಟಣ ಮತ್ತು ಅರಸಿಕೆರೆ ಪಟ್ಟಣಗಳಲ್ಲಿ ತಂತ್ರಾಂಶವು ಕಾರ್ಯಾರಂಭಗೊಂಡ ನಂತರ ಸ್ಥಿರಗೊಳ್ಳಲು ಸುಮಾರು 15 ದಿನಗಳ ಕಾಲಾವಕಾಶ ಬೇಕಿದ್ದು, ಸದರಿ ಸಮಯದಲ್ಲಿ ತಂತ್ರಾಂಶದ ಕಾರ್ಯಕ್ಷಮತೆಯಲ್ಲಿ ಸ್ವಲ್ಪಮಟ್ಟದ ವ್ಯತ್ಯಯ ಉಂಟಾಗಬಹುದು. ಹಾಗಾಗಿ ಮಾ.19ರ ಅವಧಿಯಲ್ಲಿನ ಅಡಚಣೆಗಾಗಿ ವಿಷಾದಿಸಲಾಗಿದ್ದು, ಸಾರ್ವಜನಿಕರ ಸಹಕರಿಸಬೇಕೆಂದು ಮೈಸೂರು ಸೆಸ್ಕ್ ಪ್ರಧಾನ ವ್ಯವಸ್ಥಾಪಕರು ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬಸವಣ್ಣ ಇಡೀ ಮಾನವ ಕುಲದ ಉದ್ಧಾರಕ

– ಸಾಹಿತಿ ಬನ್ನೂರು ರಾಜು ಅಭಿಮತ –



ಮೈಸೂರಿನ ಶ್ರೀಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಕೃಷ್ಣಮೂರ್ತಿಪುರಂ ನಮನ ಕಲಾಮಂಟಪದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ 'ಶರಣ ಯುವಸಿರಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಮಾ.17(ಎಸ್‌ಬಿಡಿ)– ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣನವರು ಇಡೀ ಜಗತ್ತಿನ ಮಾನವ ಕುಲದ ಉದ್ಧಾರಕ ಎಂದು ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯಪಟ್ಟರು.

ಶ್ರೀಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಮೈಸೂರಿನ ಕೃಷ್ಣಮೂರ್ತಿ ಪುರಂ ನಮನ ಕಲಾ ಮಂಟಪದಲ್ಲಿ ಆಯೋಜಿಸಿದ್ದ 'ಶರಣ ಯುವಸಿರಿ' ಪ್ರಶಸ್ತಿ ಪ್ರದಾನ ಹಾಗೂ ಬಸವೇಶ್ವರರ ಭಾವಚಿತ್ರವುಳ್ಳ ದಿನದರ್ಶಿಕೆ ಬಿಡುಗಡೆ ಸಮಾರಂಭ ಉದ್ಘಾಟಿಸಿ ಮಾತನಾಡಿ, ಇವನಾರವ ನೆನ್ನದೆ ಎಲ್ಲರನ್ನೂ ನಮ್ಮವರೆನ್ನುವ ಮನುಷ್ಯತ್ವವೇ ಬಸವ ತತ್ವ ಎಂದು ಬಣ್ಣಿಸಿದರು.

ಬಸವ ತತ್ವ ಬರೀ ಭಾಷಣಗಳಾಗದೆ ಪ್ರಾಮಾಣಿಕ ಅನುಸರಣೆಯಾಗಿ ಪ್ರತಿಯೊಬ್ಬರ ಅಂತರಾಳದಲ್ಲೂ ಅಮೃತ ಧಾರೆಯಾಗಬೇಕು. ಆದ ಮಾತ್ರ ಲೋಕೋದ್ಧಾರ ಸಾಧ್ಯ. ಬಸವಣ್ಣನ ಆಶಯಕ್ಕೆ ಸಾರ್ಥಕತೆ ದೊರಕಲು ಸಾಧ್ಯ. ಬಸವಣ್ಣ ಎಂಬುದು ಕೇವಲ ಹೆಸರಲ್ಲ, ಅದೊಂದು ಅದ್ಭುತ ಧೀಶಕ್ತಿ. ಮೌಢ್ಯತೆ, ಅಸಮಾನತೆಯ ಕತ್ತಲಲ್ಲಿರುವ ಜಗತ್ತನ್ನು ಬೆಳಕಿನತ್ತ ಕರೆತರುವ ಜಗಜ್ಯೋತಿಯಾಗಿದೆ ಎಂದರು.

ಬಸವಣ್ಣ ಅವತರಿಸಿದ್ದೇ ಎಲ್ಲರಲ್ಲೂ ಮನುಷ್ಯತ್ವವನ್ನು ತುಂಬಿ ನಿಜವಾದ ಮನುಷ್ಯರನ್ನಾಗಿ ಮಾಡಲು. ಈ ನಿಟ್ಟಿನಲ್ಲಿ ಅವರು ಸಾಕಷ್ಟು ಯಶಸ್ವಿಯೂ ಆದರಲ್ಲದೆ ಸಮ ಸಮಾಜ ನಿರ್ಮಾಣಕ್ಕೆ ಬೆಳಕಾಗಿದ್ದಾರೆ. ವಚನ ಚಳವಳಿಯ ಅಸ್ತ್ರದಿಂದ ಮಾನವತೆಯ ಜ್ಯೋತಿ ಹಚ್ಚಿದ ಪರಿ ಎಂದಿಗೂ ಅಜರಾಮರ. ವಿಶೇಷವಾಗಿ ಬಸವಾದಿ ಶರಣರು ಅತ್ಯಂತ ಸರಳವೂ, ಸಹಜವೂ, ಬಹು ಮೌಲಿಕವೂ ಆದ ವಚನ ಸಾಹಿತ್ಯದಿಂದ ಕನ್ನಡವನ್ನು ದೇವಭಾಷೆಯಾಗಿಸಿದರು. ನಮ್ಮ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನ ಮಾನದ ಬಹು ದೊಡ್ಡ ಗೌರವ ದೊರೆಯಲು ವಚನಕಾರರೇ ಕಾರಣಕರ್ತರು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಹಾಗೂ ನಗರಪಾಲಿಕೆ ಮಾಜಿ ಸದಸ್ಯ ಎಂ.ಪ್ರದೀಪ್ ಕುಮಾರ್ ಬಸವೇಶ್ವರರ ಭಾವಚಿತ್ರವುಳ್ಳ ದಿನದರ್ಶಿಕೆ ಬಿಡುಗಡೆ ಮಾಡಿದರು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಾದ ಸುಮಾ ರಾಜ್‌ಕುಮಾರ್, ಪುಷ್ಪಾ, ನಜರ್ ಬಾದ್ ನಟರಾಜ್ ಅವರಿಗೆ 'ಶರಣ ಯುವಸಿರಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸಮಾಜ ಸೇವಕ ರಘುರಾಮ್ ವಾಜಪೇಯಿ, ಕನ್ನಡ ಚಳವಳಿಗಾರ ಮೂಗೂರು ನಂಜುಂಡಸ್ವಾಮಿ, ಜಿಲ್ಲಾ ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷ ಮಾಲಂಗಿ ಸುರೇಶ್, ಕವಿ ಜಯಪ್ಪ ಹೊನ್ನಾಳಿ, ಉದ್ಯಮಿ ರವಿಕುಮಾರ್, ಸಮಾಜ ಸೇವಕಿ ವಿದ್ಯಾ, ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಬಸವ ರಾಜೇಂದ್ರ ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಅಗ್ನಿ ಅವಘಡ ; ಬೆಂಕಿಗಾಹುತಿಯಾದ ಗಿಡಗಂಟಿ

ಮೈಸೂರು,ಮಾ.17(ಪಿಎಂ)– ಅಗ್ನಿ ಅವಘಡ ಸಂಭವಿಸಿ ಯಾದವಗಿರಿಯ ಜಾವಾ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ರೈಲ್ವೆ ಹಳಿ ಸಮೀಪ ಗಿಡಗಂಡಿಗಳು ಬೆಂಕಿಗಾಹುತಿಯಾಗಿರುವ ಘಟನೆ ಭಾನುವಾರ ಸಂಜೆ ನಡೆದಿದೆ. ಬೇಸಿಗೆ ತಾಪಕ್ಕೆ ಒಣಗಿದ್ದ ಕುರುಚಲು ಗಿಡಗಂಟಿಗಳು ಬೆಂಕಿಗಾಹುತಿಯಾದ ಹಿನ್ನೆಲೆಯಲ್ಲಿ ದಟ್ಟ ಹೊಗೆ ಆವರಿಸಿಕೊಂಡಿದೆ. ಇದನ್ನು ಕಂಡ ಸ್ಥಳೀಯರು ಕೂಡಲೇ ಅಗ್ನಿಶಾಮಕ ಠಾಣೆಗೆ ದೂರವಾಣಿ ಮೂಲಕ ಮಾಹಿತಿ ನೀಡಿದ್ದು, ಬೆಂಕಿ ನಂದಿಸುವ ವಾಹನದೊಂದಿಗೆ ಸ್ಥಳಕ್ಕೆ ಧಾವಿಸಿದ ಬನ್ನಿಮಂಟಪ ಅಗ್ನಿಶಾಮಕ ಠಾಣೆ ಸಿಬ್ಬಂದಿ, ಬೆಂಕಿ ನಂದಿಸಿದರು. ತಡವಾಗಿದ್ದರೆ ಬೆಂಕಿ ವ್ಯಾಪಿಸಿ ಭಾರೀ ಹಾನಿಯುಂಟಾಗುತ್ತಿತ್ತು ಎನ್ನಲಾಗಿದೆ. ಈ ಅಗ್ನಿ ಅವಘಡಕ್ಕೆ ಕಾರಣ ತಿಳಿದುಬಂದಿಲ್ಲ.

ಎರಡು ಬ್ಯಾಂಕ್‌ನಲ್ಲಿ ಒಂದೇ ಆಸ್ತಿ ಅಡಮಾನವಿಟ್ಟು ವಂಚನೆ ಆರೋಪ ; ದಂಪತಿ ವಿರುದ್ಧ ಕೇಸ್

ಮೈಸೂರು, ಮಾ.17– ಒಂದೇ ಆಸ್ತಿಯನ್ನು ಎರಡು ಬ್ಯಾಂಕ್‌ಗಳಲ್ಲಿ ಅಡಮಾನವಿಟ್ಟ ವಂಚಿಸಿರುವ ಆರೋಪದಡಿ ದಂಪತಿ ವಿರುದ್ಧ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಮೈಸೂರಿನ ಜೆ.ಪಿ.ನಗರದ ಎಂ.ಪಿ.ನಿರಂಜನ್ ಹಾಗೂ ಎಚ್.ಎಸ್.ನಂದಿನಿ ದಂಪತಿ ವಿರುದ್ಧ ಕುವೆಂಪುನಗರದಲ್ಲಿರುವ ಬ್ಯಾಂಕ್ ಆಫ್ ಬರೋಡಾ ಸರಸ್ವತಿಪುರಂ ಶಾಖೆಯ ವ್ಯವಸ್ಥಾಪಕ ಯೋಗೀಶ್, ಪ್ರಕರಣ ದಾಖಲಿಸಿದ್ದಾರೆ. ನಿರಂಜನ್ ದಂಪತಿ ತಮ್ಮ ಆಸ್ತಿಯ ಮೂಲ ದಾಖಲಾತಿಗಳನ್ನು ಬ್ಯಾಂಕ್ ಆಫ್ ಬರೋಡಾ ಸರಸ್ವತಿಪುರಂ ಶಾಖೆಯಲ್ಲಿ ಅಡಮಾನವಿಟ್ಟು 2016ರಲ್ಲಿ 49.99 ಲಕ್ಷ ರೂ. ಸಾಲ ಪಡೆದಿದ್ದು, 8 ವರ್ಷವಾದರೂ ಹಣ ಮರುಪಾವತಿಸಿಲ್ಲ. ಆದ್ದರಿಂದ ಸಾಲದ ಹಣ ಬಡ್ಡಿ ಸೇರಿ 79,71,306 ರೂ. ಪಾವತಿಸಬೇಕಿರುತ್ತದೆ. ಆದರೆ ಈ ಮಧ್ಯೆ ಬೆಂಗಳೂರಿನ ಬನಶಂಕರಿ ಬಡಾವಣೆಯಲ್ಲಿನ ಸುರಭಿ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಬ್ಯಾಂಕ್‌ನಲ್ಲೂ ಸಹ ಇದೇ ದಾಖಲಾತಿಗಳನ್ನು ತಿದ್ದುಪಡಿ ಮಾಡಿ ಸಾಲ ಪಡೆದಿದ್ದಾರೆ. ಈ ಬಗ್ಗೆ ಆ ಬ್ಯಾಂಕ್‌ನವರು ನೋಟೀಸ್ ನೀಡಿದ್ದರಿಂದ ದಂಪತಿಯ ವಂಚನೆ ಬೆಳಕಿಗೆ ಬಂದಿದೆ ಎಂದು ಯೋಗೀಶ್ ದೂರಿನಲ್ಲಿ ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ ಸೋಮವಾರ 18 ಮಾರ್ಚ್ 2024

ನ್ಯಾಯಸಮ್ಮತ, ಪಾರದರ್ಶಕ ಚುನಾವಣೆಗೆ ಮಂಡ್ಯ ಜಿಲ್ಲಾಡಳಿತ ಸಜ್ಜು



ಮಂಡ್ಯ ನಗರದಲ್ಲಿ ಸಿಆರ್‌ಪಿಎಫ್ ಸಿಬ್ಬಂದಿ ಪಥಸಂಚಲನ ನಡೆಸಿದರು.

ಮಂಡ್ಯ, ಮಾ.17– ಜಿಲ್ಲೆಯಲ್ಲಿ ಏ.26ರಂದು ನಡೆಯಲಿರುವ ಲೋಕಸಭಾ ಸಾರ್ವತ್ರಿಕ ಚುನಾವಣೆಯನ್ನು ಮುಕ್ತ, ನ್ಯಾಯಸಮ್ಮತ ಹಾಗೂ ಪಾರದರ್ಶಕವಾಗಿ ನಡೆಸಲು ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಭಾನುವಾರ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಿನ್ನೆಯಿಂದಲೇ ಜಿಲ್ಲೆಯ ವ್ಯಾಪ್ತಿಯಲ್ಲಿ ಮಾದರಿ ನೀತಿ ಸಂಹಿತೆಯು ಜಾರಿಯಲ್ಲಿದ್ದು, ಮಂಡ್ಯ ಜಿಲ್ಲೆಯು ಸಾಮಾನ್ಯ ಕ್ಷೇತ್ರವಾಗಿದ್ದು, ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಮಳವಳ್ಳಿ, ಮದ್ದೂರು, ಮಂಡ್ಯ, ಮೇಲುಕೋಟೆ, ನಾಗಮಂಗಲ, ಕೆ.ಆರ್.ಪೇಟೆ, ಶ್ರೀರಂಗಪಟ್ಟಣ, ಕೆ.ಆರ್.ನಗರ ಸೇರಿದಂತೆ ಒಟ್ಟು 8 ವಿಧಾನಸಭಾ ಕ್ಷೇತ್ರಗಳು ಬರಲಿವೆ ಎಂದು ವಿವರಿಸಿದರು.

ಮಾ.28ರಂದು ಅಧಿಸೂಚನೆ ಪ್ರಕಟಿಸಲಾಗುವುದು. ಮಾ.28ರಿಂದ ಏ.4ರವರೆಗೆ ನಾಮಪತ್ರಗಳನ್ನು ಸ್ವೀಕರಿಸಲಾಗುವುದು. ಏ.5ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ಏ.8ರಂದು ನಾಮಪತ್ರ ಹಿಂಪಡೆಯಲು ಕೊನೆ ದಿನಾಂಕವಾಗಿದೆ. ಏ.26ರಂದು ಬೆಳಿಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆವರೆಗೆ ಮತದಾನ ಪ್ರಕ್ರಿಯೆ ನಡೆಯಲಿದ್ದು, ಜೂ.4ರಂದು ಮತ ಎಣಿಕೆ ನಡೆಯಲಿದೆ ಎಂದರು.

ಅಪರ ಜಿಲ್ಲಾಧಿಕಾರಿಗಳನ್ನೊಳಗೊಂಡಂತೆ 8 ವಿಧಾನಸಭಾ ಕ್ಷೇತ್ರಗಳಿಗೆ ಸಹಾಯಕ ಚುನಾವಣಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಚುನಾವಣಾ ಪ್ರಚಾರದಲ್ಲಿ ಮಕ್ಕಳು, ಪ್ರಾಣಿ, ಸೈನಿಕರು ಹಾಗೂ ಸೈನಿಕರ ಭಾವಚಿತ್ರ ಬಳಸುವಂತಿಲ್ಲ. ರಾತ್ರಿ 10ಗಂಟೆಯಿಂದ ಬೆಳಗ್ಗೆ 6 ಗಂಟೆಯವರೆಗೆ ಧ್ವನಿವರ್ಧಕಗಳನ್ನು ಬಳಸುವಂತಿಲ್ಲ. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕಂಟ್ರೋಲ್ ರೂಂ, ಎಂಸಿಎಂಸಿ ಸಮಿತಿ, ಅಕೌಂಟಿಂಗ್ ಟೀಂ ಕಾರ್ಯನಿರ್ವಹಿಸಲಿದೆ ಎಂದು ತಿಳಿಸಿದರು.

ಲೋಕಸಭಾ ಚುನಾವಣೆ ಸುಸೂತ್ರವಾಗಿ ನಡೆಯಲು ಮಳವಳ್ಳಿಗೆ 18, ಮದ್ದೂರಿಗೆ 18, ಮೇಲುಕೋಟೆಗೆ 17, ಮಂಡ್ಯಕ್ಕೆ 20, ಶ್ರೀರಂಗಪಟ್ಟಣಕ್ಕೆ 17, ನಾಗಮಂಗಲಕ್ಕೆ 19, ಕೃಷ್ಣರಾಜಪೇಟೆಗೆ 18 ಹಾಗೂ ಕೃಷ್ಣರಾಜನಗರಕ್ಕೆ 24, ಒಟ್ಟು 151 ಸೆಕ್ಟರ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಅದಲ್ಲದೇ ಮಳವಳ್ಳಿಗೆ 5, ಮದ್ದೂರಿಗೆ 4, ಶ್ರೀರಂಗಪಟ್ಟಣಕ್ಕೆ 5, ನಾಗಮಂಗಲಕ್ಕೆ 4, ಕೃಷ್ಣರಾಜಪೇಟೆಗೆ 3, ಕೃಷ್ಣರಾಜನಗರಕ್ಕೆ 4ರಂತೆ ಒಟ್ಟು 25 ಚೆಕ್ ಪೋಸ್ಟ್‌ಗಳನ್ನು ಸ್ಥಾಪನೆ ಮಾಡಿ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ ಎಂದು ವಿವರಿಸಿದರು.

ಮುದ್ರಣ ಮಾಧ್ಯಮಕ್ಕೆ ಸಂಬಂಧಿಸಿದಂತೆ ಜಾಹೀರಾತು ಪ್ರಕಟಿಸಲು ಪೂರ್ವಾನುಮತಿಯ ಅವಶ್ಯಕತೆ ಇರುವುದಿಲ್ಲ. ಆದರೆ ಮಾದರಿ ನೀತಿ ಸಂಹಿತೆಯನ್ನು ಪಾಲಿಸಬೇಕು. ಮತದಾನ ಹಾಗೂ ಮತದಾನದ ಹಿಂದಿನ ದಿನ ಪ್ರಕಟವಾಗುವ ರಾಜಕೀಯ ಜಾಹೀರಾತುಗಳಿಗೂ ಮುದ್ರಣ ಮಾಧ್ಯಮದಲ್ಲಿ ಪ್ರಕಟಿಸಲು ಎಂಸಿಎಂಸಿ ಸಮಿತಿಯಿಂದ ಪೂರ್ವಾನುಮತಿ ಕಡ್ಡಾಯವಾಗಿರುತ್ತದೆ. ಮತದಾನ ಮುಕ್ತಾಯವಾಗುವ 48 ಗಂಟೆಗಳ ಮೊದಲು ಯಾವುದೇ ರೀತಿಯ ರಾಜಕೀಯ ಜಾಹೀರಾತು ಹಾಗೂ ರಾಜಕೀಯ ವಿಷಯಗಳನ್ನು ವಿದ್ಯುನ್ಮಾನ ಮಾಧ್ಯಮದಲ್ಲಿ ಪ್ರಸಾರ, ಮಾಡಲು ಅವಕಾಶವಿರುವುದಿಲ್ಲ ಎಂದು ತಿಳಿಸಿದರು.

ಕರಪತ್ರ, ಭಿತ್ತಿಪತ್ರ, ಫ್ಲೆಕ್ಸ್, ಬ್ಯಾನರ್ ಮುದ್ರಣಕ್ಕೆ ಪೂರ್ವಾನುಮತಿಯ ಅಗತ್ಯ ಇರುವುದಿಲ್ಲ ಆದರೆ ಅಪೆಂಡಿಕ್ಸ್–ಎ ಮತ್ತು ಅಪೆಂಡಿಕ್ಸ್–ಬಿ ಭರ್ತಿ ಮಾಡಿ ಕರಪತ್ರ ಅಥವಾ ಮುದ್ರಣ ಮಾಡಿರುವ ವಿಷಯದ ಒಂದು ಪ್ರತಿ ಹಾಗೂ ಬಿಲ್‌ನ ಒಂದು ಪ್ರತಿಯನ್ನು ಜಿಲ್ಲಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಮಾತನಾಡಿ, ಚುನಾವಣೆಗೆ ಸಂಬಂಧಿಸಿದಂತೆ ಎಲ್ಲಾ ರೀತಿಯ ಭದ್ರತಾ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದೆ. ಕಳೆದ 1 ವಾರದಿಂದ ಹೆಚ್ಚಿನ ನಿಗಾ ವಹಿಸಲಾಗುತ್ತಿದೆ. ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ರೀತಿಯ ಭಯದ ವಾತಾವರಣ ಉಂಟಾಗದಂತೆ ಕ್ರಮ ಕೈಗೊಳ್ಳಲಾಗುವುದು. 1 ಸಿಆರ್‌ಪಿಎಫ್ ತುಕಡಿ ಜಿಲ್ಲೆಗೆ ಆಗಮಿಸಿ ಪಥಸಂಚಲನ ನಡೆಸಲಾಗಿದೆ ಎಂದರು.

ಗೋಷ್ಠಿಯಲ್ಲಿ ಜಿಪಂ ಸಿಇಒ ಶೇಕ್ ತನ್ವೀರ್ ಆಸೀಫ್, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು, ಚುನಾವಣಾ ತಹಶೀಲ್ದಾರ್ ವೆಂಕಟಾಚಲಪತಿ, ವಾರ್ತಾಧಿಕಾರಿ ಎಚ್.ಎಸ್.ನಿರ್ಮಲಾ ಸೇರಿದಂತೆ ಇನ್ನಿತರರಿದ್ದರು.

ಮಂಡ್ಯ ಕ್ಷೇತ್ರದಲ್ಲಿ 17,59,175 ಮತದಾರರು



ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ್ ಮಾತನಾಡಿದರು.

ಮಂಡ್ಯ: ಮಂಡ್ಯ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಎಂಟು ವಿಧಾನಸಭಾ ಕ್ಷೇತ್ರಗಳು ಸೇರಿದಂತೆ ಜನವರಿ 22ರಂದು ಪ್ರಕಟವಾಗಿರುವ ಅಂತಿಮ ಮತದಾರರ ಪಟ್ಟಿಯಲ್ಲಿ ಜಿಲ್ಲೆಯಲ್ಲಿ ಒಟ್ಟು 17,59,175 ಮತದಾರರಿದ್ದಾರೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಳವಳ್ಳಿಯಲ್ಲಿ ಪುರುಷರು– 1,24,922, ಮಹಿಳೆಯರು– 1,25,939, ತೃತೀಯ ಲಿಂಗಿಗಳು– 25, ಒಟ್ಟು 2,50,886 ಮತದಾರರಿದ್ದಾರೆ.

ಮದ್ದೂರಿನಲ್ಲಿ ಪುರುಷರು– 1,03,170, ಮಹಿಳೆಯರು– 1,09,993, ತೃತೀಯ ಲಿಂಗಿಗಳು–24, ಒಟ್ಟು 2,13,187 ಮತದಾರರಿದ್ದಾರೆ. ಮೇಲುಕೋಟೆಯಲ್ಲಿ ಪುರುಷರು– 99,402, ಮಹಿಳೆಯರು– 1,01,662, ತೃತೀಯಲಿಂಗಿಗಳು–7, ಒಟ್ಟು 2,01,071 ಮತದಾರರಿದ್ದಾರೆ. ಮಂಡ್ಯದಲ್ಲಿ ಪುರುಷರು– 1,10,059, ಮಹಿಳೆಯರು– 1,15,311, ತೃತೀಯ ಲಿಂಗಿಗಳು– 33, ಒಟ್ಟು 2,25,403 ಮತದಾರರಿದ್ದಾರೆ. ಶ್ರೀರಂಗಪಟ್ಟಣ ಪುರುಷರು– 1,05,136, ಮಹಿಳೆಯರು– 1,10,034, ತೃತೀಯ ಲಿಂಗಿಗಳು– 45, ಒಟ್ಟು 2,15,215 ಮತದಾರರಿದ್ದಾರೆ. ನಾಗಮಂಗಲದಲ್ಲಿ ಪುರುಷರು– 1,06,965, ಮಹಿಳೆಯರು– 1,07,714, ತೃತೀಯ ಲಿಂಗಿಗಳು–11, ಒಟ್ಟು 2,14,690 ಮತದಾರರಿದ್ದಾರೆ. ಕೆ.ಆರ್.ಪೇಟೆಯಲ್ಲಿ ಪುರುಷರು– 1,10,594, ಮಹಿಳೆಯರು– 1,10,799, ತೃತೀಯ ಲಿಂಗಿಗಳು– 11, ಒಟ್ಟು 2,21,404 ಮತದಾರರಿದ್ದಾರೆ. ಕೃಷ್ಣರಾಜನಗರದಲ್ಲಿ ಪುರುಷರು– 1,07,404, ಮಹಿಳೆಯರು– 1,09,903, ತೃತೀಯ ಲಿಂಗಿಗಳು– 12, ಒಟ್ಟು 2,17,319 ಮತದಾರರಿದ್ದಾರೆ ಎಂದು ತಿಳಿಸಿದರು.

35,140 ಯುವ ಮತದಾರರು: ಎಂಟು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮಳವಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ 3959, ಮದ್ದೂರಿನಲ್ಲಿ 4540 ಯುವ ಮತದಾರರಿದ್ದರೆ, ಮೇಲುಕೋಟೆಯಲ್ಲಿ 4722 ಯುವ ಮತದಾರರಿದ್ದಾರೆ. ಮಂಡ್ಯದಲ್ಲಿ 4244 ಯುವ ಮತದಾರರಿದ್ದಾರೆ. ಶ್ರೀರಂಗಪಟ್ಟಣದಲ್ಲಿ 4506, ನಾಗಮಂಗಲದಲ್ಲಿ 4360, ಕೃಷ್ಣರಾಜಪೇಟೆಯಲ್ಲಿ 3852 ಯುವ ಮತದಾರರಿದ್ದಾರೆ. ಕೆ.ಆರ್.ನಗರದಲ್ಲಿ 4957 ಮತದಾರರಿದ್ದು, ಒಟ್ಟು 35,140 ಯುವ ಮತದಾರರಿದ್ದಾರೆ ಎಂದು ಹೇಳಿದರು.

901 ಸೇವಾ ಮತದಾರರು: ಸೇವಾ ಮತದಾರರ ಪೈಕಿ ಮಳವಳ್ಳಿಯಲ್ಲಿ 80, ಮದ್ದೂರಿನಲ್ಲಿ 145, ಮೇಲುಕೋಟೆಯಲ್ಲಿ 59, ಮಂಡ್ಯದಲ್ಲಿ 131, ಶ್ರೀರಂಗಪಟ್ಟಣದಲ್ಲಿ 56, ನಾಗಮಂಗಲದಲ್ಲಿ 67, ಕೆ.ಆರ್.ಪೇಟೆಯಲ್ಲಿ 95, ಕೆ.ಆರ್.ನಗರದಲ್ಲಿ 268 ಒಟ್ಟು 901 ಸೇವಾ ಮತದಾರರಿದ್ದಾರೆ ಎಂದು ತಿಳಿಸಿದರು.

ಕ್ಷೇತ್ರದಲ್ಲಿ ಒಟ್ಟಾರೆ 85 ವರ್ಷ ಮೇಲ್ಪಟ್ಟ 23044 ಮತದಾರರಿದ್ದಾರೆ. ಇವರಿಗೆ ಮನೆಯಲ್ಲೇ ಪೋಸ್ಟಲ್ ಬ್ಯಾಲೆಟ್ ಮುಖಾಂತರ ಮತದಾನ ಮಾಡಲು ಅವಕಾಶವಿದ್ದು, ಇವರಿಗೆ 12ಡಿ ಫಾರಂ ವಿತರಿಸಿ ಒಪ್ಪಿಗೆ ಪಡೆಯಲಾಗುವುದು ಎಂದರು.

2074 ಮತಗಟ್ಟೆಗಳು: ಮತದಾನಕ್ಕಾಗಿ 2074 ಮತಗಟ್ಟೆಗಳನ್ನು ಸಿದ್ಧಪಡಿಸಲಾಗಿದ್ದು, ಎಲ್ಲಾ ರೀತಿಯ ಮೂಲಭೂತ ವ್ಯವಸ್ಥೆಗಳನ್ನು ಮಾಡಿಕೊಳ್ಳಲಾಗಿದೆ. ಮಳವಳ್ಳಿ–272, ಮದ್ದೂರು–254, ಮೇಲುಕೋಟೆ–264, ಮಂಡ್ಯ–262, ಶ್ರೀರಂಗಪಟ್ಟಣ–249, ನಾಗಮಂಗಲ–260, ಕೃಷ್ಣರಾಜಪೇಟೆ–261, ಕೆ.ಆರ್.ನಗರ– 252 ಮತಗಟ್ಟೆಗಳವೆ ಎಂದು ವಿವರಿಸಿದರು.


ತುಂಡಾದ ವಿದ್ಯುತ್ ತಂತಿ

ಹುಲ್ಲಿನ ಮೆದೆ ಭಸ್ಮ

ಭಾರತೀನಗರ, ಮಾ.17– ವಿದ್ಯುತ್ ತಂತಿ ತುಂಡಾಗಿ ಬಿದ್ದ ಪರಿಣಾಮ ಹುಲ್ಲಿನ ಮೆದೆ ಸುಟ್ಟು ಭಸ್ಮವಾಗಿರುವ ಘಟನೆ ಇಲ್ಲಿಗೆ ಸಮೀಪದ ಅಣ್ಣೂರು ಹೊರವಲಯದ ಜಮೀನಿನಲ್ಲಿ ನಡೆದಿದೆ.

ಗ್ರಾಮದ ಸಿದ್ದೇಗೌಡರಿಗೆ ಸೇರಿದ ಒಂದು ಎಕರೆಯಲ್ಲಿ ಬೆಳೆದಿದ್ದ ಹುಲ್ಲಿನ ಮೆದೆ ಸುಟ್ಟು ಭಸ್ಮವಾಗಿರುವುದು. ಸಿದ್ದಗೌಡರ ಜಮೀನಿನಲ್ಲಿ ವಿದ್ಯುತ್ ಕಂಬ ಹಾದು ಹೋಗಿತ್ತು. ತೆಂಗಿನ ಮರ ವಿದ್ಯುತ್ ಕಂಬದ ಮೇಲೆ ಉರುಳಿ ಬಿದ್ದ ಪರಿಣಾಮ ವಿದ್ಯುತ್ ತಂತಿ ತುಂಡಾಗಿ ಭತ್ತದ ಹುಲ್ಲಿನ ಮೆದೆ ಮೇಲೆ ಬಿದ್ದು ಸುಟ್ಟು ಹೋಗಿದೆ. ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಸೂಕ್ತ ಪರಿಹಾರ ನೀಡುವಂತೆ ಸಿದ್ದೇಗೌಡ ಒತ್ತಾಯಿಸಿದ್ದಾರೆ.

ವೈಭವದ ಚೆಲುವನಾರಾಯಣಸ್ವಾಮಿ ಕಲ್ಯಾಣೋತ್ಸವ



ಮೇಲುಕೋಟೆಯಲ್ಲಿ ಚೆಲುವನಾರಾಯಣಸ್ವಾಮಿ ಕಲ್ಯಾಣೋತ್ಸವ ವೈಭವದಿಂದ ನೆರವೇರಿತು.

ಮೇಲುಕೋಟೆ: ವೈರಮುಡಿ ಬ್ರಹ್ಮೋತ್ಸವ ಪ್ರಯುಕ್ತ ಚೆಲುವನಾರಾಯಣಸ್ವಾಮಿ ಕಲ್ಯಾಣೋತ್ಸವ ಭಾನುವಾರ ಸಂಜೆ ವೈಭವದಿಂದ ನೆರವೇರಿತು.

ವರ್ಷಕ್ಕೊಮ್ಮೆ ಕಲ್ಯಾಣಿ ಸಮುಚ್ಚಯದ ಐತಿಹಾಸಿಕ ಧಾರಾ ಮಂಟಪದಲ್ಲಿ ನಡೆಯುವ ಕಲ್ಯಾಣೋತ್ಸವದ ವೈಭವ ಕಣ್ತುಂಬಿಕೊಳ್ಳಲು ಆಂಧ್ರ, ತಮಿಳುನಾಡು ಸೇರಿದಂತೆ ವಿವಿಧೆಡೆಗಳಿಂದ ಸಾವಿರಾರು ಭಕ್ತರು ಆಗಮಿಸಿದ್ದರು. ಧಾರಾ ಮಹೋತ್ಸವ ಅಂಗವಾಗಿ ಇಡೀ ಧಾರಾ ಮಂಟಪವನ್ನು ವಿವಿಧ ಪುಷ್ಪಗಳು, ತಳಿರು ತೋರಣ ಹಾಗೂ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿತ್ತು.

ಕಲ್ಯಾಣ ನಾಯಕಿ ಅಮ್ಮನವರಿಗೆ ಸಂಜೆ 4 ಗಂಟೆ ವೇಳೆಗೆ ಕಲ್ಯಾಣಿ ಉತ್ಸವ ನೆರವೇರಿಸಲಾಯಿತು. 5 ಗಂಟೆ ವೇಳೆಗೆ ದೇವಸೇನಾಧಿಪತಿ ವಿಶ್ವಕ್ಸೇನರ ಉತ್ಸವ ನೆರವೇರಿಸಿ ಕಲ್ಯಾಣೋತ್ಸವ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯಲಿ ಎಂದು ಪ್ರಾರ್ಥಿಸಲಾಯಿತು. ನಂತರ ಬಂಗಾರದ ಪ್ರಭಾವಳಿಯೊಂದಿಗೆ ಸಿಂಗಾರಗೊಂಡ ವೇದಮಂತ್ರಪಾರಾಯಣ ಹಾಗೂ ಮಂಗಳವಾದ್ಯದೊಂದಿಗೆ ಕೂಡಿದ ಶ್ರೀಚೆಲುವನಾರಾಯಣಸ್ವಾಮಿಯ ಭವ್ಯ ಉತ್ಸವ 6 ಗಂಟೆ ವೇಳೆಗೆ ಧಾರಾಮಂಟಪಕ್ಕೆ ತಲುಪಿದ ನಂತರ ಅಲ್ಲಿ ಕಲ್ಯಾಣ ನಾಯಕಿ ಅಮ್ಮನವರು ಹಾಗೂ ಚೆಲುವನಾರಾಯಣ ಸ್ವಾಮಿಗೆ ಸುಮನ್ಮಾಲೆ ನೆರವೇರಿಸಿ, ಲಾಜಹೋಮ ಹಾಗೂ ಮದುವೆಯ ಎಲ್ಲಾ ಶಾಸ್ತ್ರಗಳನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ನೆರವೇರಿಸಲಾಯಿತು.

ಶಾಸಕ ದರ್ಶನ್ ಕಾಳಜಿಯಿಂದಾಗಿ ಕಲ್ಯಾಣೋತ್ಸವಕ್ಕೆ ಹೆಚ್ಚಿನ ವ್ಯವಸ್ಥೆ ಮಾಡಲಾಗಿತ್ತು. ದೇವಾಲಯದ ಪ್ರಭಾರಿ ಇಓ ಸಂತೋಷ್, ಪಾರುಪತ್ತೇಗಾರರಾದ ಸ್ಥಾನಾಚಾರ್ಯ ಶ್ರೀನಿವಾಸನರಸಿಂಹನ್ ಗುರೂಜಿ ಪರಿಚಾರಕ ಪಾರುಪತ್ತೇಗಾರ್ ಪಾರ್ಥಸಾರಥಿ ಉತ್ಸವವನ್ನು ಅಚ್ಚುಕಟ್ಟಾಗಿ ನಡೆಸಲು ಶ್ರಮಿಸಿದರು. ರಾತ್ರಿ 9 ಗಂಟೆಯ ವೇಳೆಗೆ ಕಲ್ಯಾಣೋತ್ಸವದ ಕಾರ್ಯಕ್ರಮಗಳು ಮುಕ್ತಾಯವಾದವು.

ಪಾಂಡವಪುರದಲ್ಲಿ ಅಪ್ಪು ಹುಟ್ಟುಹಬ್ಬ ಆಚರಣೆ



ಪಾಂಡವಪುರ: ಕರ್ನಾಟಕ ರತ್ನ, ಪವರ್ ಸ್ಟಾರ್ ಡಾ.ಪುನೀತ್ ರಾಜ್‌ಕುಮಾರ್ ಅವರ ಹುಟ್ಟುಹಬ್ಬವನ್ನು ಪಟ್ಟಣದಲ್ಲಿ ಭಾನುವಾರ ಅದ್ದೂರಿಯಾಗಿ ಆಚರಿಸಲಾಯಿತು.

ಪಟ್ಟಣದ ಹಳೇ ಬಸ್ ನಿಲ್ದಾಣದ ಶ್ರೀನಿವಾಸ್ ಭಂಡಾರದ ಮುಂಭಾಗ ಪುನೀತ್ ರಾಜ್‌ಕುಮಾರ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿ ಅನ್ನಸಂತರ್ಪಣೆ ಮಾಡಲಾಯಿತು.

ನಿಲ್ದಾಣ ಅಭಿವೃದ್ಧಿಪಡಿಸಿ: ಪಟ್ಟಣದ ಹಳೇ ಬಸ್ ನಿಲ್ದಾಣ ಶೋಚನೀಯ ಸ್ಥಿತಿಯಲ್ಲಿದೆ. ಸಂಬಂಧಿಸಿದ ಅಧಿಕಾರಿಗಳು, ಜನಪ್ರತಿನಿಧಿಗಳು ಜವಾಬ್ದಾರಿ ಹೊತ್ತು ಅಭಿವೃದ್ಧಿಪಡಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಶ್ರೀನಿವಾಸ ಭಂಡಾರ ಮಾಲೀಕ ಜಯರಾಮು, ಪುರಸಭೆ ಸದಸ್ಯೆ ಸುಧಾ, ಪುತ್ರ ಜೆ.ಚಂದ್ರಕಾಂತ್, ರಕ್ಷಿತ, ಉಮೇಶ್, ಶಿವಕುಮಾರ್, ಚಂದನ್ ಹಾಗೂ ಸ್ಥಳೀಯ ವಿವಿಧ ಅಂಗಡಿ ಮಾಲೀಕರು ಮತ್ತು ಅಪ್ಪು ಅಭಿಮಾನಿಗಳು ಹಾಜರಿದ್ದರು.

ಒಂದನೇ ಪುಟದಿಂದ

ರಾಜಕೀಯ ನಿವೃತ್ತಿ ಘೋಷಿಸಿದ ಪ್ರಸಾದ್

ರಾಜಕಾರಣ ವೆಂದರೆ ಹೊಂದಾಣಿಕೆಯ ಸರಮಾಲೆಯಾಗಿದ್ದರೂ ಯಾವುದೇ ಪಕ್ಷಕ್ಕೆ ಸೇರಿದರೂ ಎಂದೂ ನಾನು ಸ್ವಾಭಿಮಾನ ಬಿಟ್ಟುಕೊಟ್ಟಿಲ್ಲ ಎಂದು ಸ್ಪಷ್ಟಪಡಿಸಿದರು.

'ಸ್ವಾಭಿಮಾನಿಯಾದವನು ಏನು ಬೇಕಾದರೂ ಸಾಧಿಸಬಹುದು. ಹಠ ಮತ್ತು ಛಲ ಈಡೇರಿಸಲು ಶ್ರಮ ಪಡಬೇಕು' ಎಂಬ ಡಾ.ಬಿ.ಆರ್.ಅಂಬೇಡ್ಕರ್ ವಾದವನ್ನು ಒಪ್ಪಿ, ಅಪ್ಪಿ ರಾಜಕಾರಣ ಮಾಡಿದ್ದೇನೆ. ಯೌವನಾವಸ್ಥೆಯಲ್ಲಿ ನಾನು ಸಂಸತ್ ಪ್ರವೇಶಿಸಿದೆ. ಈ ತನಕ ಏಳು ಪ್ರಧಾನಮಂತ್ರಿ ನೋಡಿದ್ದೇನೆ. ನಾನು ಕಂಡ ಪ್ರಧಾನಮಂತ್ರಿಗಳ ಕಾರ್ಯ ವೈಖರಿ ಬಗ್ಗೆ ಶೀಘ್ರದಲ್ಲೆ ಪುಸ್ತಕ ಬರೆಯುತ್ತೇನೆ ಎಂದು ತಿಳಿಸಿದರು.

ಆಕಸ್ಮಿಕ ಹಾಗೂ ಅನಿವಾರ್ಯವಾಗಿ ರಾಜಕಾರಣಕ್ಕೆ ಬಂದೆ. ಜೇಬಿನಲ್ಲಿ ಕಾಸಿಲ್ಲದೆ ಪರಿಸ್ಥಿತಿಯಲ್ಲಿ ರಾಜಕೀಯವಾಗಿ ನಾನು ಮೆಟ್ಟಿಲು ಹತ್ತಲು ಜನರೆ ನನಗೆ ಹಣ ಕೊಟ್ಟು ಆಶೀರ್ವದಿಸಿದರು. ಇಷ್ಟು ವರ್ಷ ನನ್ನ ರಾಜಕೀಯ ಪಯಣದಲ್ಲಿ ನನಗೆ ಸಹಕಾರ ನೀಡಿದ, ಹೆಗಲಿಗೆ ಹೆಗಲು ಕೊಟ್ಟ ಎಲ್ಲರಿಗೂ ಧನ್ಯವಾದ ಹೇಳುತ್ತೇನೆ ಎಂದರು.

ನನ್ನ ರಾಜಕೀಯ ಬದುಕಿನಲ್ಲಿ ಬಹಳಷ್ಟು ಜನರು ನನಗೆ ತೊಂದರೆ ಕೊಟ್ಟಿದ್ದಾರೆ. ಆ ಎಲ್ಲಾ ಸವಾಲುಗಳನ್ನು ಸಮರ್ಥವಾಗಿ ಎದುರಿಸಿದ್ದೇನೆ. ಪ್ರವಾಹ ಬಂದಾಗ ಜಗ್ಗದೆ ಬಂಡೆಯಂತೆ ನಿಂತಿದ್ದೇನೆ. ನಾನು ಹುಲಿ ಮಲಗಿದ್ದಾಗ ಶಿಕಾರಿ ಮಾಡದೆ, ಹುಲಿ ಎದ್ದಾಗ ಶಿಕಾರಿ ಮಾಡುವ ಸ್ವಭಾವದವನು. ಈ ಮೂಲಕ ಒಳ್ಳೆಯವರಿಗೆ ಒಳ್ಳೆಯವನಾಗಿ, ಕೆಟ್ಟವರಿಗೆ ಕೆಟ್ಟವನಾಗಿದ್ದೇನೆ ಎಂದು ಹೇಳಿದರು.

ನನ್ನ ರಾಜಕೀಯ ಜೀವನದಲ್ಲಿ ಯಾವುದೇ ಪಕ್ಷಕ್ಕೆ ಹೋದರೂ ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಸಹಿಸಿಲ್ಲ. ನಾನು ಹೋಗುವ ಪಕ್ಷಕ್ಕೆ ಆಸ್ತಿಯಾಗಿದ್ದೇನೆ. ಆತ್ಮಸಾಕ್ಷಿಯಂತೆ ಪ್ರೀತಿ ವಿಶ್ವಾಸದಿಂದ ಜನಪರ ಕೆಲಸ ಮಾಡಿದ್ದೇನೆ. ಇನ್ನು ನನಗೆ ರಾಜಕಾರಣ ಸಾಕು, ಇವತ್ತು ನಾನು ರಾಜಕಾರಣದಿಂದ ನಿವೃತ್ತಿ ಘೋಷಿಸುತ್ತಿದ್ದೇನೆ ಎಂದು ಶ್ರೀನಿವಾಸ ಪ್ರಸಾದ್ ತಿಳಿಸಿದರು. ಇಷ್ಟು ವರ್ಷ ನನಗೆ ಬಹಳಷ್ಟು ಮಂದಿ ಮಾರ್ಗ ದರ್ಶನ ಮಾಡಿದ್ದಾರೆ, ಸಹಕಾರ ನೀಡಿದ್ದಾರೆ. ಅವರೆಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ಈ ಮೂಲಕ ಚುನಾವಣಾ ರಾಜಕಾರಣದಿಂದ ನಿವೃತ್ತಿ ಘೋಷಿಸುತ್ತಿದ್ದೇನೆ ಎಂದು ಶ್ರೀನಿವಾಸ ಪ್ರಸಾದ್ ಪುನರುಚ್ಚರಿಸಿದರು. ಅಭಿನಂದನಾ ಸಮಾರಂಭದಲ್ಲಿ ಸಾವಿರಾರು ಜನರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಲಾಗಿತ್ತು.

ರಾಜಕಾರಣಿ ಶ್ರೀನಿವಾಸಪ್ರಸಾದ್

ಸೋಲಿಸಲು ಸಕ್ರಿಯರಾದೆವು. ಆದರೆ ಜನರು ಶ್ರೀನಿವಾಸ ಪ್ರಸಾದ್ ಪರವಾಗಿದ್ದರು. ಎಲ್ಲರನ್ನು ಆಯಸ್ಕಾಂತದಂತೆ ಸೆಳೆಯುವ ಶಕ್ತಿ ಅವರಿಗಿತ್ತು ಎಂದು ಎಸ್.ಎಂ.ಕೃಷ್ಣ ಹಿಂದಿನ ರಾಜಕೀಯ ಘಟನೆಗಳನ್ನು ಮೆಲುಕು ಹಾಕಿದರು. ಅಂದು ನಡೆದ ಚುನಾವಣೆ ಶ್ರೀನಿವಾಸ ಪ್ರಸಾದ್ ಅವರಿಗೆ ದೊಡ್ಡ ಬುನಾದಿ ಹಾಕಿಕೊಟ್ಟಿತು. ಜೊತೆಗೆ 50 ವರ್ಷದ ರಾಜಕೀಯ ಜೀವನದಲ್ಲಿ ಹಲವು ಮೈಲಿಗಲು ದಾಟಲು ಕಾರಣವಾಯಿತು ಎಂದು ಅಭಿಪ್ರಾಯಪಟ್ಟರು. ಶ್ರೀನಿವಾಸ ಪ್ರಸಾದ್ ಅವರು ಸಂಸದರಾಗಿ, ಕೇಂದ್ರ ಸಚಿವರಾಗಿ, ಶಾಸಕರಾಗಿ, ರಾಜ್ಯ ಸರ್ಕಾರದ ಸಚಿವರಾಗಿ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ರಾಜಕೀಯ ಹಾದಿಯಲ್ಲಿ ನಡೆದುಕೊಂಡು ಬಂದಿದ್ದಾರೆ. ಈ ಮೂಲಕ ಸ್ನೇಹದ ಸೇತುವೆ ನಿರ್ಮಿಸಿ ತಮ್ಮ ಬದುಕನ್ನು ಜನ ಸೇವೆಗೆ ಅರ್ಪಣೆ ಮಾಡಿದ್ದಾರೆ ಎಂದು ಎಸ್.ಎಂ.ಕೃಷ್ಣ ಹೇಳಿದರು.

ಆರ್‌ಸಿಬಿ ಚೊಚ್ಚಲ ಚಾಂಪಿಯನ್

ಯಾವುದೇ ವಿಕೆಟ್ ನಷ್ಟವಿಲ್ಲದೇ 61 ರನ್ ಬಾರಿಸಿದ್ದರು. ಇದರಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡ 200 ರನ್‌ಗಳ ಗಡಿ ದಾಟಲಿದೆ ಎಂದು ನಿರೀಕ್ಷಿಸಲಾಗಿತ್ತು. ಪವರ್ ಪ್ಲೇ ಮುಗಿಯುತ್ತಿದ್ದಂತೆ ಪೆವಿಲಿಯನ್ ಪೆರೇಡ್ ನಡೆಸಿದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಮುಂದಿನ 49 ರನ್ ಗಳಿಗೆ ತನ್ನೆಲ್ಲಾ ವಿಕೆಟ್ ಕಳೆದುಕೊಂಡಿತು.

ಪವರ್ ಪ್ಲೇನಲ್ಲಿ ಕಳಪೆ ಬೌಲಿಂಗ್ ಹಾಗೂ ಫೀಲ್ಡಿಂಗ್‌ನಿಂದಾಗಿ 6 ಓವರ್‌ಗಳಲ್ಲಿ 61 ರನ್ ಚಚ್ಚಿಸಿಕೊಂಡಿದ್ದ ಆರ್‌ಸಿಬಿ, ನಂತರ ಡೆಲ್ಲಿ ಆಟಕ್ಕೆ ಬ್ರೇಕ್ ಹಾಕಿತು. 8ನೇ ಓವರ್‌ನಲ್ಲಿ ಬೌಲಿಂಗ್‌ಗೆ ಇಳಿದ ಸೋಫಿ ಮೊಲಿನೆಕ್ಸ್ ಮೊದಲ 4 ಎಸೆತಗಳಲ್ಲೇ 3 ವಿಕೆಟ್ ಉರುಳಿಸಿದರು. ಇದರಿಂದ 7 ಓವರ್‌ಗಳಲ್ಲಿ 64 ರನ್ ಗಳಿಸಿದ್ದ ಡೆಲ್ಲಿ 81 ರನ್ ಗಳಿಸುವ ವೇಳೆಗೆ ಕೇವಲ 17 ರನ್‌ಗಳ ಅಂತರದಲ್ಲೇ ಪ್ರಮುಖ 6 ವಿಕೆಟ್ ಕಳೆದುಕೊಂಡಿತ್ತು. ಇದು ಆರ್‌ಸಿಬಿಗೆ ಬಹುದೊಡ್ಡ ಲಾಭವಾಯಿತು. ಅಲ್ಲಿಂದ ಒಂದೊಂದು ರನ್ ಕದಿಯುವುದಕ್ಕೂ ಹೆಣಗಾಡುತ್ತಿದ್ದ ಡೆಲ್ಲಿ 113 ರನ್‌ಗಳಿಗೆ ಆಲೌಟ್ ಆಯಿತು. ಡೆಲ್ಲಿ ಕ್ಯಾಪಿಟಲ್ಸ್ ಪರ ಶಫಾಲಿ ವರ್ಮಾ 27 ಎಸೆತಗಳಲ್ಲಿ 44 ರನ್ ಗಳಿಸಿದರೇ, ಮೆಗ್ ಲ್ಯಾನಿಂಗ್ 23, ರಾಧಾ ಯಾಧವ್ 12 ರನ್ ಗಳಿಸಿದರು. ಜೆಮಿಮಾ ರೊಡ್ರಿಗ್ಸ್, ಅಲಿಸ್ ಕ್ಯಾಪ್ಸಿ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದ್ರೆ, ಜೆಸ್ ಜೊನಾಸೆನ್ 3 ರನ್, ಮಾರಿಜಾನ್ನೆ ಕಪ್ 8, ಮಿನ್ನು ಮಣಿ 5, ಅರುಂಧತಿ ರೆಡ್ಡಿ 10, ಶಿಖಾ ಪಾಂಡೆ 5 ರನ್ ಗಳಿಸಿದರು. ಆರ್‌ಸಿಬಿ ಪರ ಶ್ರೇಯಾಂಕಾ ಪಾಟೀಲ್ 4, ಸೋಫಿ ಮೊಲಿನೆಕ್ಸ್ 3, ಆಶಾ ಸೋಭನಾ 2 ವಿಕೆಟ್ ಪಡೆದು ಮಿಂಚಿದರು. ಸೋಫಿ ಮೊಲಿನೆಕ್ಸ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಬಹಿರಂಗ ಪ್ರಚಾರಕ್ಕೆ ಚಾಲನೆ

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮುಂದಾ ಲೋಚನೆಯಿಂದ ಹಲವಾರು ಯೋಜನೆಗಳನ್ನು ಜಾರಿಗೊಳಿಸುತ್ತಿದೆ. ಆದದ್ದರಿಂದ ಶ್ರೇಷ್ಠ ಭಾರತ ನಿರ್ಮಾಣಕ್ಕಾಗಿ ಬೆಂಬಲ ನೀಡುವಂತೆ ಕೋರಿದರು.

ಋಣ ತೀರಿಸುವ ಅವಕಾಶ: ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ. ಮಂಜುನಾಥ್ ಮಾತನಾಡಿ, ಈ ಹಿಂದಿನ, ಇವತ್ತಿನ ಹಾಗೂ ಮುಂಬರುವ ಯಾವ ಸರ್ಕಾರಗಳೂ ನೀಡಲಾಗದಷ್ಟು ಕೊಡುಗೆ ನೀಡಿರುವ ಮೈಸೂರು ಸಂಸ್ಥಾನದ ಋಣ ತೀರಿಸುವ ಅವಕಾಶ ದೊರೆತಿದೆ. ಜನರೊಂದಿಗೆ ಇರುತ್ತೇನೆ ಎಂದು ರಾಜಕೀಯಕ್ಕೆ ಬಂದಿರುವ ಬಿಜೆಪಿ ಅಭ್ಯರ್ಥಿ ಯದುವೀರ್ ಅವರಿಗೆ ಪಕ್ಷಾತೀತ, ಜಾತ್ಯಾತೀತ, ಧರ್ಮಾತೀತವಾಗಿ ಮತ ನೀಡಿ, ಅವರನ್ನು ಗೆಲ್ಲಿಸಸುವಂತೆ ಮನವಿ ಮಾಡಿದರು.

ಗೆದ್ದು ಬಂದುತಹ ಸಂಭ್ರಮ: ಮಾಜಿ ಮೇಯರ್ ಸಂದೇಶ್‌ಸ್ವಾಮಿ ಮಾತನಾಡಿ, ಕ್ಯಾತಮಾರನಹಳ್ಳಿ ಗ್ರಾಮಸ್ಥರ ಸಂಭ್ರಮ ನೋಡುತ್ತಿದ್ದರೇ ಯದುವೀರ್ ಅವರು ಈಗಾಗಲೇ ಗೆದ್ದು ಬಂದಂತಿದೆ. ಹಿಂದೆ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು, ಚುನಾವಣೆಗೆ ನಿಂತಾಗ ಅವರನ್ನು ಅತೀ ಹೆಚ್ಚು ಮತಗಳಿಂದ ಗೆಲ್ಲಿಸಲಾಗಿತ್ತು. ಇಂದು ಸಹ ಅದೇ ರೀತಿಯ ವಾತಾವರಣವಿದೆ. ನೂರಕ್ಕೆ ನೂರರಷ್ಟು ಗೆದ್ದಂತಹ ಸಂತೋಷ ದೊರೆತಿದೆ ಎಂದರು.

ಲಕ್ಷಕ್ಕೂ ಅಧಿಕ ಮತ: ದೇಶದಲ್ಲಿ ಸಂವಿಧಾನ ಜಾರಿಗೂ ಮೊದಲೇ ಮೀಸಲಾತಿ ಮೂಲಕ ಎಲ್ಲಾ ವರ್ಗದ ಜನರ ಏಳಿಕೆಗೆ ಕಾರಣರಾಗಿದ್ದರು. ಅದರಂತೆ ಯದುವೀರ್ ಅವರು ಕೂಡ ಅಭಿವೃದ್ಧಿ ಕಾಣದ ಎನ್.ಆರ್ ಕ್ಷೇತ್ರವನ್ನು ದತ್ತು ಪಡೆದು ಅಭಿವೃದ್ಧಿ ಮಾಡಲಿದ್ದಾರೆ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯ ವಿಧಾನ ಸಭಾ ಕ್ಷೇತ್ರಗಳಲ್ಲಿಯೇ ಅತೀ ಹೆಚ್ಚು ಮತಗಳನ್ನು ನೀಡಿ, ಲಕ್ಷಕ್ಕೂ ಅಧಿಕ ಮತಗಳ ಅಂತರದಲ್ಲಿ ಗೆಲ್ಲಿಸಬೇಕು ಎಂದು ತಿಳಿಸಿದರು. ನಂತರ ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ಗಿರಿಧರ್ ಮಾತನಾಡಿದರು. ಚುನಾವಣೆ ಉಸ್ತುವಾರಿಗಳಾದ ಮೈವಿ ರವಿಶಂಕರ್, ಹೇಮಂತ್ ಕುಮಾರ್‌ಗೌಡ, ಎನ್.ಆರ್.ಕ್ಷೇತ್ರದ ಅಧ್ಯಕ್ಷ ಮಂಜುನಾಥ್, ಕಾರ್ಯದರ್ಶಿ ಮಂಜು ಜಿ.ಗೌಡ, ಗ್ರಾಮದ ಮುಖಂಡರಾದ ಯಜಮಾನ್ ಶಿವಕುಮಾರ್, ಉಷಾ ನಾರಾಯಣ್ ಮತ್ತಿತರರು ಉಪಸ್ಥಿತರಿದ್ದರು.

ಭವ್ಯ ಸ್ವಾಗತ...

ರಾಜವಂಶಸ್ಥರೂ ಆದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮ ರಾಜ ಒಡೆಯರ್ ಕ್ಯಾತಮಾರಹಳ್ಳಿ ಟೆಂಟ್ ಸರ್ಕಲ್‌ಗೆ ಆಗಮಿಸುತ್ತಿದ್ದಂತೆ ಗ್ರಾಮಸ್ಥರು, ಬಿಜೆಪಿ ಕಾರ್ಯಕರ್ತರು ವಾದ್ಯಗೋಷ್ಠಿಯೊಂದಿಗೆ ಭವ್ಯ ಸ್ವಾಗತ ನೀಡಿದರು. ಯದುವೀರ್ ಮೇಲೆ ಹೂ ಸುರಿದು ಅಭಿಮಾನ ಮೆರೆದರು. ಟೆಂಟ್ ಸರ್ಕಲ್ ನಿಂದ ಹುಲಿಯಮ್ಮ ದೇವಸ್ಥಾನ ದವರೆಗೆ ಕಟ್ಟಡ ಮೇಲೆ ನಿಂತಿದ್ದ ನಿವಾಸಿ ಗಳು, ಮೇಲಿಂದ ಹೂ ಹಾಕಿ ಮೈಸೂರು ರಾಜ ಮನೆತನದವರನ್ನು ಗೌರವಿಸಿದರು. ಪುಟಾಣಿ ಮಕ್ಕಳ ದಂಡೆ ನೆರೆದಿತ್ತು. ವೇದಿಕೆ ಕಾರ್ಯಕ್ರಮದಲ್ಲಿ ಯದುವೀರ್‌ಗೆ ಕುಡಿಯಲು ಎಳ ನೀರು ತಂದುಕೊಟ್ಟು ಪ್ರೀತಿ ತೋರಿದರು.

ಹೂಡಿಕೆಗೆ ಮದರ್ ಡೇರಿ ನಿರ್ಧಾರ

ಪ್ರೈವೆಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಮನೀಶ್ ಬಂದ್ಲೀಷ್ ಅವರು ತಿಳಿಸಿದ್ದಾರೆ. ಕರ್ನಾಟಕದಲ್ಲಿ ರೂ. 125 ಕೋಟಿ ವೆಚ್ಚದಲ್ಲಿ ಹಣ್ಣಿನ ಸಂಸ್ಕರಣಾ ಘಟಕ ಸ್ಥಾಪಿಸಲಾಗುವುದು. 'ಸಫಲ್ ಬ್ರ್ಯಾಂಡ್' ಹೆಸರಿನಡಿ ಇದನ್ನು ಅಭಿವೃದ್ಧಿಪಡಿಸಲಾಗುತ್ತದೆ. ಇನ್ನು ಎರಡು ವರ್ಷಗಳಲ್ಲಿ ಈ ಘಟಕಗಳ ನಿರ್ಮಾಣ ಪೂರ್ಣಗೊಳ್ಳಲಿದೆ ಎಂದು ತಿಳಿಸಿದ್ದಾರೆ. ನವದೆಹಲಿಯಲ್ಲಿ ಹಾಲು ಪೂರೈಕೆಯಲ್ಲಿ ಮದರ್ ಡೇರಿಯು ಮುಂಚೂಣಿಯಲ್ಲಿದೆ. ಅಲ್ಲಿ ಸಂಸ್ಕರಣಾ ಘಟಕಗಳ ಸಾಮರ್ಥ್ಯ ಹೆಚ್ಚಿಸಲು ರೂ. 100 ಕೋಟಿ ಹೂಡಿಕೆಗೆ ತೀರ್ಮಾನಿಸಲಾಗಿದೆ ಎಂದು ಹೇಳಿದ್ದಾರೆ. ಪ್ರಸ್ತುತ ಡೇರಿ ವ್ಯಾಪ್ತಿಯಲ್ಲಿ ಒಂಬತ್ತು ಹಾಲು ಸಂಸ್ಕರಣಾ ಘಟಕಗಳಿದ್ದು, ಪ್ರತಿದಿನ 50 ಲಕ್ಷ ಲೀಟರ್ ಹಾಲು ಉತ್ಪಾದಿಸಲಾಗುತ್ತಿದೆ. ಹಣ್ಣು ಮತ್ತು ತರಕಾರಿ ಸಂಸ್ಕರಣೆಯ ನಾಲ್ಕು ಘಟಕಗಳಿವೆ. ಖಾದ್ಯ ತೈಲ ಉತ್ಪಾದನೆಗೆ 15 ಘಟಕಗಳನ್ನು ಹೊಂದಿದೆ. 2022–23ರಲ್ಲಿ ಡೇರಿಯು ರೂ. 14,500 ಕೋಟಿ ವಹಿವಾಟು ನಡೆಸಿದೆ.

ಲೋಕಸಭಾ ಚುನಾವಣೆ 2024 ನೀತಿ ಸಂಹಿತೆ

ಬೆಂಗಳೂರಿನಲ್ಲಿ ದಾಖಲೆ ಇಲ್ಲದ 20 ಲಕ್ಷ ಹಣ ವಶಕ್ಕೆ

ಬೆಂಗಳೂರು: ಲೋಕಸಭಾ ಚುನಾವಣೆ 2024ರ ವೇಳಾಪಟ್ಟಿ ಘೋಷಣೆಯಾದ ಬೆನ್ನಲ್ಲೇ ಪೊಲೀಸರು ಅಲರ್ಟ್ ಆಗಿದ್ದು, ಅಕ್ರಮವಾಗಿ ಸಾಗಿಸುವ ಹಣದ ಮೇಲೆ ಕಣ್ಣಿಟ್ಟಿದ್ದಾರೆ. ಬೆಂಗಳೂರಿನಲ್ಲಿ ಪ್ರತ್ಯೇಕ ಪ್ರಕರಣಗಳಲ್ಲಿ ದಾಖಲೆ ಇಲ್ಲದೇ ಸಾಗಿಸುತ್ತಿದ್ದ ಸುಮಾರು 20 ಲಕ್ಷ ರೂ. ಹಣವನ್ನು ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಬೆಂಗಳೂರಿನಲ್ಲಿ ಮತ್ತು ನೆಲಮಂಗಲದಲ್ಲಿ ಅಕ್ರಮವಾಗಿ ಕಾರಿನಲ್ಲಿ ಸಾಗಿಸುತ್ತಿದ್ದ 13 ಲಕ್ಷ ರೂ. ಹಣವನ್ನು ಅಶೋಕನಗರ ಪೊಲೀಸರು ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ. ಇದಲ್ಲದೆ, 7 ಲಕ್ಷ ರೂಪಾಯಿಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ಜಾಸ್ ಟೋಲ್‌ನಲ್ಲಿ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಹಿರಿಯ ಕ್ರೀಡಾಪಟುಗಳಿಂದ ಮಾಜಿ ಶಾಸಕ ವಾಸು ಅವರಿಗೆ ಶ್ರದ್ಧಾಂಜಲಿ



ಮೈಸೂರು ವಿಶ್ವವಿದ್ಯಾನಿಲಯದ ಓವೆಲ್ಸ್ ಮೈದಾನದಲ್ಲಿ ಭಾನುವಾರ ಹಿರಿಯ ಕ್ರೀಡಾಪಟುಗಳು ಮಾಜಿ ಶಾಸಕ ವಾಸು ಅವರ ಶ್ರದ್ಧಾಂಜಲಿ ಸಭೆ ನಡೆಸಿದರು.

ಮೈಸೂರು, ಮಾ.17(ಎಂಟಿವೈ)– ಇತ್ತೀಚೆಗೆ ನಿಧನರಾದ ಮಾಜಿ ಶಾಸಕ ವಾಸು ಅವರಿಗೆ ಹಿರಿಯ ಕ್ರೀಡಾಪಟುಗಳು ಶ್ರದ್ಧಾಂಜಲಿ ಸಲ್ಲಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಓವೆಲ್ಸ್ ಮೈದಾನದಲ್ಲಿ ಭಾನುವಾರ ಬೆಳಗ್ಗೆ ಮೈಸೂರು ಅಥ್ಲೆಟಿಕ್ ಕ್ಲಬ್, ಮಾಸ್ಟರ್ಸ್ ಅಥ್ಲೆಟಿಕ್ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ವಾಸು ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಗೌರವ ಸಮರ್ಪಿಸಲಾಯಿತು.

ಇದೇ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಮಾಸ್ಟರ್ಸ್ ಅಥ್ಲೆಟಿಕ್ ಅಸೋಸಿಯೇಷನ್ ಕಾರ್ಯದರ್ಶಿ ಪಿ.ಜಿ. ಸತ್ಯನಾರಾಯಣ, ಮೈಸೂರು ಅಥ್ಲೆಟಿಕ್ ಕ್ಲಬ್ ಕಾರ್ಯದರ್ಶಿ ಎಂ. ಯೋಗೇಂದ್ರ ಮಾತನಾಡಿ, ಮಾಜಿ ಶಾಸಕ ವಾಸು ಅಥ್ಲೆಟಿಕ್ ಕ್ಲಬ್ಬಿನ ಸಂಸ್ಥಾಪಕ ಅಧ್ಯಕ್ಷರಾಗಿ ಕ್ರೀಡೆಗೆ ಉತ್ತೇಜನ ನೀಡುತ್ತಿದ್ದರು. ಪ್ರತಿ ವರ್ಷ ಅಥ್ಲೆಟ್‌ಗಳಿಗೆ ಸುಮಾರು ಒಂದು ಲಕ್ಷ ರೂ.ಗಳಷ್ಟು ನಗದು ಬಹುಮಾನ ನೀಡುತ್ತಿದ್ದರು. ವಿಶ್ವವಿದ್ಯಾನಿಲಯ, ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಅಥ್ಲೆಟ್‌ಗಳಿಗೆ ನಗದು ಬಹುಮಾನ ನೀಡಿ, ಗೌರವಿಸುತ್ತಿದ್ದರು. ಯಾವುದಾದರೂ ಕ್ರೀಡಾಕೂಟಗಳಿಗೆ ಹೋಗಲು ಕ್ರೀಡಾಪಟುಗಳಿಗೆ ತೊಂದರೆ ಇದ್ದಲ್ಲಿ ಆರ್ಥಿಕ ನೆರವು ನೀಡುತ್ತಿದ್ದರು. ಯಾವುದೇ ಕ್ರೀಡಾಕೂಟಗಳಾದರೂ ನಿಗದಿತ ಸಮಯಕ್ಕೆ ಸರಿಯಾಗಿ ಬಂದು ಪಾಲ್ಗೊಳ್ಳುತ್ತಿದ್ದರು. ಹಿರಿಯರು– ಕಿರಿಯರು ಎನ್ನದೇ ಎಲ್ಲಾ ಕ್ರೀಡಾಪಟುಗಳನ್ನು ಪ್ರೀತಿಯಿಂದ ಮಾತನಾಡಿಸಿ, ಪ್ರೋತ್ಸಾಹಿಸುತ್ತಿದ್ದರು ಎಂದು ಸ್ಮರಿಸಿದರು.

ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತರಾದ ಅಂಶಿ ಪ್ರಸನ್ನಕುಮಾರ್, ಕೆ. ನರಸಿಂಹಮೂರ್ತಿ, ಟಿ.ಆರ್. ಸತೀಶ್ ಕುಮಾರ್ ತರಬೇತುದಾರರಾದ ಜಿ.ಆರ್.ಪ್ರಭಾಕರ್, ಪಿ.ಡಿ. ಕಾಂತರಾಜ್, ರವಿಕುಮಾರ್, ಅಥ್ಲೆಟ್‌ಗಳಾದ ಪೊಲೀಸ್ ಇಲಾಖೆಯ ಚಂದ್ರಶೇಖರ್, ಸುಬ್ಬಣ್ಣ, ರವಿ, ಚಂದ್ರಶೇಖರ್, ಪಿ.ಜಿ.ಸತ್ಯನಾರಾಯಣ, ಹಿರಿಯರಾದ ಮಾಧವ ಭಟ್, ಸುಧನ್ವ, ಸೋಮಶೇಖರ್, ಶೇಖರ್, ಮಹದೇವಯ್ಯ, ಶಿವಕುಮಾರ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರಲ್ಲಿ ಬುದ್ಧ ವಂದನಾ ಕಾರ್ಯಕ್ರಮ



ಮೈಸೂರಿನ ಕುವೆಂಪುನಗರದ ಬುದ್ಧ ಕುಟೀರದಲ್ಲಿ ಬುದ್ಧ ವಂದನಾ ಕಾರ್ಯಕ್ರಮ ನಡೆಯಿತು.

ಮೈಸೂರು, ಮಾ.17(ಎಂಕೆ)– ಜೀವನದಲ್ಲಿ ಕಲ್ಲು–ಮುಳ್ಳುಗಳು, ಏರುಪೇರುಗಳು ಇದ್ದೆ ಇರುತ್ತವೆ. ಯಾವ ವ್ಯಕ್ತಿ ಸಮಸ್ಯೆಗಳನ್ನೇ ಸವಾಲಾಗಿ ಸ್ವೀಕರಿಸಿ ಮುನ್ನುಗ್ಗುತ್ತಾನೋ ಆತ ತನ್ನ ಬದುಕನ್ನು ಉಜ್ವಲವಾಗಿ ಕಟ್ಟಿಕೊಳ್ಳುತ್ತಾನೆ ಎಂದು ವಿಶ್ವ ಮೈತ್ರಿ ಬುದ್ಧ ವಿಹಾರದ ಡಾ. ಕಲ್ಯಾಣ ಸಿರಿ ಬಂತೇಜಿ ಹೇಳಿದರು.

ಮೈಸೂರಿನ ಕುವೆಂಪುನಗರದ ಬುದ್ಧ ಕುಟೀರದಲ್ಲಿ ನಡೆದ ಬುದ್ಧ ವಂದನಾ ಕಾರ್ಯಕ್ರಮದಲ್ಲಿ ಭಗವಾನ್ ಬುದ್ಧರು ಹಾಗೂ ಬಾಬಾ ಸಾಹೇಬ್ ಅಂಬೇಡ್ಕರ್ ಮೂರ್ತಿಗೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಲೋಭ–ಮೋಹ, ದ್ವೇಷಕ್ಕೆ ಅಂಟಿಕೊಂಡಿರುವ ಮನುಷ್ಯನಿಗೆ ಹತಾಶೆ, ಅತೃಪ್ತಿ ಕಾಡುತ್ತದೆ. ಸತ್ಯ, ಪ್ರಾಮಾಣಿಕತೆ, ಸನ್ಮಾರ್ಗದಿಂದ ಜೀವನ ನಡೆಸಿದಾಗ ಮಾತ್ರ ಸಂತೃಪ್ತಿ ಜೀವನ ಕಂಡುಕೊಳ್ಳಬಹುದು. ಪ್ರತಿಯೊಬ್ಬರೂ ಬುದ್ಧ, ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಹಾಕಿಕೊಟ್ಟಿರುವ ಮಾರ್ಗದಲ್ಲಿ ನಡೆಯಬೇಕು ಎಂದರು.

ಟಿ.ನರಸೀಪುರ ನಳಂದ ಬುದ್ಧವಿಹಾರದ ಬೋಧಿರತ್ನ ಬಂತೇಜಿ ಮಾತನಾಡಿ, ಧ್ಯಾನದಿಂದ ಮಾತ್ರ ಏಕಾಗ್ರತೆ ಸಾಧ್ಯ ಪ್ರತಿಯೊಬ್ಬರೂ ನಿಷ್ಕಲ್ಮಶವಾದ ಬದುಕನ್ನು ಸಾಗಿಸಲು ಧಮ್ಮ ಮಾರ್ಗ ಅನಿವಾರ್ಯ. ಬುದ್ಧರ ಬೋಧನೆಗಳನ್ನು ಅಳವಡಿಸಿಕೊಳ್ಳುವುದರಿಂದ ಶಾಂತಿ ನೆಲೆಸುತ್ತದೆ ಎಂದರು.

ಚಾ.ನಗರ ನಳಂದ ಬುದ್ಧ ವಿಹಾರದ ಬೋಧಿದತ್ತ ಬಂತೇಜಿ, ಕೊಳ್ಳೇಗಾಲ ಜೇತವನ ಬುದ್ಧ ವಿಹಾರದ ಸುಗತಪಾಲ ಬಂತೇಜಿ, ಲಡಾಖ್‌ನ ಸೋದೆ ಬಂತೇಜಿ, ಹಿರಿಯರಾದ ಎ.ಮಾದಯ್ಯ, ಕರ್ನಾಟಕ ಬುದ್ಧ ಧಮ್ಮ ಸಮಿತಿಯ ಅಧ್ಯಕ್ಷ ಪ್ರೊ.ಡಿ. ನಂಜುಂಡಯ್ಯ, ಪ್ರಧಾನ ಕಾರ್ಯದರ್ಶಿ ಆರ್.ಮಹಾದೇವಪ್ಪ, ಸಹ ಕಾರ್ಯದರ್ಶಿ ಹೆಚ್.ಶಿವರಾಜ್, ನಿವೃತ್ತ ಇಂಜಿನಿಯರ್ ಆರ್.ನಟರಾಜು ಮತ್ತಿತರರಿದ್ದರು.

ಮೈಸೂರು ಮಿತ್ರ ಸೋಮವಾರ 18 ಮಾರ್ಚ್ 2024

ಕೊಡಗು, ಹಾಸನ ಮಠಾಧೀಶರ ಪರಿಷತ್ ಸಭೆ


● ಒಗ್ಗಟ್ಟಿನಿಂದ ಸಮಾಜದಲ್ಲಿ ಶಾಂತಿ ಸಾಧ್ಯ ● ಕೋಡಿಮಠದ ಶ್ರೀ ಶಿವಯೋಗಿ ರಾಜೇಂದ್ರಸ್ವಾಮೀಜಿ ಹೇಳಿಕೆ

ಸೋಮವಾರಪೇಟೆ, ಮಾ.17–ಒಗ್ಗಟ್ಟಿನಿಂದ ಸಮಾಜದಲ್ಲಿ ಶಾಂತಿ ಹಾಗೂ ನೆಮ್ಮದಿ ಸಾಧ್ಯವೆಂದು ಕೋಡಿಮಠದ ಶ್ರೀ ಶಿವಯೋಗಿ ರಾಜೇಂದ್ರಸ್ವಾಮೀಜಿ ತಿಳಿಸಿದರು.

ಹಾಸನದ ಕೋಡಿಮಠ ಆವರಣದಲ್ಲಿ ಆಯೋಜಿಸಿದ್ದ ಕೊಡಗು ಮತ್ತು ಹಾಸನ ಮಠಾಧೀಶರ ಪರಿಷತ್ ಸಭೆಯಲ್ಲಿ ಮಾತನಾಡಿದ ಅವರು, ಇತ್ತೀಚಿನ ಸನ್ನಿವೇಶದಲ್ಲಿ ಒಗ್ಗಟ್ಟು, ಪರಸ್ಪರ ಪ್ರೀತಿ–ವಿಶ್ವಾಸ ಎನ್ನುವುದು ಅನಿವಾರ್ಯವಾಗಿದೆ. ಜನಸಾಮಾನ್ಯರು ಹಾಗೂ ಮಠ ಮಾನ್ಯಗಳ ನಡುವೆ ಉತ್ತಮ ಸಂಬಂಧ, ಸಾಮರಸ್ಯವಿದ್ದರೆ ಸಮಾಜ ನೆಮ್ಮದಿಯಿಂದ ಉತ್ತಮವಾಗಿರುತ್ತದೆ ಎಂದರು.

ಇಂದು ಎಲ್ಲಾ ವಿಚಾರಗಳು ಜಾತಿ ಆಧಾರಿತವಾಗುತ್ತಿರುವುದರಿಂದ ಎಲ್ಲರೂ ಒಗ್ಗಟ್ಟಾಗಬೇಕಾಗಿರುವುದು ಅವಶ್ಯ. ಸಮುದಾಯದ ಒಳಪಂಗಡ ವಿಚಾರ ಬಿಟ್ಟು ಒಂದಾದಾಗ ಮಾತ್ರ ನಾವುಗಳೆಲ್ಲಾ ಬಲಿಷ್ಠರಾಗುತೇವೆ. ಹಿಂದಿನ ಕಾಲದಿಂದಲೂ ಸಮಾಜಕ್ಕೆ ವೀರಶೈವ–ಲಿಂಗಾಯತ ಮಠಗಳ ಕೊಡುಗೆ ಬಹಳಷ್ಟಿದೆ. ಅವುಗಳು ಮುಂದುವರೆಯಬೇಕು. ಇಂದು ಹಲವು ಮಠಗಳು, ಸ್ವಾಮೀಜಿಗಳು ಸಂಕಷ್ಟದಲ್ಲಿದ್ದಾರೆ. ಅದಕ್ಕಾಗಿ ಎಲ್ಲಾ ಮಠಾಧೀಶರು ಸಂಘಟಿತರಾಗಬೇಕು. ಪರಸ್ಪರ ಸೌಹಾರ್ದತೆಯಿಂದಿರಬೇಕು. ಆ ಮೂಲಕ ಮಠಗಳ ಆಸ್ತಿಗಳನ್ನು ರಕ್ಷಿಸಿಕೊಂಡು ಹೋಗಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ಕೊಡಗು ಮತ್ತು ಹಾಸನ ಮಠಾಧೀಶರ ಪರಿಷತ್ ರಚನೆ ಸಂಬಂಧ ಸುದೀರ್ಘ ಚರ್ಚೆ ನಡೆಸಿ ಕೊಡಗು ಮತ್ತು ಹಾಸನ ವೀರಶೈವ–ಲಿಂಗಾಯತ ಮಠಾಧೀಶರ ನೂತನ ಆಡಳಿತ ಮಂಡಳಿ ರಚಿಸಲಾಯಿತು.


ಹಾಸನದ ಕೋಡಿಮಠದ ಆವರಣದಲ್ಲಿ ಕೊಡಗು ಮತ್ತು ಹಾಸನ ಮಠಾಧೀಶರ ಪರಿಷತ್ ಸಭೆ ಆಯೋಜಿಸಲಾಗಿತ್ತು. ಕೋಡಿಮಠದ ಶ್ರೀ ಶಿವಯೋಗಿ ರಾಜೇಂದ್ರಸ್ವಾಮೀಜಿ, ಮಲ್ಲಿಕಾರ್ಜುನಸ್ವಾಮೀಜಿ, ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ, ಚನ್ನಬಸವದೇಶಿಕೇಂದ್ರಸ್ವಾಮೀಜಿ ಮತ್ತಿತರ ಮಠಾಧೀಶರು ಇದ್ದರು.

ಗೌರವಾಧ್ಯಕ್ಷರಾಗಿ ಕೋಡಿಮಠದ ಸ್ವಾಮೀಜಿ, ಅಧ್ಯಕ್ಷರಾಗಿ ಅರಕಲಗೂಡಿನ ದೊಡ್ಡಮಠದ ಶ್ರೀ ಮಲ್ಲಿಕಾರ್ಜುನಸ್ವಾಮೀಜಿ, ಉಪಾಧ್ಯಕ್ಷರಾಗಿ ವಿರಾಜಪೇಟೆಯ ಅರಮೇರಿಕಳಂಚೇರಿ ಮಠದ ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ, ಯಳನಾಡು ಮೂರುಕಳಸ ಮಠದ ಶ್ರೀ ಜ್ಞಾನಪ್ರಭುಸ್ವಾಮೀಜಿ, ಪ್ರಧಾನ ಕಾರ್ಯದರ್ಶಿಯಾಗಿ ಶನಿವಾರಸಂತೆಯ ಮುದ್ದಿನಕಟ್ಟೆ ಮಠದ ಶ್ರೀ ಅಭಿನವ ಸಿದ್ದಲಿಂಗ ಶಿವಾಚಾರ್ಯಸ್ವಾಮೀಜಿ, ಕಾರ್ಯದರ್ಶಿಗಳಾಗಿ ಕೊಡ್ಲಿಪೇಟೆ ಕಿರಿಕೊಡ್ಲಿ ಮಠದ ಶ್ರೀ ಸದಾಶಿವಸ್ವಾಮೀಜಿ ಹಾಗೂ ಹಾಸನದ ತನ್ನಿರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ, ಖಜಾಂಚಿಯಾಗಿ ಅರಕಲಗೂಡು ಚಿಲುಮೆ ಮಠದ ಜಯದೇವಸ್ವಾಮೀಜಿ ಹಾಗೂ ಎರಡು ಜಿಲ್ಲೆಯಗಳ ಎಲ್ಲಾ ಸ್ವಾಮೀಜಿಗಳನ್ನು ನಿರ್ದೇಶಕರನ್ನಾಗಿ ಆಯ್ಕೆ ಮಾಡಲಾಯಿತು. ಸಭೆಯಲ್ಲಿ ಬೆಟ್ಟದಪುರದ ಸ್ವತಂತ್ರ ಸಲಿಲಾಖ್ಯ ವಿರಕ್ತ ಮಠದ ಶ್ರೀ ಚನ್ನಬಸವದೇಶಿಕೇಂದ್ರಸ್ವಾಮೀಜಿ, ಕೊಡಗು ಮತ್ತು ಹಾಸನ ಜಿಲ್ಲೆಯ ವಿವಿಧ ಮಠಗಳ ಸ್ವಾಮೀಜಿಗಳು ಉಪಸ್ಥಿತರಿದ್ದರು.

ಕೆಡೆಟ್‌ಗಳ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಮುಂದುವರೆಯಬೇಕು

ಮಡಿಕೇರಿ, ಮಾ.17–ಶಾಲೆಯಲ್ಲಿನ ಅತ್ಯಾಧುನಿಕ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಲು ಮತ್ತು ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಕೆಡೆಟ್‌ಗಳ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ತಮ್ಮ ಜೀವನದ ಆಕಾಂಕ್ಷೆಗಳನ್ನು ಉತ್ಸಾಹದಿಂದ ಮುಂದುವರೆಸಬೇಕು ಎಂದು ಪುಣೆಯ ಡೆಪ್ಯುಟಿ ಕಮಾಂಡೆಂಟ್ ಮತ್ತು ಖಡಕ್ವಾಸ್ಲಾದ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ ಮುಖ್ಯ ತರಬೇತುದಾರ ಮೇಜರ್ ಜನರಲ್ ಸಂಜೀವ್ ಡೋಗ್ರಾ ಹೇಳಿದರು.

ಕೊಡಗು ಜಿಲ್ಲೆಯ ಕೂಡಿಗೆ ಸೈನಿಕ ಶಾಲೆಗೆ ವಿಶೇಷ ಅತಿಥಿಯಾಗಿ ಆಗಮಿಸಿ ಶಾಲೆಯ ವಿದ್ಯಾರ್ಥಿಗಳೊಂದಿಗೆ ಪ್ರೇರಣಾತ್ಮಕ ಸಂವಾದದಲ್ಲಿ ಮಾತನಾಡಿದ ಅವರು, ಸಮಾಜದ ಆದರ್ಶ ವ್ಯಕ್ತಿಗಳನ್ನು ರೂಪಿಸುವಲ್ಲಿ ಶಾಲೆಯ ತರಬೇತಿ ಹಾಗೂ ಸೌಲಭ್ಯಗಳ ವ್ಯವಸ್ಥೆಯನ್ನು ಶ್ಲಾಘಿಸಿದರು.

ಇದೇ ವೇಳೆ ಕೇಂದ್ರ ಲೋಕಸೇವಾ ಆಯೋಗದ ಎನ್‌ಡಿಎ ಪರೀಕ್ಷೆ ಮತ್ತು ವಿವಿಧ ರಕ್ಷಣಾ ತರಬೇತಿ ಅಕಾಡೆಮಿಗಳಿಗೆ ಶಿಸ್ತುಬದ್ಧ ತಯಾರಿ ಮಾಡುವ ಕುರಿತು ಮಾರ್ಗದರ್ಶನ ನೀಡಿದರು.

ಸಂವಾದದಲ್ಲಿ ಕೂಡಿಗೆ ಸೈನಿಕ ಶಾಲೆಯ ಆಡಳಿತಾಧಿಕಾರಿ ವಿಂಗ್ ಕಮಾಂಡರ್ ಪ್ರಕಾಶ್‌ರಾವ್, ಸಿಬ್ಬಂದಿ ಉಪಸ್ಥಿತರಿದ್ದರು.


ಕೂಡಿಗೆ ಸೈನಿಕ ಶಾಲೆಗೆ ಆಗಮಿಸಿದ ಖಡಕ್ವಾಸ್ಲಾದ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ ಮುಖ್ಯ ತರಬೇತುದಾರ ಮೇಜರ್ ಜನರಲ್ ಸಂಜೀವ್ ಡೋಗ್ರಾ ಅವರನ್ನು ಶಾಲೆಯ ಆಡಳಿತಾಧಿಕಾರಿ ವಿಂಗ್ ಕಮಾಂಡರ್ ಪ್ರಕಾಶ್ ರಾವ್ ಸ್ವಾಗತಿಸಿದರು.

ಮಡಿಕೇರಿ–ಕರಿಕೆ ನಡುವೆ ಬಸ್ ಸಂಚಾರ ಪ್ರಾರಂಭ

ನಾಪೋಕ್ಲು: ಮಡಿಕೇರಿ–ಕರಿಕೆ ನಡುವೆ ಹೊಸ ಕೆಎಸ್‌ಆರ್‌ಟಿಸಿ ಬಸ್ ಸಂಚಾರ ಆರಂಭಿಸಿದೆ. ಶಾಸಕ ಎ.ಎಸ್.ಪೊನ್ನಣ್ಣ ಕರಿಕೆಗೆ ಆಗಮಿಸಿದ್ದ ಸಂದರ್ಭ ಬಸ್ ಸೌಲಭ್ಯ ಕಲ್ಪಿಸಬೇಕು ಎಂದು ಗ್ರಾಮಸ್ಥರು ಮನವಿ ಸಲ್ಲಿಸಿದ್ದರು. ಮನವಿಗೆ ಸ್ಪಂದಿಸಿದ ಶಾಸಕರು, ತಕ್ಷಣ ಬಸ್ ಸಂಚಾರ ಆರಂಭಿಸಲು ಕೆಎಸ್‌ಆರ್‌ಟಿಸಿಯ ಡಿಪೋ ಅಧಿಕಾರಿಗಳಿಗೆ ಆದೇಶಿಸಿದ್ದರು. ಈ ಹಿನ್ನೆಲೆಯಲ್ಲಿ ಬಸ್ ಸಂಚಾರಕ್ಕೆ ಚಾಲನೆ ನೀಡಲಾಗಿದೆ.

ಪ್ರತಿದಿನ ಬೆಳಗ್ಗೆ 7.30ಕ್ಕೆ ಮಡಿಕೇರಿಯಿಂದ ಹೊರಡುವ ಬಸ್ 10.15ಕ್ಕೆ ಕರಿಕೆ ತಲುಪಲಿದೆ. 10.30ಕ್ಕೆ ಕರಿಕೆಯಿಂದ ಹೊರಟು ಮಧ್ಯಾಹ್ನ 1.15ಕ್ಕೆ ಮಡಿಕೇರಿ ತಲುಪಲಿದೆ ಮತ್ತೆ ಮಡಿಕೇರಿಯಿಂದ ಹೊರಟು ಮಧ್ಯಾಹ್ನ 3.45ಕ್ಕೆ ಕರಿಕೆ ತಲುಪಲಿದೆ. ಸಂಜೆ 4ಕ್ಕೆ ಕರಿಕೆಯಿಂದ ಹೊರಟು ಸಂಜೆ 6.45ಕ್ಕೆ ಮಡಿಕೇರಿ ತಲುಪಲಿದೆ.

ಬಸ್ ಸಂಚಾರ ವೇಳೆ ಚಾಲಕ ಮತ್ತು ನಿರ್ವಾಹಕರನ್ನು ಎಳ್ಳುಕೊಚ್ಚಿಯಲ್ಲಿ ಗ್ರಾಮ ಪಂಚಾಯಿತಿ ಕಟ್ಟಡದ ಸಮೀಪ ಗ್ರಾಮಸ್ಥರು ಅಭಿನಂದಿಸಿದರು. ಈ ಸಂದರ್ಭ ಗ್ರಾಪಂ ಅಧ್ಯಕ್ಷ ಎನ್.ಬಾಲಚಂದ್ರನ್ ನಾಯರ್, ರಾಮಾನಾಥ ಬೇಕಲ್, ಹರಿಪ್ರಸಾದ್ ಬೇಕಲ್, ಸುಬ್ರಮಣಿ ಕಟ್ಟಕೋಡಿ ಇನ್ನಿತರರು ಉಪಸ್ಥಿತರಿದ್ದರು.


ಮಡಿಕೇರಿ–ಕರಿಕೆ ನಡುವೆ ಹೊಸದಾಗಿ ಆರಂಭವಾದ ಬಸ್‌ಗೆ ಗ್ರಾಮಸ್ಥರು ಪೂಜೆ ಸಲ್ಲಿಸಿದರು.

ಡಿಸಿಸಿ ಬ್ಯಾಂಕ್ ನಿರ್ದೇಶಕ ಆಯ್ಕೆ



ಮಡಿಕೇರಿ, ಮಾ.17– ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ ಕೊಡಂದೇರ ಪಿ.ಗಣಪತಿ ಸಹಿತ ಕೆ.ಎಸ್.ಪೂವಯ್ಯ, ಹೊಸೂರು ಕೆ.ಸತೀಶ್ ಕುಮಾರ್, ಸತೀಶ್ ಎನ್.ಕಾಂಗೀರ, ಹೆಚ್.ಎಂ.ರಮೇಶ್, ಪೂಳಂಡ ಪಿ.ಪೆಮ್ಮಯ್ಯ, ಕೆ.ಬಿ.ಅರುಣ, ಹೆಚ್.ಕೆ.ಮಾದಪ್ಪ, ಎನ್.ಸಿ.ಶರತ್ ಶೇಖರ್, ಎನ್.ಎಂ.ಉತ್ತಪ್ಪ, ಗುಮ್ಮಟ್ಟೀರ ಎಸ್.ಕಿಲನ್ ಗಣಪತಿ, ಟಿ.ಆರ್.ಶರವಣ ಕುಮಾರ್, ವೈ.ಪಿ.ಜಲಜಾಕ್ಷಿ ಅವರು ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಮಹಾವಿಷ್ಣು ಮೂರ್ತಿ ದೈವದ ಒತ್ತೆಕೋಲಕ್ಕೆ ಚಾಲನೆ

ಮಡಿಕೇರಿ, ಮಾ.17–ಪ್ರಸಿದ್ಧ ಕಲ್ಲುಗುಂಡಿಯ ಶ್ರೀ ಮಹಾವಿಷ್ಣು ಮೂರ್ತಿ ದೈವದ ಒತ್ತೆಕೋಲಕ್ಕೆ ಮುಹೂರ್ತದ ಕೊಳ್ಳಿ ಕಡಿಯುವ ಮೂಲಕ ಚಾಲನೆ ನೀಡಲಾಯಿತು.

ಪ್ರತಿವರ್ಷದಂತೆ ಈ ಬಾರಿಯೂ ಮಾ.28ರಿಂದ 30ರವರೆಗೆ ದೈವದ ಒತ್ತೆಕೋಲ ಮತ್ತು ಪಂಜುರ್ಲಿ, ಕಲ್ಲುರ್ಟಿ, ಗುಳಿಗ ಹಾಗೂ ರಕ್ತೇಶ್ವರಿ ದೈವಗಳ ಸಮ್ಮಾನ ಕಾರ್ಯಕ್ರಮ ನಡೆಯಲಿದೆ. ಮಾ.21ರಂದು ಬೆಳಗ್ಗೆ ಗೊನೆ ಕಡಿಯುವುದು, 27ರಂದು ಮುಂಜಾನೆ 5.30ಕ್ಕೆ ದೇವಸ್ಥಾನದಲ್ಲಿ ಗಣಹೋಮ, 28ರಂದು ರಾತ್ರಿ 7.30ಕ್ಕೆ ಭಂಡಾರ ಹೊರಡುವುದು, 9 ಗಂಟೆಗೆ ಮೇಲೇರಿಗೆ ಅಗ್ನಿ ಸ್ಪರ್ಶ, ರಾತ್ರಿ 12.30ಕ್ಕೆ ಕುಲ್ಚಾಟ ಹೊರಡುವುದು, 29ರಂದು ಬೆಳಗ್ಗೆ 6ಕ್ಕೆ ಅಗ್ನಿ ಪ್ರವೇಶ, 7ಕ್ಕೆ ಪ್ರಸಾದ ವಿತರಣೆ, 8 ಗಂಟೆಗೆ ಮಾರಿಕಳ ಪ್ರವೇಶ, ಮಾರಿಕಳದಿಂದ ಬಂದ ನಂತರ ಹರಕೆಯ ಸುರಿಗೆಗಳನ್ನು ಒಪ್ಪಿಸಲಾಗುವುದು.

25 ವರ್ಷಗಳ ಅಭಿವೃದ್ಧಿಗೆ 10 ತಿಂಗಳಲ್ಲೇ ಚಾಲನೆ

ಮಡಿಕೇರಿ, ಮಾ.17–ಮಡಿಕೇರಿ ವಿಧಾನ ಸಭಾ ಕ್ಷೇತ್ರದಲ್ಲಿ ಸುಮಾರು 25 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಅಭಿವೃದ್ಧಿ ಕಾರ್ಯಗಳಿಗೆ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಕೇವಲ 10 ತಿಂಗಳಲ್ಲಿ ಕ್ಷೇತ್ರದ ಶಾಸಕ ಡಾ.ಮಂತರ್ ಗೌಡ ಚಾಲನೆ ನೀಡಿದ್ದು, ಸುಮಾರು 140 ಕೋಟಿ ರೂ. ಅನುದಾನ ತಂದಿದ್ದಾರೆ ಎಂದು ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಎ.ಹಂಸ ತಿಳಿಸಿದರು.


ಸುದ್ದಿಗೋಷ್ಠಿಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಎ.ಹಂಸ ಮಾತನಾಡಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ಗ್ರಾಮಗಳಿಗೆ ಭೇಟಿ ನೀಡಿ ಅಹವಾಲು ಸ್ವೀಕರಿಸುವ ಮೂಲಕ ಶಾಸಕ ಡಾ.ಮಂತರ್‌ಗೌಡ, ಜನಸ್ನೇಹಿಯಾಗಿ ಅಭಿವೃದ್ಧಿ ಕಾರ್ಯಗಳಿಗೆ ಒತ್ತು ನೀಡುತ್ತಿದ್ದಾರೆ. ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಜನಪರ ಆಡಳಿತದ ಕಾಂಗ್ರೆಸ್‌ಗೆ ಹೆಚ್ಚು ಮತ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಮಾಜಿ ಶಾಸಕರು ಗ್ಯಾರಂಟಿ ಯೋಜನೆಗಳಿಂದ ಅನುದಾನ ಕೊರತೆಯಾಗಿದೆ. ಅಭಿವೃದ್ಧಿ ಕಾರ್ಯಗಳು ಕುಂಟಿತಗೊಂಡಿದೆ ಎಂದು ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಆದರೆ, ಅಭಿವೃದ್ಧಿ ಕಾರ್ಯಗಳಿಗೆ ಗ್ಯಾರಂಟಿ ಯೋಜನೆಗಳು ಅಡ್ಡಿಯಾಗಿಲ್ಲ. ಈ ಕುರಿತು ಚರ್ಚೆಗೆ ನಾವು ಸಿದ್ಧರಿದ್ದೇವೆ ಎಂದು ಸವಾಲು ಹಾಕಿದರು.

ಕಳೆದ 25 ವರ್ಷಗಳಿಂದ ಅಭಿವೃದ್ಧಿ ಕಾಣದ ರಸ್ತೆಗಳಿಗೆ ಈಗ ಅಭಿವೃದ್ಧಿ ಭಾಗ್ಯ ದೊರೆತ್ತಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಅನುದಾನ ದೊರೆಯಲಿದ್ದು, ಮಡಿಕೇರಿ ಹೆಚ್ಚು ಅಭಿವೃದ್ಧಿಹೊಂದಿದ ಕ್ಷೇತ್ರವಾಗಲಿದೆ. ಮಡಿಕೇರಿ ಬ್ಲಾಕ್‌ನಲ್ಲಿ ಕೆ.ನಿಡುಗಣೆ, ಗಾಳಿಬೀಡು, ಮಕ್ಕಂದೂರು, ಕಡಗದಾಳು, ಮರಗೋಡು, ಹೊಸ್ಕೇರಿ, ಮೂರ್ನಾಡು, ಹೊದವಾಡ ಮತ್ತು ಮಡಿಕೇರಿ ನಗರಸಭೆಗೆ ಒಳಪಟ್ಟ ರಸ್ತೆ ಸೇರಿದಂತೆ ಇತರ ಅಭಿವೃದ್ಧಿಗೆ ಒಟ್ಟು 140 ಕೋಟಿ ರೂ. ಅನುದಾನ ಬಿಡುಗಡೆಯಾಗಿ, ಶಂಕುಸ್ಥಾಪನೆ ನೆರವೇರಿಸಲಾಗಿದೆ ಎಂದರು. ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್ ಕಟ್ಟಡ, ಸೆಸ್ಕ್‌ನ ಮಡಿಕೇರಿ ಮೂರ್ನಾಡು ಮತ್ತು ಸೋಮವಾರಪೇಟೆ, ಮಾದಾಪುರ, ಜಂಬೂರು ಗ್ರಾಮಗಳಲ್ಲಿ 66/11 ವಿದ್ಯುತ್ ಉಪಕೇಂದ್ರ, ಇಂದಿರಾ ಕ್ಯಾಂಟಿನ್ ಸೇರಿದಂತೆ ವಿವಿಧ ಕಾಮಗಾರಿಗಳು ಆರಂಭಗೊಂಡಿವೆ ಎಂದು ತಿಳಿಸಿದರು.

ಡಿಸಿಸಿ ಸದಸ್ಯ ಜಾನ್ಸನ್ ಪಿಂಟೋ ಮಾತನಾಡಿ, ಉತ್ಸಾಹಿ ಶಾಸಕರಾಗಿರುವ ಡಾ.ಮಂತರ್ ಗೌಡ ಶ್ರಮಪಟ್ಟು ಮಡಿಕೇರಿ ಕ್ಷೇತ್ರವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುತ್ತಿದ್ದಾರೆ. ಹಲವು ವರ್ಷಗಳ ಬೇಡಿಕೆಯಾಗಿದ್ದ ಸೋಮವಾರಪೇಟೆ ನಗರಾಭಿವೃದ್ಧಿ ಪ್ರಾಧಿಕಾರವನ್ನು ಘೋಷಣೆ ಮಾಡಿದ್ದು, ಕಿರಿಹೊಳೆ ಸೇತುವೆ ನಿರ್ಮಾಣಕ್ಕೆ 15 ರಿಂದ 20 ಕೋಟಿ ರೂ. ಅನುದಾನ ತರಲು ಶ್ರಮ ವಹಿಸಿದ್ದಾರೆ. ಜೊತೆಗೆ ರಸ್ತೆಗಳನ್ನು ಮೇಲ್ದರ್ಜೆಗೇರಿಸಿದ್ದಾರೆ. ಶಾಲೆಗಳ ಅಭಿವೃದ್ಧಿ, ಮರಗೋಡು, ಗಾಳಿಬೀಡು, ಕಡಗದಾಳು ವಲಯಗಳಿಗೆ ಹೆಚ್ಚಿನ ಅನುದಾನ ನೀಡಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಡಿಸಿಸಿ ಸದಸ್ಯ ಪುಷ್ಪ ಪೂಣಚ್ಚ, ಹರಿಪ್ರಸಾದ್ ಕೋಚನ, ಬ್ಲಾಕ್ ಉಪಾಧ್ಯಕ್ಷ ವಿ.ಜಿ.ಮೋಹನ್ ಇದ್ದರು.

ಗಾಂಜಾ ಸಾಗಿಸುತ್ತಿದ್ದವನ ಬಂಧನ

ಕುಶಾಲನಗರ, ಮಾ.17–ಗಾಂಜಾ ಸಾಗಿಸುತ್ತಿದ್ದ ಆರೋಪಿಯನ್ನು ಕುಶಾಲನಗರ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪಿರಿಯಾಪಟ್ಟಣ ತಾಲೂಕಿನ ದೊಡ್ಡಹೊಸೂರು ಗ್ರಾಮ ನಿವಾಸಿ ಬಸವರಾಜು(37) ಎಂಬಾತ ಬಂಧಿತ.

ಈತ ಬಸವನಹಳ್ಳಿ ಸಮೀಪದ ತೆಪ್ಪದಕಂಡಿ ಬಳಿ ಗಾಂಜಾ ಸಾಗಿಸುತ್ತಿದ್ದಾಗ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾನೆ. ನಂತರ 245 ಗ್ರಾಂ ಗಾಂಜಾ ವಶಕ್ಕೆ ಪಡೆದು, ಈತನ ಬಂಧಿಸಲಾಗಿದೆ. ಈ ಸಂಬಂಧ ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.


ಬಸವರಾಜು

ಸದ್ಯದಲ್ಲೇ ನೀರಿನ ಸಮಸ್ಯೆ ಬಗೆಹರಿಸುವೆ: ರಾಮದಾಸ್

ಚಾಮರಾಜನಗರ, ಮಾ.17–ಸದ್ಯದಲ್ಲೇ ನೀರಿನ ಸಮಸ್ಯೆ ಬಗೆಹರಿಸಲಾಗುವುದು. ಅಗತ್ಯವಿದ್ದರೆ ಹೊಸ ಬೋರ್‌ವೆಲ್ ಕೊರೆಸಲಾಗುವುದು ಎಂದು ನಗರಸಭೆ ಪೌರಾಯುಕ್ತ ರಾಮದಾಸ್ ಭರವಸೆ ನೀಡಿದರು.

ನಗರದ ಹೌಸಿಂಗ್ ಬೋರ್ಡ್‌ನ ಪಿಡಬ್ಲ್ಯೂಡಿ ಕ್ವಾರ್ಟಸ್‌ನ ನಿವಾಸಿಗಳಿಂದ ನೀರಿನ ಸಮಸ್ಯೆಯ ದೂರು ಬಂದ ಹಿನ್ನೆಲೆಯಲ್ಲಿ ಈ ಸಂಬಂಧ ಪರಿಶೀಲಿಸುವಂತೆ ಜಿಲ್ಲಾಧಿಕಾರಿ ಶಿಲ್ಪನಾಗ್ ಆದೇಶ ನೀಡಿದ್ದರು. ಈ ಆದೇಶ ಮೇರೆಗೆ ಅವರು ಭಾನುವಾರ ಬಡಾವಣೆಗೆ ಭೇಟಿ ನೀಡಿ ಪರಿಶೀಲಿಸಿ, ನಿವಾಸಿಗಳಿಂದ ನೀರಿನ ಸಮಸ್ಯೆ ಆಲಿಸಿ ನಂತರ ಮಾತನಾಡಿದರು.

ದಿನೇ ದಿನೆ ಬರ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ನಗರಸಭಾ ವ್ಯಾಪ್ತಿಯ ಹೌಸಿಂಗ್ ಬೋರ್ಡ್ ಕ್ವಾರ್ಟಸ್ ಸೇರಿದಂತೆ ಕೆಲವು ವಾರ್ಡ್‌ಗಳಲ್ಲಿ ಬೋರ್‌ವೆಲ್‌ಗಳಲ್ಲಿ ಅಂತರ್ಜಲ ಕ್ಷೀಣಿಸಿದ್ದು, ನೀರಿನ ಸಮಸ್ಯೆ ಉಂಟಾಗಿದೆ. ಅದಷ್ಟು ಬೇಗ ನೀರಿನ ಸಮಸ್ಯೆ ಬಗೆಹರಿಸಲು ವಿಶೇಷ ಒತ್ತು ನೀಡಲಾಗಿದೆ. ಅಗತ್ಯಬಿದ್ದರೆ ಅಂತರ್ಜಲ ಪರಿಶೀಲಿಸಿ, ಸದ್ಯದಲ್ಲೇ ಹೊರ ಬೋರ್‌ವೆಲ್ ಕೊರೆಸಿ ನಿವಾಸಿಗಳಿಗೆ ನೀರಿನ ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಇದೇ ವೇಳೆ ನಗರಸಭೆ ರಾಜಸ್ವ ನಿರೀಕ್ಷಕ ಶರವಣ ಹಾಗೂ ಸಿಬ್ಬಂದಿ, ನಿವಾಸಿಗಳು ಹಾಜರಿದ್ದರು.


ಚಾಮರಾಜನಗರದ ಹೌಸಿಂಗ್ ಬೋರ್ಡ್‌ನ ಪಿಡಬ್ಲ್ಯೂಡಿ ಕ್ವಾರ್ಟಸ್ ನಿವಾಸಿಗಳಿಂದ ನಗರಸಭೆ ಪೌರಾಯುಕ್ತ ರಾಮದಾಸ್ ನೀರಿನ ಸಮಸ್ಯೆ ಆಲಿಸಿದರು.

ಶಸ್ತ್ರಾಸ್ತ್ರ ಠೇವಣಿಗಾಗಿ ಸ್ಕ್ರೀನಿಂಗ್ ಸಮಿತಿ ರಚನೆ

ಚಾಮರಾಜನಗರ, ಮಾ.17–ಲೋಕಸಭಾ ಸಾರ್ವತ್ರಿಕ ಚುನಾವಣೆ ಸಂಬಂಧ ಕಾನೂನು ಸುವ್ಯವಸ್ಥೆ ಕಾಪಾಡಲು ಸಾರ್ವಜನಿಕರು ಪರವಾನಗಿ ಪಡೆದ (ಬಂದೂಕು) ಶಸ್ತ್ರಾಸ್ತ್ರಗಳನ್ನು ಠೇವಣಿ ಮಾಡಲು ಸ್ಕ್ರೀನಿಂಗ್ ಸಮಿತಿ ರಚಿಸಿ ಜಿಲ್ಲಾಧಿಕಾರಿ ಶಿಲ್ಪನಾಗ್ ಆದೇಶಿಸಿದ್ದಾರೆ.


ಶಿಲ್ಪನಾಗ್

ಜಿಲ್ಲಾಧಿಕಾರಿ ಸ್ಕ್ರೀನಿಂಗ್ ಸಮಿತಿಯ ಅಧ್ಯಕ್ಷರಾಗಿದ್ದು, ಪೊಲೀಸ್ ಅಧೀಕ್ಷಕರು ಸದಸ್ಯ ಕಾರ್ಯದರ್ಶಿಯಾಗಿದ್ದಾರೆ. ಹೆಚ್ಚುವರಿ ಜಿಲ್ಲಾಧಿಕಾರಿ, ಹೆಚ್ಚುವರಿ ಪೊಲೀಸ್ ಅಧೀಕ್ಷಕರು, ಕೊಳ್ಳೇಗಾಲ ಉಪವಿಭಾಗಾಧಿಕಾರಿ, ಜಿಲ್ಲಾ ಶಸ್ತ್ರಗಾರದ ಉಪಅಧೀಕ್ಷಕರು, ಚಾಮರಾಜನಗರ, ಕೊಳ್ಳೇಗಾಲ ಉಪ ವಿಭಾಗದ ಅಧೀಕ್ಷಕರು ಮತ್ತು ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ, ಹನೂರು ತಾಲೂಕಿನ ತಹಶೀಲ್ದಾರ್‌ಗಳು ಸಮಿತಿಯ ಸದಸ್ಯರಾಗಿದ್ದಾರೆ.

ಬ್ಯಾಂಕ್ ಭದ್ರತೆ ಹಾಗೂ ಕ್ರೀಡಾ ಉದ್ದೇಶಕ್ಕೆ ಪಡೆದಿರುವ ಬಂದೂಕುಗಳನ್ನು ಹೊರತುಪಡಿಸಿ ಚುನಾವಣಾ ಮುಗಿಯುವವರೆಗೆ ಪರವಾನಗಿ ಹೊಂದಿರುವ ಆಯುಧ (ಬಂದೂಕು)ಗಳನ್ನು ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಠೇವಣಿ ಮಾಡಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ನಗರಸಭೆಯಿಂದ ಬ್ಯಾನರ್, ಪೋಸ್ಟರ್ ತೆರವು

ಚಾಮರಾಜನಗರ, ಮಾ.17–ಲೋಕಸಭಾ ಚುನಾವಣೆಯ ಮಾದರಿ ನೀತಿ ಸಂಹಿತೆ ಹಿನ್ನೆಲೆಯಲ್ಲಿ ನಗರದ ಪ್ರಮುಖ ವೃತ್ತಗಳು, ವಾರ್ಡ್‌ಗಳ ಪ್ರಮುಖ ರಸ್ತೆಯ ಅಕ್ಕಪಕ್ಕ ಹಾಕಿದ್ದ ರಾಜಕೀಯ ಪಕ್ಷಗಳು ಹಾಗೂ ಪಕ್ಷದ ಮುಖಂಡರ ಪೋಸ್ಟರ್‌ಗಳು, ಗೋಡೆ ಬರಹ ಹಾಗೂ ಬ್ಯಾನರ್‌ಗಳನ್ನ ನಗರಸಭೆ ವತಿಯಿಂದ ತೆರವುಗೊಳಿಸಲಾಯಿತು.

ಚುನಾವಣಾ ಆಯೋಗದ ಸೂಚನೆಯಂತೆ ಎಲ್ಲರೂ ಚುನಾವಣೆ ನೀತಿ ಸಂಹಿತೆಯನ್ನು ಪಾಲಿಸಬೇಕು. ಇಲ್ಲದಿದ್ದರೆ ಕ್ರಮ ಜರುಗಿಸಲಾಗುವುದು. ಪಟ್ಟಣ ಪ್ರದೇಶದಲ್ಲಿ ರಾಜಕಾರಣಿಗಳು ಹಾಗೂ ಆಯಾ ಪಕ್ಷಗಳ ನಾಯಕರು ಹಾಗೂ ಮುಖಂಡರ ಭಾವಚಿತ್ರವಿರುವ ಫ್ಲೆಕ್ಸ್‌ಗಳು, ಗೋಡೆ ಬರಹ, ದೊಡ್ಡ ದೊಡ್ಡ ಪೋಸ್ಟರ್, ಬ್ಯಾನರ್‌ಗಳನ್ನು ತೆರವುಗೊಳಿಸುವಂತೆ ನಗರಸಭೆ ಪೌರಯುಕ್ತ ರಾಮದಾಸ್ ತಿಳಿಸಿದರು.

ನಗರಸಭೆ ಆರೋಗ್ಯಾಧಿಕಾರಿ ಮಂಜುನಾಥ್, ನಾರಾಯಣ್, ಆರೋಗ್ಯ ಸಿಬ್ಬಂದಿ ಮಣಿಕಂಠ, ಅರ್ಫಾಜ್ ಅಹ್ಮದ್, ತನ್ವೀರ್, ಮಂಜು, ರಂಗಸ್ವಾಮಿ, ಚೇತನ್, ಸಿ.ಡಿ.ವೆಂಕಟೇಶ್, ಮನೋಹರ ಇದ್ದರು.


ಚಾಮರಾಜನಗರದಲ್ಲಿ ನೀರಿನ ಟ್ಯಾಂಕ್‌ನಲ್ಲಿದ್ದ ರಾಜಕೀಯ ಪಕ್ಷದ ಪೋಸ್ಟರ್‌ಗಳನ್ನು ನಗರಸಭೆ ವತಿಯಿಂದ ತೆರವುಗೊಳಿಸಲಾಯಿತು.

ನಗರದ ವಿವಿಧೆಡೆ ಅಪ್ಪು ಜನ್ಮದಿನಾಚರಣೆ

● ಅಭಿಮಾನಿಗಳಿಂದ ಸೇವಾ ಕಾರ್ಯ ● ಪುನೀತ್ ಭಾವಚಿತ್ರಕ್ಕೆ ಪುಷ್ಪಾರ್ಚನೆ

ಚಾಮರಾಜನಗರ, ಮಾ.17–ನಗರದ ವಿವಿಧೆಡೆ ಭಾನುವಾರ ಪುಸ್ತಕ ವಿತರಣೆ, ಅನ್ನಸಂತರ್ಪಣೆ, ಸಿಹಿ ವಿತರಣೆ, ಚಿಕನ್ ಬಿರಿಯಾನಿ ಹಂಚಿಕೆ ಸೇರಿದಂತೆ ವಿವಿಧ ಸೇವಾ ಕಾರ್ಯಗಳ ಮೂಲಕ ಪವರ್ ಸ್ಟಾರ್ ಡಾ.ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ನಗರದ ನೃಪತುಂಗ ವೃತ್ತದಲ್ಲಿ ಡಾ.ಪುನೀತ್ ರಾಜ್‌ಕುಮಾರ್ ಅಭಿಮಾನಿಗಳು ವಿಶೇಷ ಮಂಟಪ ತಯಾರಿಸಿ ಕೇಕ್ ಕತ್ತರಿಸಿ, ಅಪ್ಪು ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಅನ್ನಸಂತರ್ಪಣೆ ಮಾಡಿದರು. ಯುವಕರು ಪುನೀತ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಸಾರ್ವಜನಿಕರಿಗೆ ಮೊಸರನ್ನ, ಬಾತ್ ನೀಡಿದರು.

ಕಾರ್ಯಕ್ರಮದಲ್ಲಿ ಅಪ್ಪು ಬಳಗದ ಅಧ್ಯಕ್ಷ ಕುಮಾರ್, ಮಂಟೇಸ್ವಾಮಿ, ಕೃಷ್ಣ, ಗಿರೀಶ್, ವೆಂಕಿ, ಯೋಗಿ, ವಿಶ್ವನಾಥ್, ರಾಜಪ್ಪ, ನಟರಾಜು, ಶಂಕರ್, ಕೆಂಪ, ರಾಹುಲ್, ಅಭಿಲಾಷಾ, ನವೀನ್, ಗೇರ್ ಮಂಜು, ಮೊದಲಾದವರು ಇದ್ದರು.

ಚಿಕನ್ ಬಿರಿಯಾನಿ ಹಂಚಿಕೆ: ನಗರದ ಹಳೇ ಬಸ್ ನಿಲ್ದಾಣದ ಬಳಿ ರಾಜರತ್ನ ಅಪ್ಪು ಯುವ ಸೇನಾ ಸಮಿತಿ ವತಿಯಿಂದ ಕಾಮಧೇನು ಮಿಲ್ಕ್ ಪಾರ್ಲರ್ ಎದುರು ಡಾ.ಪುನೀತ್ ರಾಜ್‌ಕುಮಾರ್ ಅವರ ಹುಟ್ಟುಹಬ್ಬವನ್ನು ಮಕ್ಕಳಿಂದ ಕೇಕ್ ಕತ್ತರಿಸಿ, ಸಾರ್ವಜನಿಕರಿಗೆ ಚಿಕನ್ ಬಿರಿಯಾನಿ ಹಂಚುವ ಮೂಲಕ ಆಚರಣೆ ಮಾಡಲಾಯಿತು.

ಸಮಿತಿಯ ಅಧ್ಯಕ್ಷ ಮಂಜಣ್ಣ ಮಾತನಾಡಿ, ಬಾಲ ನಟರಾಗಿ ಪುನೀತ್ ರಾಜಕುಮಾರ್ ಉತ್ತಮ ನಟನೆ ಮೂಲಕ ಮಕ್ಕಳ ಮನಸ್ಸು ಸೂರೆಕೊಂಡಿದ್ದರು. ನಂತರ ಅಪ್ಪು ಯುವಕರ ಕಣ್ಮಣಿಯಾದರು. ರಾಜಕುಮಾರ್, ಯುವರತ್ನ ಸಿನಿಮಾದಲ್ಲಿ ಅವರ ಮನೋಜ್ಞ ಅಭಿನಯ ಹಿರಿಯರು, ಮಹಿಳೆಯರು, ಮಕ್ಕಳು, ಎಲ್ಲರನ್ನು ಸೆಳೆಯುವ ಯುವ ರಾಜಕುಮಾರನಂತಾದರು. ಚಿತ್ರರಂಗದಲ್ಲಿ ರಾಜರತ್ನ ರಂತೆ ಮಿಂಚಿ ಮರೆಯಾದ ಅಪ್ಪು ಅಮರ ಎಂದು ಬಣ್ಣಿಸಿದರು.


ಚಾಮರಾಜನಗರದ ನೃಪತುಂಗ ವೃತ್ತದಲ್ಲಿ ಡಾ.ಪುನೀತ್ ರಾಜ್‌ಕುಮಾರ್ ಅಭಿಮಾನಿಗಳು ಅನ್ನಸಂತರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಸಮಿತಿ ಮಂಜು ಮಿಲನ, ವಿಷ್ಣುಮಣಿ, ಕಾರ್ತಿಕ್ ಪವರ್, ಆದರ್ಶ, ಪ್ರದೀಪ್, ಮಹೇಶ್, ಮೋಹನ್, ಪ್ರಕೃತಿ, ಸುನೈನಾ, ಚೇತನ್ ಇತರರು ಇದ್ದರು.

ಪುಸ್ತಕ ವಿತರಣೆ: ಚಾಮರಾಜನಗರ ತಾಲೂಕಿನ ಕೋಡಿಮೋಳೆ ಗ್ರಾಮದಲ್ಲಿ ಕರ್ನಾಟಕ ರತ್ನ ದಿ.ಪುನೀತ್ ರಾಜಕುಮಾರ್ ಅವರ ಜನ್ಮದಿನಾಚರಣೆ ಅಂಗವಾಗಿ ಭಗತ್ ಸಿಂಗ್ ಯುವ ಸೇನೆ ವತಿಯಿಂದ ಶಾಲಾ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಿಸಲಾಯಿತು. ಇದೇ ವೇಳೆ ಪುನೀತ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಸೇನೆ ಅಧ್ಯಕ್ಷ ಕಾಂತರಾಜು ಮಾತನಾಡಿ, ಪುನೀತ್ ರಾಜಕುಮಾರ್ ಅವರ ಜನ್ಮದಿನವನ್ನು ಸ್ಫೂರ್ತಿ ದಿನ ಎಂದು ಆಚರಿಸಲಾಗುತ್ತಿದೆ. ಅವರು ಕನ್ನಡ ಚಿತ್ರರಂಗ ಮಾತ್ರವಲ್ಲದೆ ಸಾರ್ವಜನಿಕ ಕ್ಷೇತ್ರದಲ್ಲಿ ಯಾರಿಗೂ ತಿಳಿಯದ ಹಾಗೆ ಅಪಾರ ಸೇವೆ ಸಲ್ಲಿಸಿದ್ದಾರೆ. ಸಮಾಜಿಕ ಕಾರ್ಯಗಳ ಮೂಲಕ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಅವರ ಆದರ್ಶನಿಯ ಬದುಕು ಹಾಗೂ ಸೇವಾ ಮನೋಭಾವನೆಯನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದರು. ಈ ಸಂದರ್ಭದಲ್ಲಿ ನಾಗೇಶ್ (ಅಪ್ಪು), ಶಿವು, ಸಿದ್ದರಾಜು, ಪ್ರಜ್ವಲ್, ಮನು ಇತರರು ಇದ್ದರು.


ಚಾಮರಾಜನಗರ ತಾಲೂಕಿನ ಕೋಡಿಮೋಳೆ ಗ್ರಾಮದಲ್ಲಿ ಭಗತ್ ಸಿಂಗ್ ಯುವ ಸೇನೆ ವತಿಯಿಂದ ಶಾಲಾ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಿಸಲಾಯಿತು.

ಜಲಶ್ರೀ ಕುಡಿಯುವ ನೀರು ಘಟಕದಿಂದ ಅನ್ನಸಂತರ್ಪಣೆ


ವೆಂಕಟೇಶ್ವರ ಹಿಂದೂ ಮಿಲಿಟರಿ ಹೋಟೆಲ್, ವೆಂಕಟೇಶ್ವರ ಫ್ಯಾಷನ್, ಜಲಶ್ರೀ ಕುಡಿಯುವ ನೀರು ಘಟಕದ ವತಿಯಿಂದ ಅನ್ನಸಂತರ್ಪಣೆ ಮಾಡಲಾಯಿತು.

ಚಾಮರಾಜನಗರ, ಮಾ.17–ನಗರದ ಶ್ರೀ ವೆಂಕಟೇಶ್ವರ ಹಿಂದೂ ಮಿಲಿಟರಿ ಹೋಟೆಲ್, ವೆಂಕಟೇಶ್ವರ ಫ್ಯಾಷನ್ ಹಾಗೂ ಜಲಶ್ರೀ ಕುಡಿಯುವ ನೀರು ಘಟಕದ ವತಿಯಿಂದ ಪವರ್‌ಸ್ಟಾರ್ ಡಾ.ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬದ ಪ್ರಯುಕ್ತ ಅನ್ನಸಂತರ್ಪಣೆ ನಡೆಯಿತು.

ನಗರದ ಡಿವಿಯೇಷನ್ ರಸ್ತೆಯ ವೆಂಕಟೇಶ್ವರ ಫ್ಯಾಷನ್ ಮುಂಭಾಗದಲ್ಲಿ ಅಪ್ಪು ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿ, ಕೇಕ್ ಕತ್ತರಿಸಿ ನಂತರ ಅನ್ನಸಂತರ್ಪಣೆ ಮಾಡಲಾಯಿತು. ಇದೇ ವೇಳೆ ಹೋಟೆಲ್ ಮಾಲೀಕ ಶ್ರೀನಿವಾಸ, ಬಾಲಾಜಿ, ವೆಂಕಟೇಶ್, ಚೇತನ್, ಉಮೇಶ್, ಮಹೇಶ್, ಸುದೀಪ್, ಮಹದೇವಮ್ಮ ಇತರರು ಹಾಜರಿದ್ದರು.

ಗುರುಮಲ್ಲಪ್ಪ ನಿಧನ

ಚಾಮರಾಜನಗರ: ತಾಲೂಕಿನ ಉಮ್ಮತ್ತೂರು ಗ್ರಾಮದ ಬಿಜೆಪಿ ಹಿರಿಯ ಮುಖಂಡ ಹಾಗೂ ಸಮಾಜ ಸೇವಕ ಗುರುಮಲ್ಲಪ್ಪ (92) ಭಾನುವಾರ ನಿಧನರಾದರು.



ಮೃತರಿಗೆ ಕೌಶಲ್ಯಾಭಿವೃದ್ಧಿ ಇಲಾಖೆಯ ತರಬೇತಿ ಅಧಿಕಾರಿ ಜಿ.ರವಿಶಂಕರ್ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಸೋಮವಾರ ಮಧ್ಯಾಹ್ನ ಉಮ್ಮತ್ತೂರಿನ ಮೃತರ ತೋಟದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ನಿಟ್ರೆ ಗ್ರಾಮದಲ್ಲಿ ಕೃಷಿಹೊಂಡಕ್ಕೆ ಬಿದ್ದು ರೈತ ಸಾವು

ಬೇಗೂರು (ಗುಂಡ್ಲುಪೇಟೆ), ಮಾ.17–ಕಾಲು ಜಾರಿ ಕೃಷಿಹೊಂಡಕ್ಕೆ ಬಿದ್ದು ರೈತ ಮೃತಪಟ್ಟಿರುವ ಘಟನೆ ಬೇಗೂರು ಸಮೀಪದ ನಿಟ್ರೆ ಗ್ರಾಮದಲ್ಲಿ ಶನಿವಾರ ನಡೆದಿದೆ.

ನಿಟ್ರೆ ಗ್ರಾಮದ ರಂಗರಾಜು(35) ಮೃತ ವ್ಯಕ್ತಿ. ಈತ ತಮ್ಮ ಜಮೀನಿನಲ್ಲಿ ಕೆಲಸ ಮಾಡುವಾಗ ಕೃಷಿಹೊಂಡದ ಹತ್ತಿರ ಹೋಗಿದ್ದಾಗ ಕಾಲು ಜಾರಿ ಬಿದ್ದಿದ್ದಾರೆ. ಇದನ್ನು ಗಮನಿಸಿದ ಜಮೀನಲ್ಲಿದ್ದ ಕುಟುಂಬದವರು ಹಾಗೂ ಅಕ್ಕಪಕ್ಕದ ಜಮೀನಿನ ರೈತರು ಕೃಷಿ ಹೊಂಡದಿಂದ ಮೇಲೆತ್ತುವಷ್ಟರಲ್ಲಿ ಅಸ್ವಸ್ಥರಾಗಿದ್ದರು. ತಕ್ಷಣ ಬೇಗೂರಿನ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ.

ಈ ಸಂಬಂಧ ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚುನಾವಣೆಯಲ್ಲಿ ಹಣದ ಪ್ರಭಾವ ನಿಯಂತ್ರಿಸದಿದ್ದರೆ ಪ್ರಜಾಪ್ರಭುತ್ವದ ಮೌಲ್ಯಕ್ಕೆ ಉಳಿಗಾಲವಿಲ್ಲ

• ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅಭಿಪ್ರಾಯ • ಚುನಾವಣಾ ವೆಚ್ಚ 100 ರಿಂದ 200 ಕೋಟಿ ದಾಟಿದೆ • ಇಂತಹ ಚುನಾವಣೆ ಎದುರಿಸಲು ನಮ್ಮಿಂದ ಸಾಧ್ಯವಿಲ್ಲ • ನಮಗೆ ಜನರೇ ಚುನಾವಣಾ ಖರ್ಚು ನೀಡುತ್ತಿದ್ದರು • ಪ್ರಜಾಪ್ರಭುತ್ವದ ಮೌಲ್ಯ ಉಳಿಸಲು ಸುಧಾರಣೆ ತರಬೇಕು

ಮೈಸೂರು, ಮಾ.17(ಬಿಎಲ್‌ಯು)– ಚುನಾವಣೆಯಲ್ಲಿ ಹಣದ ಮೇಲೆ ನಿಯಂತ್ರಣ ಹೇರದ ಹೊರತು ನೈಜ ಪ್ರಜಾಪ್ರಭುತ್ವ ಕಾಣಲು ಸಾಧ್ಯವಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಾನಸ ಗಂಗೋತ್ರಿಯ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ಇಂದು ನಡೆದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಚುನಾವಣಾ ರಾಜಕೀಯ ಸುವರ್ಣ ಮಹೋತ್ಸವ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ಚುನಾವಣೆಗಳಲ್ಲಿ ಹಣದ ಹೊಳೆ ಹರಿಯುತ್ತಿದ್ದು, ವೆಚ್ಚ 100 ರಿಂದ 200 ಕೋಟಿ ದಾಟಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಪ್ರಜಾಪ್ರಭುತ್ವವನ್ನು ನಾವು ಹಾಡಿ ಹೊಗಳುತ್ತಿದ್ದೇವೆ. ಐದು ವರ್ಷಕ್ಕೊಮ್ಮೆ ನಡೆಯುವ ಚುನಾವಣೆ ಹಾಗೂ ಐದು ವರ್ಷದ ಆಡಳಿತವನ್ನೇ ಪ್ರಜಾಪ್ರಭುತ್ವ ಎಂದು ಭಾವಿಸಿದ್ದೇವೆ. ಆದರೆ ಪ್ರಜಾಪ್ರಭುತ್ವ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಒಳ ಪರದೆ ಸರಿಸಿ ನೋಡಿದರೆ ನೋವಾಗುತ್ತದೆ ಎಂದರು.

ನಾನು 1968 ರಲ್ಲಿ ಮೊದಲ ಬಾರಿಗೆ ಚುನಾವಣೆ ಎದುರಿಸಿದಾಗ ಓಡಾಟದ ವೆಚ್ಚಕ್ಕಾಗಿ ಜನರೇ ನಮಗೆ ಹಣ ಕೊಟ್ಟು ಆಶೀರ್ವಾದ ಮಾಡುತ್ತಿದ್ದರು. ಕಂತೆ ಹಣವನ್ನು ನಾನು ನೋಡಿಯೇ ಇರಲಿಲ್ಲ. ಪ್ರಾಯಶಃ ಶ್ರೀನಿವಾಸಪ್ರಸಾದ್ ಅವರಿಗೂ ಈ ಅನುಭವವಾಗಿದೆ. ಆದರೆ 1971ರ ವೇಳೆಗೆ ಚುನಾವಣಾ ರಾಜಕೀಯದಲ್ಲಿ ದೊಡ್ಡ ಬದಲಾವಣೆ ಆಯಿತು. ಮೊದಲ ಬಾರಿಗೆ ಕಾಂಗ್ರೆಸ್ ಕಚೇರಿಯಲ್ಲಿ ಚುನಾವಣಾ ವೆಚ್ಚಕ್ಕಾಗಿ ಪಾರ್ಟಿ ಫಂಡ್‌ನಿಂದ ಹತ್ತು ಸಾವಿರ ರೂಪಾಯಿ ನೋಟಿನ ಕಂತೆ ಕೊಟ್ಟರು. ಆಗಲೆ ನಾನು ನೋಟಿನ ಕಂತೆ ನೋಡಿದ್ದು ಎಂದು ಎಸ್.ಎಂ.ಕೃಷ್ಣ ಅಂದಿನ ಚುನಾವಣಾ ಬೆಳವಣಿಗೆಗಳ ನೆನಪುಗಳನ್ನು ಮೆಲಕು ಹಾಕಿದರು.

ತರುವಾಯ ಹಣದ ಹೊಳೆ ಹರಿಯಲು ಆರಂಭವಾಯಿತು. ಹಣದ ಪ್ರಭಾವ ವಿಲ್ಲದೆ ಚುನಾವಣೆ ನಡೆಸಲು ಸಾಧ್ಯವಿಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಮೂಲಕ ಈಗಿನ ಪ್ರಜಾಪ್ರಭುತ್ವದಲ್ಲಿ ಹಣದ ಮೇಲೆ ಚುನಾವಣೆ ನಿಂತಿದ್ದು, ಹಣ ಎಲ್ಲವನ್ನು ನಿಯಂತ್ರಿಸುವಂತಿದೆ ಎಂದು ನೋವು ವ್ಯಕ್ತಪಡಿಸಿದರು.

ಇವತ್ತು ಒಂದು ಕ್ಷೇತ್ರದ ವಿಧಾನಸಭಾ ಚುನಾವಣೆಯಲ್ಲಿ 100,150, 200 ಕೋಟಿ ಮೀರಿ ವೆಚ್ಚವಾಗುತ್ತಿದೆ. ಇಷ್ಟು ಹಣವನ್ನು ಖರ್ಚು ಮಾಡುವ ಬಹಳಷ್ಟು ಪುಣ್ಯಾತ್ಮರಿದ್ದಾರೆ. ಇದನ್ನು ನೋಡಿದರೆ ಇದು ನಮ್ಮ ಪ್ರಜಾಪ್ರಭುತ್ವದ ಮೌಲ್ಯವೇ ಎಂಬ ಪ್ರಶ್ನೆ ಎದುರಾಗುತ್ತಿದೆ ಎಂದರು.

ಇಂತಹ ಪರಿಸ್ಥಿತಿಯಲ್ಲಿ ಚುನಾವಣೆಯಲ್ಲಿ ಸ್ಪರ್ಧೆ ಮಾಡಲು ನಾವು ಅನರ್ಹರಾಗಿದ್ದೇವೆ. ಇಷ್ಟು ಹಣ ವೆಚ್ಚ ಮಾಡಲು ನಮ್ಮಿಂದ ಸಾಧ್ಯವಾಗದ ಮಾತಾಗಿದೆ ಎಂದು ಎಸ್.ಎಂ.ಕೃಷ್ಣ ಹೇಳಿದರು.


ಈ ಹಿನ್ನೆಲೆ ಚುನಾವಣೆಯಲ್ಲಿ ಹಣದ ಮೇಲೆ ನಿಯಂತ್ರಣ ಹೇರದ ಹೊರತು ನೈಜ ಪ್ರಜಾಪ್ರಭುತ್ವ ಕಾಣಲು ಸಾಧ್ಯವಿಲ್ಲ. ಪ್ರಜಾಪ್ರಭುತ್ವದ ಮೌಲ್ಯ ಉಳಿಸಲು ಚುನಾವಣೆಯಲ್ಲಿ ಹಣದ ನಿಯಂತ್ರಣ ತಪ್ಪಿಸಬೇಕು ಎಂದು ಸಲಹೆ ನೀಡಿದರು.

ಇತ್ತೀಚಿನ ಲೋಕಸಭಾ ಹಾಗೂ ವಿಧಾನಸಭಾ ಅಧಿವೇಶನದಲ್ಲಿ ಜನಪ್ರತಿನಿಧಿಗಳು ಬಳಸುತ್ತಿರುವ ಭಾಷೆ ಕೂಡ ಪ್ರಜಾಪ್ರಭುತ್ವಕ್ಕೆ ಧಕ್ಕೆಯಾಗಿದೆ. ಇದು ದುರದೃಷ್ಟಕರ ಸಂಗತಿಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದ ಎಸ್.ಎಂ. ಕೃಷ್ಣ, ಈ ವಿಚಾರದಲ್ಲಿ ಕೂಡ ಸುಧಾರಣೆಯಾಗಬೇಕು ಎಂದು ತಿಳಿಸಿದರು.


ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣ ಕುಮಾರ್ ಅವರು ಶ್ರೀನಿವಾಸ ಪ್ರಸಾದ್ ಕುರಿತ ಸ್ವಾಭಿಮಾನಿ ನೆನಪುಗಳು ಅಭಿನಂದನಾ ಗ್ರಂಥ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಶ್ರೀನಿವಾಸ ಪ್ರಸಾದ್ ಹಾಗೂ ಅವರ ಪತ್ನಿ ಭಾಗ್ಯಲಕ್ಷ್ಮಿ ಪ್ರಸಾದ್ ಅವರನ್ನು ಅಭಿನಂದಿಸಲಾಯಿತು.

ಮಾಜಿ ಸಚಿವ ಪಿಜಿಆರ್ ಸಿಂಧ್ಯಾ ಪ್ರಾಸ್ತಾವಿಕ ಮಾತುಗಳನ್ನಾಡಿದರು, ಲೇಖಕ ಡಾ.ನಾಗಣ್ಣ ಅಭಿನಂದನಾ ಗ್ರಂಥ ಕುರಿತು ಮಾತನಾಡಿದರು. ಡಾ.ಪ್ರಧಾನ ಗುರುದತ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.



ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ಭಾನುವಾರ 50 ವರ್ಷಗಳ ಚುನಾವಣಾ ರಾಜಕೀಯ ಸುವರ್ಣ ಮಹೋತ್ಸವ ಕಂಡು ರಾಜಕೀಯ ನಿವೃತ್ತಿ ಘೋಷಿಸಿದ ಸಂಸದ ಶ್ರೀನಿವಾಸ ಪ್ರಸಾದ್ ಹಾಗೂ ಅವರ ಪತ್ನಿ ಭಾಗ್ಯಲಕ್ಷ್ಮಿ ಪ್ರಸಾದ್ ಅವರನ್ನು ಅಭಿನಂದಿಸಲಾಯಿತು. ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, ಶಾಸಕ ಜಿ.ಟಿ.ದೇವೇಗೌಡ, ಮಾಜಿ ಸಚಿವ ಪಿಜಿಆರ್ ಸಿಂಧ್ಯಾ, ಸಾಹಿತಿಗಳಾದ ಡಾ.ಸಿ.ಪಿ.ಕೃಷ್ಣಕುಮಾರ್, ಡಾ.ಪ್ರಧಾನ ಗುರುದತ್, ಡಾ.ನಾಗಣ್ಣ ಅವರನ್ನು ಚಿತ್ರದಲ್ಲಿ ಕಾಣಬಹುದು.



ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ಭಾನುವಾರ ನಡೆದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಚುನಾವಣಾ ರಾಜಕೀಯ ಸುವರ್ಣ ಮಹೋತ್ಸವ ಅಭಿನಂದನಾ ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಮಾತನಾಡಿದರು.

ಅಂದು ನಾವೆಲ್ಲಾ ಗಡಗಡ ನಡುಗುತ್ತಿದ್ದೆವು

ಟಿ.ಎನ್.ಶೇಷನ್ ಕೇಂದ್ರ ಚುನಾವಣಾ ಆಯುಕ್ತರಾಗಿದ್ದ ಸಂದರ್ಭದಲ್ಲಿ ಅಭ್ಯರ್ಥಿಗಳಾದ ನಾವೆಲ್ಲಾ ಗಡಗಡ ಎಂದು ನಡುಗುತ್ತಿದ್ದೆವು. ಆದರೆ ಈಗಿನ ಪರಿಸ್ಥಿತಿ ಆ ರೀತಿ ಇಲ್ಲ ಎಂದು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅಸಮಾಧಾನ ವ್ಯಕ್ತಪಡಿಸಿದರು.

ಚುನಾವಣಾ ಪ್ರಕ್ರಿಯೆಯಲ್ಲಿ ಟಿ.ಎನ್.ಶೇಷನ್ ತಂದ ಸುಧಾರಣೆಗಳಿಂದ ಬಹಳಷ್ಟು ಬದಲಾವಣೆ ಆಗಿತ್ತು. ಚುನಾವಣಾ ಆಯೋಗವೆಂದರೆ ಹೆದರಿಕೆ ಇತ್ತು, ಶಿಸ್ತು ಇತ್ತು. ಆದರೆ ಈಗ ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆ ತರಲು ಯಾರೂ ಗಮನ ಹರಿಸುತ್ತಿಲ್ಲ ಎಂದು ಹೇಳಿದರು. ಈಗ ಹೇಗಾದರೂ ಮಾಡಿ ಚುನಾವಣಾ ವ್ಯವಸ್ಥೆಯಲ್ಲಿ ಹಣ ನಿಯಂತ್ರಿಸಲು ಪ್ರಧಾನಮಂತ್ರಿ ನರೇಂದ್ರ ಮೋದಿ ತಂತ್ರಗಾರಿಕೆ ರೂಪಿಸಬೇಕು ಎಂದು ಎಸ್.ಎಂ.ಕೃಷ್ಣ ಮನವಿ ಮಾಡಿದರು.

ಭಾರತವನ್ನು ಅಭಿವೃದ್ಧಿ ಪಥದಲ್ಲಿ ಅತಿ ಎತ್ತರಕ್ಕೆ ಕೊಂಡೊಯ್ದಿರುವ ನರೇಂದ್ರ ಮೋದಿ ಅವರೇ ಮುಂದಿನ ಬಾರಿಯೂ ಪ್ರಧಾನಮಂತ್ರಿ ಆಗುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಮುಂದಿನ ದಿನಗಳಲ್ಲಿ ಚುನಾವಣೆಯಲ್ಲಿ ಹಣದ ಹರಿವಿಕೆ ತಡೆಗಟ್ಟಿ, ಪ್ರಜಾಪ್ರಭುತ್ವ ರಕ್ಷಣೆ ಮಾಡಲು ನರೇಂದ್ರ ಮೋದಿ ಮಾರ್ಗ ಹುಡುಕಬೇಕು ಎಂದು ಗೌರವಪೂರ್ವಕವಾಗಿ ಮನವಿ ಮಾಡುತ್ತೇನೆ ಎಂದು ಎಸ್.ಎಂ.ಕೃಷ್ಣ ತಿಳಿಸಿದರು.

ಮೈಸೂರು ಜನರ ರಾಜಕೀಯ ಪ್ರಜ್ಞೆ ಮಾದರಿ

ಮೈಸೂರು ಜನರಲ್ಲಿ ಅನಾದಿ ಕಾಲದಿಂದಲೂ ರಾಜಕೀಯ ಪ್ರಜ್ಞೆ ಮತ್ತು ತಿಳಿವಳಿಕೆ ಗಟ್ಟಿಯಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಪ್ರಶಂಸಿಸಿದರು.

ನಾನು ವಿದ್ಯಾರ್ಥಿದೆಸೆಯಿಂದ ಮೈಸೂರು ಭಾಗದ ರಾಜಕಾರಣವನ್ನು ಸೂಕ್ಷ್ಮವಾಗಿ ಗಮನಿಸಿದ್ದೇನೆ ಮೈಸೂರಿನ ಜನರಲ್ಲಿ ರಾಜಕೀಯ ಮತ್ತು ಸಾಮಾಜಿಕ ಪ್ರಬುದ್ಧತೆ ಇದೆ ಎಂದರು.

ಈ ಮೂಲಕ ಮೈಸೂರು ರಾಜಕೀಯ ಅರಿವು, ಪ್ರಜ್ಞೆಗೆ ಮಾದರಿಯಾಗಿದೆ. ಇಲ್ಲೇ ಇದ್ದ ನನಗೆ ಮೈಸೂರು ಜನರ ಪ್ರಬುದ್ಧತೆ ತಿಳಿದಿದೆ ಎಂದು ಎಸ್.ಎಂ.ಕೃಷ್ಣ ಮೈಸೂರು ಜನರನ್ನು ಹಾಡಿ ಹೊಗಳಿದರು.

ಸರ್ವ ಜನಾಂಗದ ನಾಯಕ ಶ್ರೀನಿವಾಸ ಪ್ರಸಾದ್

ಮಾಜಿ ಸಚಿವ ಪಿಜಿಆರ್ ಸಿಂಧ್ಯಾ ಅಭಿಮತ



ಮೈಸೂರು, ಮಾ.17(ಎಂಟಿವೈ)– ರಾಜ್ಯಕಂಡ ಅಪರೂಪದ ಹಾಗೂ ಸಚ್ಚಾರಿತ್ರ್ಯವುಳ್ಳ ರಾಜಕಾರಣಿಗಳಲ್ಲಿ ಒಬ್ಬರಾಗಿರುವ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಕೇವಲ ದಲಿತ ನಾಯಕ ಮಾತ್ರವಲ್ಲದೆ, ಸರ್ವಜನಾಂಗದ ನಾಯಕರಾಗಿದ್ದಾರೆ ಎಂದು ಮಾಜಿ ಸಚಿವ ಪಿಜಿಆರ್ ಸಿಂಧ್ಯಾ ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಭಾನುವಾರ ಆಯೋಜಿಸಿದ್ದ 'ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಚುನಾವಣಾ ರಾಜಕೀಯ ಸುವರ್ಣ ಮಹೋತ್ಸವ' ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಕಳೆದ 50 ವರ್ಷದಿಂದ ರಾಜಕಾರಣ ಮಾಡಿಕೊಂಡು ಬರುತ್ತಿರುವ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಸುದೀರ್ಘ ಅವಧಿಯಲ್ಲಿ ಯಾವುದೇ ಹಗರಣ, ಅಕ್ರಮದಲ್ಲಿ ಸಿಲುಕಿಲ್ಲ. ರಾಜ್ಯಕಂಡ ಸಚ್ಚಾರಿತ್ರ್ಯ ಹಾಗೂ ಅಪರೂಪದ ರಾಜಕಾರಣಿಗಳಲ್ಲಿ ಶ್ರೀನಿವಾಸ್ ಪ್ರಸಾದ್ ಒಬ್ಬರು. ಅವರನ್ನು ಕೇವಲ ದಲಿತ ಸಮುದಾಯದ ನಾಯಕ ಎಂದು ನೋಡದೇ, ಸರ್ವ ಸಮುದಾಯಗಳ ನಾಯಕನಾಗಿ ನೋಡಬೇಕು. ಸಂಸದರಾಗಿ, ಶಾಸಕರಾಗಿ, ಕೇಂದ್ರ ಹಾಗೂ ರಾಜ್ಯ ಸರ್ಕಾರದಲ್ಲಿ ಸಚಿವರಾಗಿ ದಕ್ಷತೆಯಿಂದ ಕಾರ್ಯನಿರ್ವಹಿಸಿದ್ದಾರೆ ಎಂದು ತಿಳಿಸಿದರು.

ವಿ.ಶ್ರೀನಿವಾಸ್ ಪ್ರಸಾದ್ ಅವರು ಚುನಾವಣೆ ರಾಜಕೀಯದಿಂದ ನಿವೃತ್ತಿಯಾಗುತ್ತಿರುವುದನ್ನು ಯಾರೂ ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ. ಅವರು ನಿವೃತ್ತಿಯಾಗಲಿ ಎಂದು ಯಾರೂ ಬಯಸುವುದಿಲ್ಲ ಆದರೂ ಚುನಾವಣಾ ರಾಜಕೀಯದಿಂದ ನಿವೃತ್ತಿ ಹೊಂದುತ್ತಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್‌ಗೆ ಪರ್ಯಾಯ ಶಕ್ತಿ ರೂಪಿಸುವ ನಿಟ್ಟಿನಲ್ಲಿ ಜನತಾ ಪಕ್ಷ ಉದಯವಾಯಿತು. ಆ ಸಂದರ್ಭದಲ್ಲಿ 1974ರಲ್ಲಿ ಮೈಸೂರಲ್ಲಿ ನಡೆದ ಉಪಚುನಾವಣೆಯಲ್ಲಿ ವಿ.ಶ್ರೀನಿವಾಸ್ ಪ್ರಸಾದ್ ಸ್ಪರ್ಧಿಸಿದ್ದರು. 2024ಕ್ಕೆ ಅವರು ರಾಜಕೀಯ ರಂಗ ಪ್ರವೇಶಿಸಿ 50 ವರ್ಷ ಪೂರ್ಣಗೊಂಡಿದೆ. ಸುದೀರ್ಘ ಅವಧಿ ರಾಜಕಾರಣದಲ್ಲಿ ಯಾವಾಗಲೂ ಇದ್ದುದ್ದನ್ನು ಇದ್ದ ಹಾಗೆ ನೇರವಾಗಿ ಹೇಳುವ ಗುಣವುಳ್ಳವರಾಗಿದ್ದಾರೆ. ಅವರ ಜೀವನ ತೆರೆದ ಪುಸ್ತಕದಂತೆ, ಕನ್ನಡಿಯಂತೆ ಇದೆ ಎಂದರು.

ರಾಜಕೀಯದಲ್ಲಿ ವಿ.ಶ್ರೀನಿವಾಸ್ ಪ್ರಸಾದ್ ಸ್ವಲ್ಪ ಮಟ್ಟಿಗೆ ಹೊಂದಾಣಿಕೆ ರಾಜಕಾರಣ ಮಾಡಿದ್ದರೆ ಇನ್ನಷ್ಟು ಒಳ್ಳೆಯ ಹುದ್ದೆ ಪಡೆಯಬಹುದಿತ್ತು. ಆದರೆ, ಅವರು ಹೊಂದಾಣಿಕೆ ಮಾಡಿಕೊಳ್ಳಲಿಲ್ಲ. ಆದರೂ ಸಿಕ್ಕ ಅವಕಾಶವನ್ನು ಸದ್ಬಳಕೆ ಮಾಡಿಕೊಂಡಿದ್ದಾರೆ. ವಿದ್ಯಾರ್ಥಿ ನಾಯಕನಾಗಿಯೂ ಅನೇಕ ಹೋರಾಟಗಳಲ್ಲಿ ಪಾಲ್ಗೊಂಡಿದ್ದಾರೆ ಎಂದು ತಿಳಿಸಿದರು.

ಶ್ರೀನಿವಾಸ್‌ಪ್ರಸಾದ್ ಅವರನ್ನು ಅರ್ಥ ಮಾಡಿಕೊಂಡಷ್ಟೇ ಅಪಾರ್ಥವನ್ನು ಮಾಡಿಕೊಂಡಿದ್ದಾರೆ. ಅವರು ಪ್ರಬಲ ಕೋಮಿನ ವಿರುದ್ಧ ಇದ್ದಾರೆ ಎನ್ನುವ ಆರೋಪ ಕೇಳಿ ಬಂದಿದೆ. ಆದರೆ ಎದುರಿಸಿದ 9 ಲೋಕಸಭಾ ಚುನಾವಣೆಯಲ್ಲಿ 6 ಬಾರಿ ಗೆಲುವು ಸಾಧಿಸಿದ್ದಾರೆ. 5 ವಿಧಾನಸಭಾ ಚುನಾವಣೆಯಲ್ಲಿ 2 ಬಾರಿ ಗೆಲುವು ಸಾಧಿಸಿದ್ದಾರೆ. ಕೇವಲ ಒಂದೇ ಸಮುದಾಯಕ್ಕೆ ಸೀಮಿತವಾಗಿದ್ದರೆ 8 ಚುನಾವಣೆಗಳಲ್ಲಿ ಗೆಲುವು ಸಾಧಿಸಲು ಸಾಧ್ಯವಿರಲಿಲ್ಲ. ಇದರಿಂದಾಗಿ ಅವರು ಪ್ರಬಲ ಸಮುದಾಯದ ವಿರುದ್ಧ ಇದ್ದಾರೆ ಎನ್ನುವುದು ಸುಳ್ಳು ಎಂದು ಸಾಬೀತಾಗಿದೆ ಎಂದು ಹೇಳಿದರು.

ದೇವರು ಆಯಸ್ಸು, ಆರೋಗ್ಯ ಕೊಟ್ಟರೆ ವಿ.ಶ್ರೀನಿವಾಸ್ ಪ್ರಸಾದ್ ಅವರಂತಹ ವ್ಯಕ್ತಿಗಳಿಗೆ ನೀಡುವಂತೆ ಕೋರುತ್ತೇನೆ. ಶ್ರೀನಿವಾಸ್ ಪ್ರಸಾದ್ ಅವರು ಭಗವಂತನನ್ನು ಎಷ್ಟು ನಂಬುತ್ತಾರೋ ತಿಳಿದಿಲ್ಲ. ಆದರೆ ನಾನು ನಂಬಿರುವ ಭಗವಂತನಲ್ಲಿ ಪ್ರಸಾದ್ ಅವರಿಗೆ ಆಯಸ್ಸು, ಆರೋಗ್ಯ ಕೊಟ್ಟು, ಶತಾಯುಷಿಯಾಗಿ ಕಾಪಾಡಲಿ ಎಂದು ಪ್ರಾರ್ಥನೆ ಮಾಡುತ್ತೇನೆ ಎಂದು ಶುಭ ಕೋರಿದರು.

ಶ್ರೀನಿವಾಸ ಪ್ರಸಾದ್ ಸ್ವಾಭಿಮಾನ ಸಂಪನ್ನ ರಾಜಕಾರಣಿ

'ಸ್ವಾಭಿಮಾನಿ ನೆನಪುಗಳು' ಕೃತಿ ಬಿಡುಗಡೆ ಮಾಡಿದ ಸಾಹಿತಿ ಸಿಪಿಕೆ ಶ್ಲಾಘನೆ




ಮೈಸೂರು, ಮಾ.17(ಎಂಟಿವೈ)– ಜೀವನದುದ್ದಕ್ಕೂ ಸತ್ವ, ತತ್ವ, ಸತ್ಯವನ್ನು ಮೈಗೂಡಿಸಿಕೊಂಡಿರುವ ಸಂಸದ ವಿ.ಶ್ರೀನಿವಾಸಪ್ರಸಾದ್ ಸ್ವಾಭಿಮಾನ ಸಂಪನ್ನ ರಾಜಕಾರಣಿ. ಅವರು ಕೇವಲ ಸಾಮಾನ್ಯ ರಾಜಕಾರಣಿಯಾಗಿರದೇ ರಾಜನೀತಿಜ್ಞ ಮತ್ತು ಮುತ್ಸದ್ದಿಯೂ ಆಗಿದ್ದಾರೆ ಎಂದು ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಭಾನುವಾರ ನಡೆದ ಸಂಸದ ವಿ.ಶ್ರೀನಿವಾಸಪ್ರಸಾದ್ ಅಭಿನಂದನಾ ಸಮಾರಂಭದಲ್ಲಿ 'ಸ್ವಾಭಿಮಾನಿ ನೆನಪುಗಳು' ಅಭಿನಂದನಾ ಗ್ರಂಥ ಬಿಡುಗಡೆ ಮಾಡಿ ಮಾತನಾಡಿದ ಅವರು, ರಾಜಕಾರಣದಲ್ಲಿ 50 ವರ್ಷ ಪೂರೈಸಿರುವ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರಿಗೆ ಬುದ್ಧ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಈ ಇಬ್ಬರು ಮಹನೀಯರು ಒಳಗಣ್ಣು ಇದ್ದಂತೆ. ಸದಾ ಅವರ ತತ್ವ ಸಿದ್ಧಾಂತವನ್ನು ಅಳವಡಿಸಿಕೊಂಡು ಜೀವನ ಸಾಗಿಸಿದ್ದಾರೆ. ರಾಜಕಾರಣದಲ್ಲಿ ಅವರು ಎಂದಿಗೂ ಸ್ವಾಭಿಮಾನವನ್ನು ಬಿಟ್ಟು ಕೊಟ್ಟಿಲ್ಲ. ಡಾ.ಬಿ.ಆರ್. ಅಂಬೇಡ್ಕರ್ ಅವರು ಮನುಷ್ಯನಿಗೆ ಸ್ವಾಭಿಮಾನ ಪ್ರಿಯವಾದದ್ದೆ ಹೊರತು ಲೌಕಿಕ ಲಾಭವಲ್ಲ ಎಂದು ಹೇಳಿದ್ದರು. ಪ್ರಸಾದ್ ಅವರಿಗೆ ಸ್ವಾಭಿಮಾನವೇ ಬಹಳ ಪ್ರಿಯವಾದದ್ದು. ಅವರ ವ್ಯಕ್ತಿತ್ವದ ಹೆಗ್ಗುರುತು ಮತ್ತು ಗುರಿ ಶ್ಲಾಘನೀಯ ಎಂದರು.

ಪಾಶ್ಚಾತ್ಯ ವಿದ್ವಾಂಸರೊಬ್ಬರು ರಾಜನೀತಿಜ್ಞನಾದವನು ಭವಿಷ್ಯದ ಜನಾಂಗದ ಬಗ್ಗೆ ಚಿಂತಿಸುತ್ತಾನೆ. ರಾಜಕಾರಣಿಯಾದವನು ಮುಂದಿನ ಚುನಾವಣೆ ಬಗ್ಗೆ ಚಿಂತಿಸುತ್ತಾನೆಂದು ಹೇಳಿದ್ದಾನೆ. ವಿ.ಶ್ರೀನಿವಾಸ ಪ್ರಸಾದ್ ಅವರು ಮುಂದಿನ ಜನಾಂಗದ ಕುರಿತು ಚಿಂತನೆ ಮಾಡುವ ಮಹನೀಯರಲ್ಲಿ ಅಗ್ರಮಾನ್ಯರು. ರಾಜಕೀಯ ಹೊಂದಾಣಿಕೆ ಅನಿವಾರ್ಯವಾದರೂ ಸ್ವಾಭಿಮಾನ ಬಲಿಕೊಟ್ಟಿಲ್ಲ. ಪಕ್ಷಾಂತರಿ ಇರಬಹುದು ತತ್ವಾಂತರಿ ಅಲ್ಲ ಎಂದು ಪ್ರಸಾದ್ ಹೇಳಿಕೊಂಡಿದ್ದಾರೆ. ಅವರು ತತ್ತ್ವ, ಸತ್ವ ಮತ್ತು ಸತ್ಯ ಮೂರನ್ನು ಒಳಗೊಂಡವರು. ರಾಜಕಾರಣದಲ್ಲಿ ಈ ಮೂರು ಅಂಶವನ್ನು ಅಪ್ಪಿಕೊಳ್ಳುವುದು ಸುಲಭವಲ್ಲ. ಆದರೆ, ಪ್ರಸಾದ್ ಅವರು ಅವುಗಳನ್ನು ಅಪ್ಪಿಕೊಂಡು ಯಶಸ್ವಿಯಾಗಿ ಸೇವೆ ಸಲ್ಲಿಸಿದ್ದಾರೆ. 5 ದಶಕಗಳ ಕಾಲ ನಿಷ್ಕಳಂಕ ರಾಜಕಾರಣ ಮತ್ತು ಜನತಾ ಸೇವೆ ಮಾಡಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ರಾಜಕೀಯ ಪ್ರವೇಶಿಸುವಾಗ ಅದ್ಧೂರಿಯಾಗಿ ಸ್ವಾಗತಿಸುವುದು ಸಹಜ. ಈಗಂತೂ ಜೈಲಿನಿಂದ ಬಂದವರಿಗೂ ಅದ್ಧೂರಿ ಸ್ವಾಗತ ದೊರೆಯುತ್ತಿದೆ. ಪ್ರಸಾದ್ ಅವರ ನಿರ್ಗಮನವನ್ನು ಬಹಳ ಅದ್ಧೂರಿಯಾಗಿ ಆಚರಿಸುತ್ತಿರುವುದು ಬಹಳ ವಿಶೇಷ. ಪ್ರಸಾದ್ ಅವರು ಚುನಾವಣಾ ರಾಜಕಾರಣದಿಂದ ನಿವೃತ್ತಿ ಪಡೆದ ಮೇಲೂ ಬೇರೆ ಕೆಲಸಗಳನ್ನು ಮಾಡಲಿ ಎಂದು ಸಲಹೆ ನೀಡಿದ ಅವರು, ಪ್ರಸಾದ್ ಅವರಿಗೆ ದೇವರ ಮೇಲೆ ನಂಬಿಕೆ ಇದೆಯೋ ಇಲ್ಲವೋ ಗೊತ್ತಿಲ್ಲ. ಒಳಿತು ಮಾಡುವುದನ್ನು ನಂಬುತ್ತಾರೆ. ಅದೇ ಅವರ ದೇವರಾಗಿದೆ. ಮುಂದಿನ ದಿನಗಳೂ ಅವರಿಗೆ ಒಳಿತನ್ನು ತರಲೆಂದು ಹಾರೈಸಿದರು. ವಿ.ಶ್ರೀನಿವಾಸಪ್ರಸಾದ್ ಕುರಿತ ರಚಿಸಿದ 'ಅನನ್ಯ' ಶೀರ್ಷಿಕೆಯ ಕವನವನ್ನು ವಾಚಿಸಿದರು.

ಕೃತಿ ಕುರಿತು ಸಾಹಿತಿ ಪ್ರೊ.ಸಿ.ನಾಗಣ್ಣ ಮಾತನಾಡಿ, ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರು 50 ವರ್ಷ ರಾಜಕಾರಣದಲ್ಲಿ ಪೂರೈಸಿದ್ದು, ಸುದೀರ್ಘ ಅವಧಿಯಲ್ಲಿ ಏಳು–ಬೀಳು ಕಂಡಿದ್ದಾರೆ. ರಾಜಕಾರಣಕ್ಕೆ ಬರುವ ಮುನ್ನ ಫುಟ್ಬಾಲ್ ಆಟಗಾರರಾಗಿದ್ದ ಸಂಸದ ವಿ. ಶ್ರೀನಿವಾಸ್ ಪ್ರಸಾದ್ ಕ್ರೀಡಾಸ್ಫೂರ್ತಿ ಮೈಗೂಡಿಸಿಕೊಂಡಿದ್ದು, ರಾಜಕಾರಣದಲ್ಲೂ ಕ್ರೀಡಾಸ್ಫೂರ್ತಿ ಪ್ರದರ್ಶಿಸಿದ್ದಾರೆ. ಇದರಿಂದ ಗೆದ್ದಾಗ ಬೀಗದೆ, ಸೋತಾಗ ಕುಗ್ಗದೆ ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸಿದ್ದಾರೆ. ಅವರು ತಮ್ಮ ಸಾರ್ವಜನಿಕ ಬದುಕಿನಲ್ಲಿ ಕ್ರೀಡಾಪಟುವಾಗಿ ಬದುಕಿದ್ದಾರೆ. ದಬ್ಬಾಳಿಕೆಗೆ ಎದೆಗುಂದದೆ ಜನ ಸೇವೆ ಮಾಡಿದ್ದಾರೆ. ಸ್ವಾಭಿಮಾನಿ ನೆನಪುಗಳು ಪುಸ್ತಕದ ಮೂಲಕ ವಿ.ಶ್ರೀನಿವಾಸಪ್ರಸಾದ್ ಅವರ ವ್ಯಕ್ತಿತ್ವ ಮುಂದಿನ ಹಲವು ಪೀಳಿಗೆಗೆ ಲಭ್ಯವಾಗುತ್ತದೆ ಎಂದರು.



ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ಭಾನುವಾರ ನಡೆದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಚುನಾವಣಾ ರಾಜಕೀಯ ಸುವರ್ಣ ಮಹೋತ್ಸವ ಅಭಿನಂದನಾ ಸಮಾರಂಭದಲ್ಲಿ ಭಾಗಿಯಾಗಿದ್ದ ಶ್ರೀನಿವಾಸ ಪ್ರಸಾದ್ ಅವರ ಪುತ್ರಿಯರು ಹಾಗೂ ಅಳಿಯಂದಿರಾದ ಹರ್ಷವರ್ಧನ್ ಮತ್ತು ಪೂರ್ಣಿಮಾ, ಡಾ.ಮೋಹನ್ ಮತ್ತು ಪೂನಂ ಹಾಗೂ ಪ್ರತಿಮಾ ಮತ್ತು ದೇವರಾಜು ಅವರನ್ನು ಚಿತ್ರದಲ್ಲಿ ಕಾಣಬಹುದು.

ಶಸ್ತ್ರಾಸ್ತ್ರಗಳನ್ನು ಪೊಲೀಸ್ ಠಾಣೆಯಲ್ಲಿ ಠೇವಣಿ ಇಡುವಂತೆ ಆದೇಶ

ಮೈಸೂರು, ಮಾ.17(ಎಸ್‌ಬಿಡಿ)– ಲೋಕಸಭಾ ಚುನಾವಣೆ ಪ್ರಕ್ರಿಯೆ ಮುಗಿಯುವವರೆಗೆ ಶಸ್ತ್ರಾಸ್ತ್ರಗಳನ್ನು ಪೊಲೀಸ್ ಠಾಣೆಗಳಲ್ಲಿ ಠೇವಣಿ ಇಡುವಂತೆ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಆದೇಶಿಸಿದ್ದಾರೆ.

ಲೋಕಸಭಾ ಚುನಾವಣೆ ಮಾದರಿ ನೀತಿ ಸಂಹಿತೆ ಜೂನ್ 6ರವರೆಗೆ ಜಾರಿಯಲ್ಲಿರಲಿದ್ದು, ಈ ಅವಧಿಯಲ್ಲಿ ಯಾವುದೇ ವ್ಯಕ್ತಿ ಶಸ್ತ್ರಾಸ್ತ್ರ ಇಟ್ಟುಕೊಳ್ಳುವಂತಿಲ್ಲ. ಹಾಗಾಗಿ ಆಯುಧ ರಹದಾರಿ ಹೊಂದಿರುವವರು ಚುನಾವಣೆ ಪ್ರಕ್ರಿಯೆ ಮುಗಿಯುವವರೆಗೂ ತಮ್ಮ ಬಳಿ ಇರುವ ಶಸ್ತ್ರಾಸ್ತ್ರಗಳನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಠೇವಣಿ ಇಡುವಂತೆ ಸೂಚಿಸಿದ್ದಾರೆ.

ಬ್ಯಾಂಕ್ ಇನ್ನಿತರ ಸಂಸ್ಥೆಗಳ ಭದ್ರತೆ, ಗನ್‌ಮ್ಯಾನ್ ಇತ್ಯಾದಿ ಅತ್ಯವಶ್ಯಕ ಕಾರಣಗಳಿಂದ ಶಸ್ತ್ರಾಸ್ತ್ರ ಠೇವಣಿಯಿಂದ ವಿನಾಯಿತಿ ಪಡೆಯಲು, ಲಿಖಿತ ರೂಪದಲ್ಲಿ ಸಕಾಲಕ್ಕೆ ಅರ್ಜಿ ಸಲ್ಲಿಸಬೇಕು. ಸ್ಕ್ರೀನಿಂಗ್ ಕಮಿಟಿ ಅರ್ಜಿಗಳ ಪರಿಶೀಲನೆ ನಡೆಸಿ, ಪರವಾನಗಿದಾರ ನೀಡಿರುವ ಕಾರಣ ನಿಖರವಾಗಿದ್ದು, ವಿನಾಯಿತಿ ಅತ್ಯವಶ್ಯ ಎನ್ನುವುದು ಖಚಿತವಾದ ಬಳಿಕ ಈ ನಿಟ್ಟಿನಲ್ಲಿ ಕ್ರಮ ವಹಿಸಲಿದೆ ಎಂದು ತಿಳಿಸಿದ್ದಾರೆ.

ಎಚ್ಚರವಿರಲಿ: ಚುನಾವಣೆ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದಂತೆ ಹಾಗೂ ಕಾನೂನು–ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಯಾವುದೇ ವ್ಯಕ್ತಿ ಶಸ್ತ್ರಾಸ್ತ್ರ, ಸ್ಫೋಟಕ ವಸ್ತುಗಳು ಹಾಗೂ ಮಾರಕಾಸ್ತ್ರಗಳನ್ನು ಒಯ್ಯುವುದು ಹಾಗೂ ಹಿಡಿದುಕೊಂಡು ಓಡಾಡುವುದನ್ನು ನಿಷೇಧಿಸಲಾಗಿದೆ ಎಂದು ಆದೇಶದಲ್ಲಿ ಎಚ್ಚರಿಕೆ ನೀಡಿದ್ದಾರೆ. ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ 1077 ಶಸ್ತ್ರಾಸ್ತ್ರಗಳಿದ್ದು, ಈಗಾಗಲೇ ಹಲವರು ಠೇವಣಿ ಮಾಡಿದ್ದಾರೆ ಎಂದು ಪೊಲೀಸ್ ಆಯುಕ್ತ ಬಿ.ರಮೇಶ್ ನಿನ್ನೆ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದರು.

ಡಾ. ಅಂಬೇಡ್ಕರ್ ನೀಡಿದ ಸಂವಿಧಾನವನ್ನು ಭಗವಂತನಿಂದಲೂ ಬದಲಿಸಲಾಗಲ್ಲ

ರಾಜ್ಯ ವಾಲ್ಮೀಕಿ ಗುರುಪೀಠದ ಧರ್ಮದರ್ಶಿ ಎಂ.ಅಪ್ಪಣ್ಣ



ಮೈಸೂರಿನ ವಿಜಯನಗರದಲ್ಲಿರುವ ವಾಲ್ಮೀಕಿ ಭವನದಲ್ಲಿ ಕರ್ನಾಟಕ ರಾಜ್ಯ ನಾಯಕರ ಯುವಸೇನೆ ಭಾನುವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಮೈಸೂರು, ಮಾ.17(ಎಂಟಿವೈ)– ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಡಾ.ಅಂಬೇಡ್ಕರ್ ನೀಡಿರುವ ಸಂವಿಧಾನವನ್ನು ಭಗವಂತನಿಂದಲೂ ಬದಲಾಯಿಸಲು ಸಾಧ್ಯವಿಲ್ಲ ಎಂದು ರಾಜ್ಯ ವಾಲ್ಮೀಕಿ ಗುರುಪೀಠದ ಧರ್ಮದರ್ಶಿ ಎಂ. ಅಪ್ಪಣ್ಣ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ವಾಲ್ಮೀಕಿ ಭವನದಲ್ಲಿ ಕರ್ನಾಟಕ ರಾಜ್ಯ ನಾಯಕರ ಯುವ ಸೇನೆಯಿಂದ ಭಾನುವಾರ ನಡೆದ 20ನೇ ವರ್ಷದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡಿದ ಅವರು, ಸಮುದಾಯದ ಮುಖಂಡರು ವಿವಿಧ ಪಕ್ಷಗಳಲ್ಲಿ ಗುರುತಿಸಿಕೊಂಡಿದ್ದಾರೆ. ಚುನಾವಣೆ ಸಂದರ್ಭದಲ್ಲಿ ಮಾತ್ರ ರಾಜಕೀಯ ಮಾಡಿ, ಉಳಿದ ಸಂದರ್ಭದಲ್ಲಿ ಜನಾಂಗದ ಏಳಿಗೆಗಾಗಿ ನಾವೆಲ್ಲರೂ ಒಗ್ಗಟ್ಟಾಗಿ ಶ್ರಮಿಸೋಣ. ನಾಯಕ ಸಮುದಾಯದವರು ಮುಖ್ಯಮಂತ್ರಿಯಾಗಬೇಕು ಎಂಬ ಆಸೆ ಸಮುದಾಯದ ಎಲ್ಲರಿಗೂ ಇದೆ. ಆ ನಿಟ್ಟಿನಲ್ಲಿ ಬೇರೆ ಬೇರೆ ರಾಜಕೀಯ ಪಕ್ಷಗಳಲ್ಲಿ ಗುರುತಿಸಿಕೊಂಡಿದ್ದರೂ ಸಮುದಾಯ ಕಾರ್ಯಕ್ರಮಗಳಲ್ಲಿ ಪಕ್ಷಭೇದ ಮರೆತು ಒಗ್ಗಟ್ಟು ಪ್ರದರ್ಶಿಸಿದ್ದು ಶ್ಲಾಘನೀಯ ಎಂದರು.

ಪ್ರಸ್ತುತ ಸ್ಪರ್ಧಾತ್ಮಕ ಯುಗದಲ್ಲಿ ಎಷ್ಟು ಅಂಕ ಗಳಿಸಿದರೂ ಸಾಲದು ಎಂಬಂತಾಗಿದೆ ವಿದ್ಯೆಗೆ ಇರುವಷ್ಟು ಬೆಲೆ ಸಂಪತ್ತಿಗೆ ಇಲ್ಲ. ವಿದ್ಯೆ ಸಾಧಕನ ಸ್ವತ್ತು, ಶ್ರಮಪಟ್ಟು ಛಲದಿಂದ ಓದಬೇಕು. ಟಿ.ವಿ., ಮೊಬೈಲ್‌ಗಳಿಗೆ ದಾಸರಾಗದೇ ಸಾಧನೆ ಮಾಡಿ, ತಂದೆ–ತಾಯಿಯರ ಹೆಸರನ್ನು ಉಳಿಸಬೇಕು. ನಾವು ಸಂಘಟಿತರಾಗಬೇಕು. ಶಿಕ್ಷಣದಿಂದ ಮಾತ್ರ ಬಡತನವನ್ನು ಹೋಗಲಾಡಿಸಲು ಸಾಧ್ಯವಾಗಿದ್ದು, ಪ್ರತಿಯೊಬ್ಬರೂ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು ಎಂದು ಸಲಹೆ ನೀಡಿದರು.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ದೇಶದಲ್ಲಿ ನಾಯಕ ಸಮಾಜ ಹಿಂದುಳಿದ ಸಮಾಜವಾಗಿದ್ದು, ಶಿಕ್ಷಣ ಪಡೆಯುವುದರಿಂದ ಮಾತ್ರ ಏಳಿಗೆ ಸಾಧ್ಯ. ಯಾರಿಂದಲೂ ಕಸಿದುಕೊಳ್ಳಲು ಆಗದ ವಿದ್ಯೆಯನ್ನು ಎಲ್ಲರೂ ಸಂಪಾದಿಸಬೇಕು. ಪೋಷಕರು ಮಕ್ಕಳಿಗೆ ಶಿಕ್ಷಣದ ಜೊತೆಗೆ ವಿನಯವನ್ನೂ ಕಲಿಸಬೇಕು. ಜನಸಂಖ್ಯೆ ಹೆಚ್ಚಾದಂತೆ ಶಿಕ್ಷಣದಲ್ಲಿ ಸ್ಪರ್ಧೆಗಳು ಹೆಚ್ಚಾಗುತ್ತಿವೆ. ಆದುದರಿಂದ ಮಕ್ಕಳು ಚೆನ್ನಾಗಿ ಓದಬೇಕು. ಸಂವಿಧಾನ ನಮಗೆ ಕೊಟ್ಟಿರುವ ಹಕ್ಕನ್ನು ಚಲಾಯಿಸುವುದರ ಜೊತೆಗೆ ಕರ್ತವ್ಯವನ್ನು ಪಾಲಿಸಬೇಕು, ಸಂವಿಧಾನವನ್ನು ಗೌರವಿಸಬೇಕು. ಸಮಾಜಕ್ಕೆ ಧಕ್ಕೆ ಬಂದಾಗ ಎಲ್ಲರೂ ಒಗ್ಗಟ್ಟಿನಿಂದ ಖಂಡಿಸಬೇಕು. ಹೋರಾಟ ಮಾಡಬೇಕು. ನಿಮ್ಮ ಸಮಾಜದ ಜೊತೆಗೆ ನಾನಿರುತ್ತೇನೆ. ಪ್ರತಿಯೊಬ್ಬರು ವಾಲ್ಮೀಕಿ ರಾಮಾಯಣ ಹಾಗು ವೀರ ಮದಕರಿ ನಾಯಕರ ಇತಿಹಾಸವನ್ನು ಓದಿ ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಮಾರಂಭದಲ್ಲಿ ರಾಜ್ಯ ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ. ಬಸವರಾಜು, ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ನಾಗಭೂಷಣ್, ಲೋಕೇಶ್ ಪಿಯಾ, ಎಸ್.ಆರ್. ರವಿಕುಮಾರ್, ಡಾ. ಮಂಜುನಾಥ್, ಪ್ರೊ.ನಂಜುಂಡ ಸ್ವಾಮಿ, ಪ್ರೊ.ಪ್ರಶಾಂತ್ ನಾಯಕ್, ನಾಯಕರ ಯುವ ಸೇನೆಯ ಅಧ್ಯಕ್ಷ ದೇವರಾಜ್ ಕಾಟೂರು, ಮೈಸೂರು ವಿವಿ ಘಟಿಕೋತ್ಸವದಲ್ಲಿ ಹೆಚ್ಚು ಚಿನ್ನದ ಪದಕ ಪಡೆದ ವಿದ್ಯಾರ್ಥಿನಿ ತೇಜಸ್ವಿನಿ ಉಪಸ್ಥಿತರಿದ್ದರು.

ತೂಕ, ಬೆಲೆಯಲ್ಲಿ ರೈತರಿಗೆ ಮೋಸವಾದರೆ ಶಿಸ್ತು ಕ್ರಮ

ಕೃಷಿ ಮಾರುಕಟ್ಟೆ ಅಧಿಕಾರಿಗಳಿಗೆ ಸಚಿವ ವೆಂಕಟೇಶ್ ಎಚ್ಚರಿಕೆ

ಪಿರಿಯಾಪಟ್ಟಣ, ಮಾ.17– ರೈತರು ತರುವ ರಾಗಿ ತೂಕದಲ್ಲಾಗಲೀ ಅಥವಾ ಬೆಲೆಯಲ್ಲಾಗಲೀ ವ್ಯತ್ಯಾಸವಾಗಿದ್ದು ನನ್ನ ಗಮನಕ್ಕೆ ಬಂದರೆ ನಿಮ್ಮ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುತ್ತೇನೆ. ನನ್ನ ಅಧಿಕಾರವಧಿಯಲ್ಲಿ ಯಾವುದೇ ಅನ್ಯಾಯ, ಅಕ್ರಮಗಳಿಗೆ ಅವಕಾಶವಿಲ್ಲ ಎಂದು ಕೃಷಿ ಮಾರುಕಟ್ಟೆ ಅಧಿಕಾರಿಗಳಿಗೆ ಸಚಿವ ಕೆ.ವೆಂಕಟೇಶ್ ಎಚ್ಚರಿಕೆ ನೀಡಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ರಾಗಿ ಖರೀದಿ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರ ರೈತರ ಅನುಕೂಲಕ್ಕಾಗಿ ಬೆಂಬಲ ಬೆಲೆ ನಿಗದಿ ಮಾಡಿ, ಖರೀದಿ ಕೇಂದ್ರಗಳನ್ನು ತೆರೆದು ರಾಗಿ ಖರೀದಿ ಮಾಡುತ್ತಿದೆ. ರೈತರು ನೂರು, ಇನ್ನೂರು ರೂ.ಗಳಿಗೆ ಆಸೆ ಬಿದ್ದು ಮಧ್ಯವರ್ತಿಗಳಿಗೆ ನಿಮ್ಮ ಬೆಂಬಲ ಬೆಲೆ ಮಾಡಿಕೊಳ್ಳಬೇಡಿ ಎಂದು ಮನವಿ ಮಾಡಿದ ಸಚಿವರು, ಖರೀದಿ ಕೇಂದ್ರಕ್ಕೆ ಗುಣಮಟ್ಟದ ರಾಗಿ ತರಬೇಕು. ಕಲ್ಲು ಮಣ್ಣು ಬೆರಕೆಯಾದರೆ ಅಧಿಕಾರಿಗಳು ನಿಮ್ಮ ರಾಗಿಯನ್ನು ಖರೀದಿ ಮಾಡುವುದಿಲ್ಲ. ಅದಕ್ಕೆ ನನ್ನನ್ನು ಹೊಣೆಗಾರರನ್ನಾಗಿ ಮಾಡಬೇಡಿ. ಆ ವಿಚಾರದಲ್ಲಿ ನಾನು ಎಂದಿಗೂ ನಿಮ್ಮ ನೆರವಿಗೆ ಬರುವುದಿಲ್ಲ. ದುರಾಸೆಗೆ ಬಲಿಯಾಗಿ ಸರ್ಕಾರಕ್ಕೆ ವಂಚಿಸುವ ಪ್ರವೃತ್ತಿ ಕೈಬಿಡಿ ಎಂದರು.



ರಾಗಿ ಖರೀದಿ ಕೇಂದ್ರಕ್ಕೆ ಸಚಿವ ಕೆ.ವೆಂಕಟೇಶ್ ಚಾಲನೆ ನೀಡಿದರು.

ಈಗಾಗಲೇ ತಾಲೂಕಿನಲ್ಲಿ 4,125 ರೈತರು ರಾಗಿ ಮಾರಾಟ ಮಾಡಲು ಹೆಸರು ನೋಂದಾಯಿಸಿಕೊಂಡಿದ್ದಾರೆ. ಒಟ್ಟು ಒಂದು ಲಕ್ಷ ಏಳು ಸಾವಿರ ಕ್ವಿಂಟಾಲ್ ರಾಗಿ ಖರೀದಿಗೆ ನಾಳೆಯಿಂದ ಟೋಕನ್ ವಿತರಿಸಲಾಗುವುದು. ಸರದಿ ಪ್ರಕಾರ ಟೋಕನ್ ಪಡೆದು ನಿಮ್ಮ ರಾಗಿಯನ್ನು ಅಧಿಕಾರಿಗಳು ಖರೀದಿ ಮಾಡುತ್ತಾರೆ. ಇದರಲ್ಲಿ ಯಾವುದೇ ಪ್ರಭಾವ ಅಥವಾ ರೈತರಿಗೆ ಮೋಸವಾಗಲು ಅವಕಾಶವಿಲ್ಲ ಎಂದರು.

ತಾಲೂಕಿನಲ್ಲಿ ಈಗಾಗಲೇ ಬೆಟ್ಟದಪುರ, ಪಿರಿಯಾಪಟ್ಟಣ ಹಾಗೂ ರಾವಂದೂರು ವ್ಯಾಪ್ತಿಯಲ್ಲಿ ರಾಗಿ ಖರೀದಿ ಕೇಂದ್ರ ಆರಂಭವಾಗಿದ್ದು, ಹಾರನಹಳ್ಳಿ ಗ್ರಾಮದಲ್ಲಿ ರಾಗಿ ಕೇಂದ್ರ ತೆರೆಯಲು ಪ್ರಸ್ತಾವನೆ ಇತ್ತು. ಆದರೆ ಕಾರಣಾಂತರಗಳಿಂದ ಖರೀದಿ ಕೇಂದ್ರ ತೆರೆಯಲು ಸಾಧ್ಯವಾಗಲಿಲ್ಲ. ಮುಂದಿನ ಬಾರಿ ಆ ವ್ಯಾಪ್ತಿಯಲ್ಲೂ ರಾಗಿ ಖರೀದಿ ಕೇಂದ್ರ ತೆರೆಯಲಾಗುತ್ತದೆ. ಒಟ್ಟು ಈ ಮೂರು ಕೇಂದ್ರದಿಂದ 3,41,341 ಕ್ವಿಂಟಾಲ್ ರಾಗಿ ಖರೀದಿಸುವ ನಿರೀಕ್ಷೆ ಇದೆ. ಈಗಾಗಲೇ ಮಾರುಕಟ್ಟೆ ಕೇಂದ್ರದಲ್ಲಿ ಕೂಲಿಗಾರರಿಂದ ರೈತರಿಗೆ ತೊಂದರೆಯಾಗುತ್ತದೆ ಎಂಬ ಆರೋಪವಿದೆ. ಅಧಿಕಾರಿಗಳು ಈ ಸಮಸ್ಯೆಯನ್ನು ನಿವಾರಿಸಬೇಕು. ಇಲ್ಲದಿದ್ದರೆ ನೀವೆ ನೇರ ಹೊಣೆಗಾರಿಕೆಯಾಗುತ್ತೀರಿ ಎಂದರು.

ಕಳೆದ ಬಾರಿ ಕ್ವಿಂಟಾಲ್ ರಾಗಿಗೆ 3500 ರೂ. ನಿಗದಿ ಮಾಡಲಾಗಿತ್ತು. ಈ ಬಾರಿ 346 ರೂ. ಹೆಚ್ಚುವರಿ ನೀಡುತ್ತಿದ್ದು, ಪ್ರತಿ ಕ್ವಿಂಟಾಲ್‌ಗೆ ಸರ್ಕಾರ 3846 ರೂ. ಬೆಂಬಲ ಬೆಲೆ ನೀಡುತ್ತಿದೆ. ಸರ್ಕಾರ ನಿಮ್ಮಿಂದ ಹೆಚ್ಚಿನ ಬೆಲೆಗೆ ರಾಗಿ ಖರೀದಿಸಿದರೆ ನಿಮ್ಮಿಂದ ಮಧ್ಯವರ್ತಿಗಳು ಕಡಿಮೆ ಬೆಲೆಗೆ ರಾಗಿ ಖರೀದಿಸಿ ಸರ್ಕಾರದ ಹಣ ಲಪಟಾಯಿಸಲು ಹೊರಟಿದ್ದಾರೆ. ನೀವು ವರ್ತಕರು ಲಾಭ ಮಾಡಲು ಬಿಡಬೇಡಿ. ಈ ಬಾರಿ ಸರ್ಕಾರ ಎಚ್ಚರಿಕೆಯಿಂದ ರಾಗಿ ಖರೀದಿ ಮಾಡುತ್ತಿದೆ ಯಾವುದೇ ಕಾರಣಕ್ಕೂ ಅಕ್ರಮಕ್ಕೆ ಅವಕಾಶವಿಲ್ಲ. ರೈತರು ಇದಕ್ಕೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು. ಈ ಸಂದರ್ಭ ಮಾರಾಟ ಮಹಾಮಂಡಳದ ಜಿಲ್ಲಾ ನೋಡಲ್ ಅಧಿಕಾರಿ ವಾಣಿಶ್ರೀ, ಜಿಲ್ಲಾ ವ್ಯವಸ್ಥಾಪಕರಾದ ಮಮತ, ಶಿರಸ್ತೇದಾರ ಸಣ್ಣಸ್ವಾಮಿ, ಮಂಜುನಾಥ್ ಹಾಗೂ ಕೃಷಿ ಮಾರುಕಟ್ಟೆ ಡೆಪ್ಯೂಟಿ ಡೈರೆಕ್ಟರ್ ಸಂಗೀತ, ಕಾರ್ಯದರ್ಶಿ ರೇವತಿ ಬಾಯಿ, ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಹಮದ್ ಜಾನ್‌ಬಾಬು, ಡಿ.ಟಿ.ಸ್ವಾಮಿ ಸೇರಿದಂತೆ ಇತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಸೈರನ್ 108 (ತ)	4 ಪ್ರದರ್ಶನಗಳು,
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸೈತಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕರಟಕ ದಮನಕ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಂಗನಾಯಕ (ಕ)	4 ಪ್ರದರ್ಶನಗಳು
ರಾಜಕಮಲ್	
ಯೋಧ (ಹಿಂ)	4 ಪ್ರದರ್ಶನಗಳು
ಸಂಗಂ	
ಕೆರೆಬೇಟೆ (ಕ)	4 ಪ್ರದರ್ಶನಗಳು
ಲಿಡೋ	
ಹೈಡ್ ಅಂಡ್ ಸೀಕ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸೈರನ್ (ತ)	4 ಪ್ರದರ್ಶನಗಳು
ಪ್ರಭಾ	
ಸೋಮು ಸೌಂಡ್ ಇಂಜಿನಿಯರ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕುಂಗ್ ಫು ಪಾಂಡ 4(3ಡಿ) (ಇಂ): ಬೆ.10.20ಕ್ಕೆ, ಸಂ.5.45ಕ್ಕೆ, ರಾ.7.50ಕ್ಕೆ, ರಾ.9.55ಕ್ಕೆ, ಕರಟಕ ದಮನಕ (ಕ): ಮ.12.25ಕ್ಕೆ, ಚೌಚೌ ಬಾತ್ (ಕ): ಮ.3.25ಕ್ಕೆ.
ಸ್ಕ್ರೀನ್ 2	ಹೈಡ್ & ಸೀಕ್ (ಕ): ಬೆ.10.25ಕ್ಕೆ, ಡ್ಯೂನ್ ಪಾರ್ಟ್2 (ಇಂ): ಮ.1ಕ್ಕೆ, ಆರ್ಟಿಕಲ್ 370 (ಹಿಂ): ಸಂ.4.10ಕ್ಕೆ, ಕರಟಕ ದಮನಕ (ಕ): ರಾ.7.15ಕ್ಕೆ, ಸೋಮು ಸೌಂಡ್ ಇಂಜಿನಿಯರ್ (ಕ): ರಾ.10.15ಕ್ಕೆ.
ಸ್ಕ್ರೀನ್ 3	ಮೆಹಬೂಬ (ಕ): ಬೆ.10.50ಕ್ಕೆ, ಕೆರೆಬೇಟೆ (ಕ): ಮ.1.35ಕ್ಕೆ, ಬಸ್ತಾರ್ ದಿ ನಕ್ಸಲ್ ಸ್ಟೋರಿ (ಹಿಂ): ಸಂ.4.30ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.7ಕ್ಕೆ, ರಜಾಕರ್ ಸೈಲೆಂಟ್ ಜಿನೋಸೈಡ್ ಆಫ್ ಹೈದ್ರಾಬಾದ್ (ತೆ): ರಾ.9.45ಕ್ಕೆ.
ಸ್ಕ್ರೀನ್ 4	ಜಾಕಿ (ಕ): ಬೆ.8ಕ್ಕೆ, ಬೆ.10.50ಕ್ಕೆ, ರಾ.10.10ಕ್ಕೆ, ಸೈತಾನ್ (ಹಿಂ): ಮ.1.45ಕ್ಕೆ, ಯೋಧ (ಹಿಂ): ಸಂ.4.30ಕ್ಕೆ, ರಾ.7.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಆಪರೇಷನ್ ವ್ಯಾಲೆಂಟೈನ್ (ತೆ): ಬೆ.9.55ಕ್ಕೆ, ಲಾಪತಾ ಲೇಡಿಸ್ (ಹಿಂ): ಮ.12.45ಕ್ಕೆ, ಡ್ಯೂನ್ ಪಾರ್ಟ್2 (ಇಂ): ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಡ್ಯೂನ್ ಪಾರ್ಟ್2 (ಇಂ): ಬೆ.9.50ಕ್ಕೆ, ಮ.1.20ಕ್ಕೆ, ಕ್ರೀಂ (ಕ): ಸಂ.4.50ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ): ರಾ.7.25ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಲಾಪತಾ ಲೇಡಿಸ್ (ಹಿಂ): ಬೆ.10ಕ್ಕೆ, ರಾ.7.25ಕ್ಕೆ, ಆರ್ಟಿಕಲ್ 370 (ಹಿಂ): ಮ.12.45ಕ್ಕೆ, ಸಂ.4.05ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಆಪರೇಷನ್ ವ್ಯಾಲೆಂಟೈನ್ (ತೆ): ಮ.12ಕ್ಕೆ, ಉಪಾಧ್ಯಕ್ಷ (ಕ): ಮ.3.05ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಸಂ.6.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ಡೆಮೋನ್ ಸ್ಲೇಯರ್ (ಜ): ಸಂ.4.30ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ): ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಲಾಪತಾ ಲೇಡಿಸ್ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಝಾ ಜಿಯಾ (ಹಿಂ): ಬೆ.11.55ಕ್ಕೆ, ಕ್ರೀಂ (ಕ): ಸಂ.6.55ಕ್ಕೆ, ಪ್ರೇಮಲು (ಮ): ರಾ.10.20ಕ್ಕೆ, ಜೋಶುವಾ (ತ): ಮ.1.20ಕ್ಕೆ, ಸಂ.6.55ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ತಂದೆ–ತಾಯಿ ಕಳೆದುಕೊಂಡ ಮಕ್ಕಳಿಗೆ ಧನಸಹಾಯ



ಹೆಚ್.ಡಿ.ಕೋಟೆ, ಮಾ.17– ತಂದೆ ತಾಯಿ ಕಳೆದುಕೊಂಡ ಸರ್ಕಾರಿ ಶಾಲೆ ಮಕ್ಕಳ ವಿದ್ಯಾಭ್ಯಾಸಕ್ಕೆ ರೋಟರಿ ವಿದ್ಯಾ ನಿಧಿ ಟ್ರಸ್ಟ್ ವತಿಯಿಂದ ಧನಸಹಾಯ ಮಾಡಲಾಗುತ್ತಿದೆ ಎಂದು ಹೆಚ್.ಡಿ. ಕೋಟೆ ರೋಟರಿ ಕ್ಲಬ್ ತಾಲೂಕು ಅಧ್ಯಕ್ಷ ಗಂಗಾಧರ್ ತಿಳಿಸಿದರು. ತಾಲೂಕಿನ ಮಾದಾಪುರ ಸರ್ಕಾರಿ ಶಾಲೆಯಲ್ಲಿ ತಂದೆ ತಾಯಿ ಕಳೆದು ಕೊಂಡ ಮಕ್ಕಳಿಗೆ ಚೆಕ್ ಮೂಲಕ ಧನ ಸಹಾಯ ಮಾಡಿ ಮಾತನಾಡಿದ ಅವರು, ರೋಟರಿ ವಿದ್ಯಾ ನಿಧಿ ಟ್ರಸ್ಟ್, ರೋಟರಿ ಕ್ಲಬ್ ಆಫ್ ಮೈಸೂರು, ರಾಯಲ್ ಮೈಸೂರು, ರೋಟರಿ ಕ್ಲಬ್ ಹೆಚ್.ಡಿ. ಕೋಟೆ ಇವರು ಗಳ ಸಂಯುಕ್ತಾಶ್ರಯದಲ್ಲಿ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ತಂದೆ, ತಾಯಿ ಇಬ್ಬರಲ್ಲಿ ಒಬ್ಬರನ್ನು ಕಳೆದುಕೊಂಡ ಮಕ್ಕಳಿಗೆ 1500 ರೂ. ತಂದೆ, ತಾಯಿ ಇಬ್ಬರನ್ನು ಕಳೆದುಕೊಂಡ ಮಕ್ಕಳಿಗೆ 3000 ಸಾವಿರ ರೂ. ನಂತೆ ಚೆಕ್ ಮೂಲಕ 25 ಸರ್ಕಾರಿ ಶಾಲೆಯ 110 ಮಕ್ಕಳಿಗೆ 2 ಲಕ್ಷದ 8 ಸಾವಿರ ರೂ. ಧನಸಹಾಯ ಮಾಡಿದ್ದೇವೆ ಎಂದರು.

ಈ ವೇಳೆ ಮೈಸೂರು ರೋಟರಿ ವಿದ್ಯಾ ನಿಧಿ ಟ್ರಸ್ಟ್ ಚೇರ್ಮನ್ ಆರ್.ಕೃಷ್ಣ, ಸಹಾಯಕ ಗೌರ್ನರ್ ಪ್ರೇಮಾನಂದ, ಕಾರ್ಯದರ್ಶಿ ನಾಗೇಂದ್ರಪ್ರಸಾದ್, ಖಜಾಂಚಿ ದಿವಾಕರ್, ನವೀನ್ ಕುಮಾರ್, ವೆಂಕಟೇಶ್, ಧರ್ಮಪ್ಪ ರಾಘವೇಂದ್ರ ರಾಜು ಶೆಟ್ಟಿ ಇನ್ನಿತರರಿದ್ದರು.

ಪುನೀತ್ ಹುಟ್ಟುಹಬ್ಬ: ಬಿರಿಯಾನಿ, ನೋಟ್‌ಬುಕ್ ವಿತರಣೆ

ತಿ.ನರಸೀಪುರ, ಮಾ.17– ಕರ್ನಾಟಕ ರತ್ನ ಡಾ.ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬ ಹಿನ್ನೆಲೆಯಲ್ಲಿ ಪಟ್ಟಣದ ರೇಣುಕಾ ಬಾರ್ ಮತ್ತು ರೆಸ್ಟೋರೆಂಟ್ ವತಿಯಿಂದ 2 ಸಾವಿರ ಮಂದಿಗೆ ಚಿಕನ್ ಬಿರಿಯಾನಿ ಹಾಗೂ ವಿದ್ಯಾರ್ಥಿಗಳಿಗೆ ಉಚಿತವಾಗಿ ನೋಟ್‌ಬುಕ್ ವಿತರಿಸಲಾಯಿತು.



ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬ ಅಂಗವಾಗಿ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಿಸಲಾಯಿತು.

ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಬಳಿಯ ರೇಣುಕಾ ಬಾರ್ ಎದುರು ಭಾನುವಾರ ಪುನೀತ್ ರಾಜ್‌ಕುಮಾರ್ ಭಾವಚಿತ್ರ ಇಟ್ಟು ಅಲಂಕಾರ ಮಾಡಿ ದೀಪ ಬೆಳಗಿಸಿ, ಪಟಾಕಿ ಸಿಡಿಸಿ, ಕೇಕ್ ಕಟ್ ಮಾಡುವ ಮೂಲಕ ಹುಟ್ಟುಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಕಾಂಗ್ರೆಸ್ ಜಿಲ್ಲಾ ಗ್ರಾಮಾಂತರ ವೈದ್ಯಕೀಯ ವಿಭಾಗದ ಅಧ್ಯಕ್ಷ ಡಾ. ಪ್ರದೀಪ್ ಮಕ್ಕಳಿಗೆ ನೋಟ್‌ಬುಕ್ ವಿತರಿಸಿ ಮಾತನಾಡಿ, ಒಳ್ಳೆಯವರನ್ನು ಭಗವಂತ ಬೇಗ ಕರೆಸಿಕೊಳ್ಳುತ್ತಾನೆ. ಪುನೀತ್ ರಾಜ್‌ಕುಮಾರ್ ಮಾಡುತ್ತಿದ್ದ ದಾನ ಧರ್ಮ ಇಂದು ರಾಜ್ಯದ ಯುವ ಪೀಳಿಗೆಗೆ ಸ್ಫೂರ್ತಿಯಾಗಿದೆ. ಅಪ್ಪು ಹೆಚ್ಚು ಊಟ ಇಷ್ಟ ಪಡುತ್ತಿದ್ದರು. ಅದರಲ್ಲೂ ಅವರಿಗೆ ಮಾಂಸಾಹಾರ ಅತ್ಯಂತ ಹೆಚ್ಚು ಪ್ರಿಯ. ಹಾಗಾಗಿ ಅವರ ಹುಟ್ಟುಹಬ್ಬದಂದು 200 ವಿದ್ಯಾರ್ಥಿಗಳಿಗೆ ನೋಟ್‌ಬುಕ್ ಹಾಗೂ ಚಿಕನ್ ಬಿರಿಯಾನಿ ವಿತರಿಸಲಾಗುತ್ತಿದೆ ಎಂದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಕಾರ್ಯದರ್ಶಿ ಕಿರಗಸೂರು ಶಂಕರ್ ಮಾತನಾಡಿ, ಇಂದು ಪುನೀತ್ ಹುಟ್ಟುಹಬ್ಬವನ್ನು ಎಲ್ಲೆಡೆ ಸಂಭ್ರಮದಿಂದ ಆಚರಿಸಲಾಗುತ್ತಿದೆ. ಪ್ರಚಾರ ಪಡೆಯದೇ ಬಹಳಷ್ಟು ದಾನ ಧರ್ಮ ಮಾಡಿದ್ದು ಅವರ ನಿಧನದ ಬಳಿಕ ಅವೆಲ್ಲವೂ ಬೆಳಕಿಗೆ ಬಂದಿವೆ ಎಂದರು.

ಪುನೀತ್ ರಾಜ್‌ಕುಮಾರ್ ಹುಟ್ಟಿದ ದಿನವನ್ನು ಸ್ಫೂರ್ತಿಯ ದಿನವನ್ನಾಗಿ ಆಚರಿಸುವಂತೆ ರಾಜ್ಯ ಸರ್ಕಾರ ಆದೇಶಿಸಿದೆ. ಅವರ ಸಮಾಜ ಸೇವೆಯನ್ನು ಎಲ್ಲರೂ ಅಳವಡಿಸಿಕೊಂಡು ಹೋಗಬೇಕೆಂದರು.

ಈ ವೇಳೆ ರೇಣುಕಾ ಬಾರ್ ಮಾಲೀಕರಾದ ಸುನೀಲ್, ಬೃಂದಾ ಆಸ್ಪತ್ರೆ ಮಾಲೀಕರಾದ ಗುರು, ಚೇತನ್, ಬಂಕ್ ಮಾಲೀಕರಾದ ವೀರೇಶ್, ಸೇವಾಶ್ರಯ ಫೌಂಡೇಶನ್ ಅಧ್ಯಕ್ಷ ಮಣಿಕಂಠರಾಜ್ ಗೌಡ, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ ಸೇರಿದಂತೆ ಇತರೆ ಮುಖಂಡರು ಹಾಗೂ ಅಭಿಮಾನಿಗಳು ಇದ್ದರು.

ರೈತರ ಕಷ್ಟಗಳಿಗೆ ಸ್ಪಂದಿಸುತ್ತೇನೆ: ಕಾಡಾ ಅಧ್ಯಕ್ಷ ಮರಿಸ್ವಾಮಿ

ತಿ.ನರಸೀಪುರ, ಮಾ.17– ಕಾಡಾ ರೈತಪರ ನಿಗಮವಾಗಿದ್ದು, ನಿರೀಕ್ಷೆಗೂ ಮೀರಿ ಕೆಲಸ ಮಾಡುವ ಮೂಲಕ ರೈತರ ಕಷ್ಟಗಳಿಗೆ ಸ್ಪಂದಿಸುತ್ತೇನೆ ಎಂದು ಕಾಡಾ ನೂತನ ಅಧ್ಯಕ್ಷ ಮರಿಸ್ವಾಮಿ ತಿಳಿಸಿದರು.

ತಾಲೂಕಿನ ವಾಟಾಳು ಮಠಕ್ಕೆ ಭೇಟಿ ನೀಡಿ ಶ್ರೀಸಿದ್ದಲಿಂಗಶಿವಾಚಾರ್ಯ ಸ್ವಾಮಿಗಳ ಆಶೀರ್ವಾದ ಪಡೆದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಡಾ ನಿಗಮ ರೈತ ಪರವಾದ ನಿಗಮವಾಗಿದೆ. ನಾನು ಕಳೆದ 8 ವರ್ಷಗಳಿಂದ ಜಿಲ್ಲಾಧ್ಯಕ್ಷನಾಗಿ ಕರ್ತವ್ಯ ನಿರ್ವಹಿಸಿದ್ದು, ನನ್ನ ಕಾರ್ಯ ವೈಖರಿ ಗಮನಿಸಿ ಪಕ್ಷ ನನಗೆ ಕಾಡಾ ನಿಗಮದ ಅಧ್ಯಕ್ಷ ಸ್ಥಾನ ನೀಡಿದೆ. ನಾನು ರೈತನ ಮಗನಾಗಿರುವುದರಿಂದ ರೈತರ ಕಷ್ಟ ಸುಖಗಳನ್ನು ಹತ್ತಿರದಿಂದ ಗಮನಿಸಿದ್ದೇನೆ. ರೈತರ ಶ್ರೇಯೋಭಿವೃದ್ಧಿಗಾಗಿ ಕೆಲಸ ಮಾಡಲು ಆಶಯ ಹೊಂದಿದ್ದು, ಪ್ರಾಮಾಣಿಕವಾಗಿ ಸೇವೆ ಸಲ್ಲಿಸುವ ಗುರಿ ಹೊಂದಿದ್ದೇನೆ ಎಂದರು.



ಕಾಡಾ ಅಧ್ಯಕ್ಷ ಮರಿಸ್ವಾಮಿ, ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಆಶೀರ್ವಾದ ಪಡೆದರು.

ಕಾಡಾ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಹಿನ್ನೆಲೆಯಲ್ಲಿ ರಾಜಕೀಯ ಮುಖಂಡರು, ಮಠಾಧೀಶರನ್ನು ಭೇಟಿ ಮಾಡಿ ಆಶೀರ್ವಾದ ಪಡೆಯುತ್ತಿದ್ದೇನೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸಂಪುಟದ ಎಲ್ಲ ಸಚಿವರನ್ನು ಭೇಟಿಯಾಗಿ ಅವರ ಸಲಹೆ ಸಹಕಾರ ಕೋರಿದ್ದೇನೆ ಎಂದರು.

ಈ ವೇಳೆ ಕೊಳ್ಳೇಗಾಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಂಟೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಆಲ್ದೂರು ರಾಜಶೇಖರ್, ಶಂಕರಮೂರ್ತಿ, ಶಿವಸ್ವಾಮಿ, ರವಿಕುಮಾರ್, ಮುಖಂಡರಾದ ಡಿ.ಪಿ.ಪ್ರಕಾಶ್, ಸಿದ್ದಲಿಂಗಸ್ವಾಮಿ, ಪ್ರಭುಸ್ವಾಮಿ, ಶಿವಸ್ವಾಮಿ, ಪ್ರಕಾಶ್, ಬೂದಂಬಳ್ಳಿ ಶಂಕರ್, ಕಿಟ್ಟಪ್ಪ, ಮಹದೇವಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ಬಿಎಂಕೆ ಹುಂಡಿ ಮಹದೇವು ಮತ್ತಿತರರಿದ್ದರು.

ಸಿಂಧುವಳ್ಳಿ: 3 ಚಿರತೆ ಮರಿ ಪತ್ತೆ



ನಂಜನಗೂಡು, ಮಾ.17– ತಾಲೂಕಿನ ಸಿಂಧುವಳ್ಳಿ ಗ್ರಾಮದ ನಿವಾಸಿ ಸಂಪತ್ತು ಎಂಬುವರಿಗೆ ಸೇರಿದ ಜಮೀನಿನ ಇಟ್ಟಿಗೆ ಗೂಡಿನಲ್ಲಿ 3 ಚಿರತೆ ಮರಿಗಳು ಪತ್ತೆಯಾಗಿವೆ.

ಈ ಸಂಬಂಧ ಸುದ್ದಿಗಾರರಿಗೆ ಮಾಹಿತಿ ನೀಡಿದ ವಲಯ ಅರಣ್ಯಾಧಿಕಾರಿ ನಿತಿನ್ ಕುಮಾರ್ ಗ್ರಾಮದ ಸಂಪತ್ತು ಅವರ ಜಮೀನಿನ ಸಮೀಪ ಚಿರತೆ ಕಂಡ ಗ್ರಾಮಸ್ಥರು ಅರಣ್ಯ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದಿದ್ದರು. ಈ ವೇಳೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ಇಟ್ಟಿಗೆಗೂಡಿನಲ್ಲಿ 3 ಚಿರತೆ ಮರಿಗಳು ಪತ್ತೆಯಾಗಿವೆ. ಚಿರತೆ ಸುತ್ತಮುತ್ತಲ ಪ್ರದೇಶದಲ್ಲಿ ಇರುವುದರಿಂದ ಚಿರತೆ ಸೆರೆಗಾಗಿ ಜಮೀನಿನಲ್ಲಿ ಬೋನು ಇರಿಸಲಾಗಿದೆ. ಮರಿಗಳಿಗಾಗಿ ಚಿರತೆ ಬಂದಾಗ ಸೆರೆ ಹಿಡಿದು ಕಾಡಿಗೆ ಬಿಡಲಾಗುವುದು ಎಂದರು. ಈ ವೇಳೆ ಗ್ರಾಪಂ ಅಧ್ಯಕ್ಷ ಓಂಕಾರ ನಾಯಕ, ರೈತ ಸಂಘದ ಬಸವಣ್ಣ, ವೇಣುಗೋಪಾಲ ಉಪಸ್ಥಿತರಿದ್ದರು.

ನಾಳೆ ಕುರುಬ ಸಮುದಾಯದ ಸಭೆ

ಹೆಚ್.ಡಿ.ಕೋಟೆ, ಮಾ.17– ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕು ಕಾಳಿದಾಸ ಕುರುಬ ಜನಾಂಗದ ಕ್ಷೇಮಾಭಿವೃದ್ಧಿ ಸಮಾಜದ ಉಪಾಧ್ಯಕ್ಷ ವೀರೇಗೌಡರ ಅಧ್ಯಕ್ಷತೆಯಲ್ಲಿ ಪಟ್ಟಣದ ಕನಕ ಭವನದಲ್ಲಿ ಮಾ.19ರಂದು ಬೆಳಗ್ಗೆ 11 ಗಂಟೆಗೆ ಸಭೆ ಕರೆಯಲಾಗಿದೆ. ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಸಂಘದ ಪ್ರಧಾನ ಕಾರ್ಯದರ್ಶಿ ಶಿರಮಳ್ಳಿ ಚಿಕ್ಕಣ್ಣ ತಿಳಿಸಿದ್ದಾರೆ.

ಕಂಪಲಾಪುರದಲ್ಲಿ ಅಪ್ಪು ಜನ್ಮ ದಿನಾಚರಣೆ



ಅಪ್ಪು ಯೂತ್ ಬ್ರಿಗೇಡ್ ವತಿಯಿಂದ ಪುನೀತ್ ಜನ್ಮದಿನಾಚರಣೆ ನಡೆಯಿತು.

ಕಂಪಲಾಪುರ, ಮಾ.17– ಗ್ರಾಮದ ಅಪ್ಪು ಯೂತ್ ಬ್ರಿಗೇಡ್ ವತಿಯಿಂದ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ 49ನೇ ಹುಟ್ಟುಹಬ್ಬವನ್ನು ಭಾನುವಾರ ಸಂಭ್ರಮದಿಂದ ಆಚರಿಸಲಾಯಿತು.

ಯೂತ್ ಬ್ರಿಗೇಡ್‌ನ ನೂರಾರು ಯುವಕರು ವಿನಾಯಕ ಸರ್ಕಲ್ ಬಳಿ ಅಪ್ಪು ಬೃಹತ್ ಕಟೌಟ್‌ಗೆ ಭಾರಿ ಗಾತ್ರದ ಹಾರ ಹಾಕಿ ಪೂಜೆ ಸಲ್ಲಿಸಿ ಪುನೀತರಾದರು. ಬಳಿಕ ಕರುನಾಡು ಕಂಡ ಅಪ್ರತಿಮ ನಟನನ್ನು ನೆನೆದು ಅಪ್ಪು ಅಭಿಮಾನಿಗಳು ಭಾವುಕರಾದರು. ಬೆಳಗ್ಗೆಯಿಂದ ಸಂಜೆವರೆಗೂ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ನೆರವೇರಿತು. ಈ ವೇಳೆ ಅಪ್ಪು ಯೂತ್ ಬ್ರಿಗೇಡ್‌ನ ಧನು, ಮಹೇಶ್, ವಿನಯ್, ಮಧು, ಪುನೀತ್, ರಾಘು, ಮನು, ಶಿವು ಸೇರಿದಂತೆ ನೂರಾರು ಅಭಿಮಾನಿಗಳು ಹಾಜರಿದ್ದರು.

ಇನ್‌ಸ್ಟಾಗ್ರಾಂನಲ್ಲಿ ಯುವಕನೊಂದಿಗೆ ಲವ್ವಿಡವ್ವಿ
ಮದುವೆ ನಿರಾಕರಿಸಿದ್ದಕ್ಕೆ ಕಟ್ಟಡ ಮೇಲೇರಿ ಮಹಿಳೆ ಆತ್ಮಹತ್ಯೆ ಹೈಡ್ರಾಮ

ನಂಜನಗೂಡು, ಮಾ.17– ಇನ್‌ಸ್ಟಾಗ್ರಾಂನಲ್ಲಿ ಪರಿಚಯವಾಗಿ ಪರಸ್ಪರ ಪ್ರೀತಿಸಿದ ಬಳಿಕ ಯುವಕ ಮದುವೆ ನಿರಾಕರಿಸಿದ ಕಾರಣಕ್ಕೆ ಮನನೊಂದ ಮಹಿಳೆ ನಗರದ ರಾಷ್ಟ್ರಪತಿ ರಸ್ತೆಯ ವಸತಿ ಗೃಹದ ಕಟ್ಟಡವೇರಿ ಆತ್ಮಹತ್ಯೆ ಬೆದರಿಕೆ ಹಾಕಿರುವ ಘಟನೆ ಭಾನುವಾರ ಬೆಳಗ್ಗೆ ನಡೆದಿದೆ.



ಇದರಿಂದ ಕೆಲಕಾಲ ಬಿಗುವಿನ ವಾತಾವರಣ ನಿರ್ಮಾಣವಾಗಿದ್ದು, ಪೊಲೀಸರು ಸ್ಥಳಕ್ಕಾಗಮಿಸಿ ಆಕೆಯನ್ನು ರಕ್ಷಣೆ ಮಾಡಿದ್ದಾರೆ. ಬಿಹಾರ ರಾಜ್ಯದ 24 ವರ್ಷದ ಅಸ್ಬುಲ್ ರೆಹಮಾನ್ ಎಂಬಾತ ಕಳೆದ ಎರಡು ವರ್ಷಗಳಿಂದ ಇಮ್ಮಾವು ಕೈಗಾರಿಕಾ ಪ್ರದೇಶದಲ್ಲಿರುವ ಏಷಿಯನ್ ಪೈಂಟ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡಿಕೊಂಡು ನಂಜನಗೂಡಿನಲ್ಲಿ ನೆಲೆಸಿದ್ದಾನೆ. ಮದುವೆಯಾಗಿ ವಿಚ್ಛೇದನ ಪಡೆದು ಇಬ್ಬರು ಮಕ್ಕಳಿರುವ 42 ವಯಸ್ಸಿನ ಪಶ್ಚಿಮ ಬಂಗಾಳದ ಮಹಿಳೆ ಹಾಗೂ ಅಸ್ಬುಲ್ ರೆಹಮಾನ್ ನಡುವೆ ಇನ್‌ಸ್ಟಾಗ್ರಾಂನಲ್ಲಿ ಪರಿಚಯವಾಗಿ ಇಬ್ಬರ ನಡುವೆ ಪ್ರೀತಿ ಬೆಳೆದಿದೆ. ಅಸ್ಬುಲ್ ರೆಹಮಾನ್‌ನನ್ನು ಹುಡುಕಿಕೊಂಡು ನಂಜನಗೂಡಿಗೆ ಬಂದಿರುವ ಮಹಿಳೆ ನಗರದ ರಾಷ್ಟ್ರಪತಿ ರಸ್ತೆಯಲ್ಲಿರುವ ವಸತಿ ಗೃಹದಲ್ಲಿ ಜತೆಗೆ ವಾಸ್ತವ್ಯ ಹೂಡಿದ್ದಾರೆ ಎನ್ನಲಾಗಿದ್ದು, ಈ ನಡುವೆ ಮದುವೆಯಾಗುವಂತೆ ರೆಹಮಾನ್‌ಗೆ ಮಹಿಳೆ ದುಂಬಾಲು ಬಿದ್ದಿದ್ದು, ಇದಕ್ಕೆ ಆತ ಒಪ್ಪಿಲ್ಲ ಎನ್ನಲಾಗಿದೆ. ಇದರಿಂದ ಮನನೊಂದ ಆಕೆ ವಸತಿಗೃಹದ ಮೇಲೇರಿ ಆತ್ಮಹತ್ಯೆ ಮಾಡಿಕೊಳ್ಳುವ ಬೆದರಿಕೆ ಒಡ್ಡಿದ್ದಾಳೆ. ಈ ಹೈಡ್ರಾಮಾದ ನಡುವೆ ಸ್ಥಳೀಯರು ರಸ್ತೆಯಲ್ಲೇ ಜಮಾಯಿಸಿದ್ದರಿಂದ ಸಂಚಾರಕ್ಕೂ ಕೆಲ ಸಮಯ ತೊಡಕುಂಟಾಯಿತು. ಈ ಮಧ್ಯೆ ಅಸ್ಬುಲ್ ರೆಹಮಾನ್ ಕೂಡ ಕೊಠಡಿಯಲ್ಲೇ ಆತ್ಮಹತ್ಯೆಗೆ ಯತ್ನಿಸಿದ್ದಾನೆ. ವಿಷಯ ತಿಳಿದು ಸ್ಥಳಕ್ಕೆ ಪೊಲೀಸರು ಆಗಮಿಸಿ ಆಕೆಯನ್ನು ರಕ್ಷಿಸಿದ್ದಾರೆ. ಇಬ್ಬರನ್ನೂ ಪಟ್ಟಣ ಪೊಲೀಸ್ ಠಾಣೆ ಕರೆದುಕೊಂಡು ಪೊಲೀಸರು ವಿಚಾರಣೆ ನಡೆಸಿದ್ದಾರೆ. ಪೊಲೀಸರೇ ರಾಜಿ ಸಂಧಾನ ಮಾಡಿ ಅಸ್ಬುಲ್ ರೆಹಮಾನ್ ಜತೆಗೆ ಮಹಿಳೆಯನ್ನು ಕಳುಹಿಸಿಕೊಟ್ಟಿದ್ದಾರೆ. ಘಟನೆ ಕುರಿತು ಯಾವುದೇ ಪ್ರಕರಣ ದಾಖಲಾಗಿಲ್ಲ.

ಕಾರ್ಮಿಕರು ಸರ್ಕಾರದ ಸವಲತ್ತುಗಳನ್ನು ಪಡೆಯಲು ಸಂಘಟಿತರಾಗಿ

ಭಾರತ್ ಮಾತಾ ಕಟ್ಟಡ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಸಿದ್ದರಾಜು ಸಲಹೆ

ತಿ.ನರಸೀಪುರ, ಮಾ.17– ಗ್ರಾಮೀಣ ಅಸಂಘಟಿತ ಕೂಲಿ ಕಾರ್ಮಿಕರು ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ಪಡೆಯಲು ಸಂಘಟಿತರಾಗಬೇಕು ಎಂದು ಭಾರತ್ ಮಾತಾ ಕಟ್ಟಡ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಸಿದ್ದರಾಜು ಸಲಹೆ ನೀಡಿದರು.

ಪಟ್ಟಣದ ಪುರಸಭೆ ವ್ಯಾಪ್ತಿಯ ಹೆಳವರಹುಂಡಿಯಲ್ಲಿ ನೂತನ ಭಾರತ್ ಮಾತಾ ಕಟ್ಟಡ ಕಾರ್ಮಿಕರ ಸಂಘದ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರ ಕಾರ್ಮಿಕರಿಗೆ ಹಲವು ಸವಲತ್ತು ನೀಡುತ್ತಿದ್ದು, ಕಟ್ಟಡ ಕಾರ್ಮಿಕರು ಮಕ್ಕಳ ವಿದ್ಯಾಭ್ಯಾಸ, ಆರೋಗ್ಯ, ವಿಮೆ ಇನ್ನಿತರ ಸವಲತ್ತುಗಳನ್ನು ಪಡೆಯಲು ಸಂಘಟಿತರಾಗುವ ಮೂಲಕ ಕಾರ್ಮಿಕ ಇಲಾಖೆ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿರುವಂತೆ ಸಲಹೆ ನೀಡಿದರು.

ತಾಲೂಕಿನಲ್ಲಿ ಕಟ್ಟಡ ಕಾರ್ಮಿಕರ ಸಂಘ 5 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದೆ. ನೋಂದಾಯಿತ ಸಂಘದ ಸದಸ್ಯರಿಗೆ ಹೋರಾಟದ ಮೂಲಕ ಸರ್ಕಾರದಿಂದ ದೊರಕಬೇಕಾದ ಸವಲತ್ತುಗಳನ್ನು ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ ಎಂದರು.

ರಾಜ್ಯ ಸರ್ಕಾರ ಕಟ್ಟಡ ಕಾರ್ಮಿಕರಿಗೆ ಬಸ್‌ಪಾಸ್ ನೀಡುವ ಭರವಸೆ ನೀಡಿ 3 ತಿಂಗಳು ಸೌಲಭ್ಯ ಕಲ್ಪಿಸಿ ನಂತರ ಬಸ್ ಪಾಸ್ ಸೌಲಭ್ಯಕ್ಕೆ ಕತ್ತರಿ ಹಾಕಿದೆ. ಸರ್ಕಾರದ ನಿರ್ಧಾರದಿಂದ ದೂರದ ಊರುಗಳಿಗೆ ತೆರಳುವ ಕಾರ್ಮಿಕರು ಸಂಕಷ್ಟಕ್ಕೆ ಒಳಗಾಗಿದ್ದಾರೆ.



ಹೆಳವರಹುಂಡಿಯಲ್ಲಿ ಭಾರತ್ ಮಾತಾ ಕಟ್ಟಡ ಕಾರ್ಮಿಕರ ಸಂಘದ ಕಚೇರಿ ಉದ್ಘಾಟನಾ ಕಾರ್ಯಕ್ರಮ ನಡೆಯಿತು.

ಹೀಗಾಗಿ ನಮಗೆ ಆಗುತ್ತಿರುವ ಅನ್ಯಾಯಗಳನ್ನು ನಾವೇ ಪ್ರತಿಭಟಿಸುವ ಮೂಲಕ ಪಡೆದುಕೊಳ್ಳಬೇಕಿದೆ. ಅದಕ್ಕಾಗಿ ಕಾರ್ಮಿಕರು ಸಂಘಟಿತರಾಗಬೇಕು ಎಂದರು.

ಕಟ್ಟಡ ಕಾರ್ಮಿಕರ ಕಾರ್ಡುಗಳು ಇಂದು ಉಳ್ಳವರ ಪಾಲಾಗುತ್ತಿವೆ. ಬಡ್ಡಿ ವ್ಯವಹಾರ ಮಾಡುವ, ಜಮೀನು ಹೊಂದಿರುವ, ಮನೆಯಲ್ಲೇ ಕುಳಿತು ನೇಯ್ಗೆ ಮಾಡುವವರು ಕಾರ್ಮಿಕರ ಕಾರ್ಡುಗಳನ್ನು ಮಾಡಿಸಿಕೊಂಡು ನೈಜ ಕಾರ್ಮಿಕರ ಹಕ್ಕುಗಳನ್ನು ಕಸಿದುಕೊಳ್ಳುತ್ತಿದ್ದಾರೆ. ಇದರಿಂದ ನಿಜವಾದ ಕಟ್ಟಡ ಕಾರ್ಮಿಕರಿಗೆ ನಷ್ಟ ಉಂಟಾಗಿದ್ದು, ನಡೆಯುತ್ತಿರುವ ದುರುಪಯೋಗದ ಬಗ್ಗೆ ದೊಡ್ಡ ಮಟ್ಟದ ಪ್ರತಿಭಟನೆ ಮಾಡಿ ಸರ್ಕಾರಕ್ಕೆ ಮನವಿ ಸಲ್ಲಿಸುವ ಕೆಲಸ ಮಾಡುವ ಜವಾಬ್ದಾರಿ ನಮ್ಮದಾಗಿದೆ ಎಂದರು. ಗಾರ್ಮೆಂಟ್ ಲೇಬರ್ ಯೂನಿಯನ್ ಅಧ್ಯಕ್ಷೆ ರುಕ್ಮಿಣಿ ಮಾತನಾಡಿದರು. ಈ ವೇಳೆ ಮುಡುಕನಪುರ ಮಠದ ಷಡಕ್ಷರಿ ದೇಶಿಕೇಂದ್ರ ಸ್ವಾಮೀಜಿ, ಹಂಚ್ಯ ಶ್ರೀನಿವಾಸ್, ಕಟ್ಟಡ ಕಾರ್ಮಿಕರ ಸಂಘದ ತಾಲೂಕು ಅಧ್ಯಕ್ಷ ರಾಜೇಶ್, ಅಶ್ವಥ್ ಮರಿಗೌಡ, ಶಿವಣ್ಣ, ಗೋವಿಂದರಾಜು, ಮಂಜುನಾಥ್, ದೊಡ್ಡರಾಜು, ಡ್ಯಾನ್ಸ್ ಬಸವರಾಜು, ಮಹೇಶ್, ಉಪನ್ಯಾಸಕ ಕುಮಾರಸ್ವಾಮಿ, ಶೃತಿ, ಸುಕನ್ಯಾ, ರೇಖಾ, ಶೋಭಾ, ಜಗದೀಶ್, ಶಂಕರ್, ತಲಕಾಡು ಕುಮಾರ್ ಮತ್ತಿತರರಿದ್ದರು.

> ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಬಾರಿಯ ಬಜೆಟ್‌ನಲ್ಲಿ ಕಟ್ಟಡ ಕಾರ್ಮಿಕರ ಕಲ್ಯಾಣಕ್ಕಾಗಿ ಯಾವುದೇ ಯೋಜನೆ ರೂಪಿಸಿಲ್ಲ. ನಮ್ಮನ್ನು ಕೇವಲ ಓಟ್ ಬ್ಯಾಂಕ್‌ಗಾಗಿ ಮಾತ್ರ ಉಪಯೋಗಿಸಿಕೊಳ್ಳುತ್ತಿದ್ದಾರೆ. ನಮ್ಮ ಕಷ್ಟಗಳನ್ನು ಯಾರ ಬಳಿಯೂ ಹೇಳಿಕೊಳ್ಳಲು ಆಗುತ್ತಿಲ್ಲ. ಕಟ್ಟಡ ಕಾರ್ಮಿಕರ ಮಕ್ಕಳಿಗೆ ಈ ಹಿಂದೆ 5 ಸಾವಿರ ನೀಡುತ್ತಿದ್ದ ಸ್ಕಾಲರ್‌ಶಿಪ್ ಅನ್ನು ಇಂದು 1500 ರೂ.ಗಳಿಗೆ ಇಳಿಸಿದ್ದಾರೆ. ಬಡ ಕಾರ್ಮಿಕರ ಮಕ್ಕಳಿಗೆ ಸ್ಕಾಲರ್‌ಶಿಪ್ ನೀಡಲು ಸರ್ಕಾರದ ಬಳಿ ಹಣ ಇಲ್ಲವೇ. ಸರ್ಕಾರ ನಾವು ಕೇಳದಿದ್ದರೆ ಯಾವುದೇ ಸೌಲಭ್ಯ ನೀಡುವುದಿಲ್ಲ. ಬದಲಿಗೆ ನೀಡುತ್ತಿರುವ ಸೌಲಭ್ಯಗಳನ್ನು ಮೊಟಕುಗೊಳಿಸುತ್ತಾ ಹೋಗುತ್ತದೆ. ಹಾಗಾಗಿ ನಾವೆಲ್ಲರೂ ಸಂಘಟಿತರಾಗಿ ಸರ್ಕಾರವನ್ನು ಪ್ರಶ್ನಿಸುವ ಎದೆಗಾರಿಕೆ ಬೆಳೆಸಿಕೊಳ್ಳಬೇಕು.
> – ಸಿದ್ದರಾಜು, ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ.



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ನಡೆದ ಸಂಸದರಾದ ಶ್ರೀನಿವಾಸ್ ಪ್ರಸಾದ್ ರವರ ಚುನಾವಣಾ ರಾಜಕೀಯ ಸುವರ್ಣ ಮಹೋತ್ಸವದ ಅಭಿನಂದನಾ ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಎಸ್.ಎಂ.ಕೃಷ್ಣರವರೊಟ್ಟಿಗೆ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಬಿ. ಸಿದ್ದರಾಜು ಮತ್ತು ನಗರ ಯುವ ಕಾಂಗ್ರೆಸ್ ನ ಮಾಜಿ ಅಧ್ಯಕ್ಷರಾದ ಅಜಯ್ ರಾಜ್ ಉಪಸ್ಥಿತದ್ದರು. ADVT

ಹಸಿರು ನಮ್ಮ ಉಸಿರು

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಚಾಮರಾಜನಗರ ವನ್ಯಜೀವಿ ಉಪವಿಭಾಗ, ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ.
ಸುಲ್ತಾನ್ ಷರೀಪ್ ವೃತ್ತ, ಸತ್ತಿ ರಸ್ತೆ, ಚಾಮರಾಜನಗರ - 571313
ಕಛೇರಿ: 08226-222059

ಸಂಖ್ಯೆ: ಎ1/ಬಿಯುಡಿ/ಆಹಾರ ಸರಬರಾಜು/ಟೆಂಡರ್/ಸಿಆರ್-01/2024-25 ದಿನಾಂಕ: 15-03-2024

ಟೆಂಡರ್ ಪ್ರಕಟಣೆ

2024-25ನೇ ಸಾಲಿನಲ್ಲಿ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರದ ವ್ಯಾಪ್ತಿಯ ವಿವಿಧ ವಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಳ್ಳಬೇಟೆ ತಡೆ ಶಿಬಿರಗಳಲ್ಲಿನ ನೌಕರರಿಗೆ, ಕ್ಷಿಪ್ರ ಕಾರ್ಯಚರಣೆ ಸಿಬ್ಬಂದಿಗಳಿಗೆ, ಬೆಂಕಿ ಕಾವಲುಗಾರರಿಗೆ ಮತ್ತು ಇಲಾಖಾ ಆನೆ ಶಿಬಿರಗಳಿಗೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡುವ ಸಂಬಂಧ ಇ-ಟೆಂಡರ್ ಪ್ರಕಟಣೆಯನ್ನು https://kppp.karnataka.gov.in ವೆಬ್ ಸೈಟ್ ನಲ್ಲಿ ಹೊರಡಿಸಿ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಸಂಪರ್ಕಿಸಿ ಪಡೆದುಕೊಳ್ಳಬಹುದಾಗಿದೆ.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚಾಮರಾಜನಗರ ವನ್ಯಜೀವಿ ಉಪವಿಭಾಗ, ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ.

ಸಂ:ವಾಸಾಸಂಇ: ಚಾನಗರ:507:2023-24

ಮಾರಾಟಾಧಿಕಾರಿ (ಸರ್ಕಾರ)
ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ಮೈಸೂರು ಉಪವಿಭಾಗ, ಮೈಸೂರು
ಹಾಗೂ ಮಾರಾಟಾಧಿಕಾರಿಗಳು
ಗುತ್ತಿಗೆದಾರರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಮೈಸೂರು
ಮೂಡಾ ಕಚೇರಿ ಆವರಣ, ಜೆ.ಎಲ್.ಬಿ. ರಸ್ತೆ, ಮೈಸೂರು

ದೂರವಾಣಿ : 2424246
ಮೊ.ಸಂ: 9880875242
9663859200

ಸ್ಥಿರ ಸ್ವತ್ತುಗಳ ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಸಮಸ್ತ ಮಹಾಜನಗಳಿಗೂ ತಿಳಿಯಪಡಿಸುವುದೇನೆಂದರೆ, ಗುತ್ತಿಗೆದಾರರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಮೈಸೂರು ಈ ಸಂಘದ ಕೆಳಕಂಡ ಸದಸ್ಯರು ಸದರಿ ಸಂಘದಿಂದ ಸಾಲ ಪಡೆದು, ಸಾಲ ಮರುಪಾವತಿ ಮಾಡದೇ ಸಾಲವು ಸುಸ್ತಿಯಾದ ಕಾರಣ ಕರ್ನಾಟಕ ಸಹಕಾರ ಸಂಘಗಳ ಕಾಯಿದೆಯನ್ವಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೈಸೂರು ಇವರ ನ್ಯಾಯಾಲಯದಲ್ಲಿ ದಾವಾ ಡಿಕ್ರಿ ಪಡೆಯಲಾಗಿದ್ದು ಹಾಗೂ ಅಮಲ್ಜಾರಿ ಅರ್ಜಿಯನ್ನು ನ್ಯಾಯಾಲಯದಿಂದ ಪಡೆಯಲಾಗಿದೆ.
ಅದರಂತೆ ಬಾಕಿ ಇರುವ ಸಾಲದ ಮೊಬಲಗಿನ ವಸೂಲಾತಿಗಾಗಿ ಈ ಕೆಳಕಂಡ ಸುಸ್ತಿದಾರರ ಸ್ಥಿರ ಸ್ವತ್ತಿಗೆ ಸಂಬಂಧಿಸಿದಂತೆ ಹಕ್ಕು ಬಾಧ್ಯತೆಗಳು ಬಹಿರಂಗ ಹರಾಜು ಮಾಡಲಾಗುವುದು. ಸದರಿಯವರಿಗೆ ಸೇರಿದ ಸ್ಥಿರಾಸ್ತಿಗಳ ವಿವರ ಹಾಗೂ ಅವರ ವಿರುದ್ಧ ಪಡೆಯಲಾದ ಅಮಲ್ಜಾರಿ ಸಂಖ್ಯೆ ಮತ್ತು ಅವರಿಂದ ವಸೂಲಾಗಬೇಕಾದ ಮೊಬಲಗಿನ ವಿವರಗಳನ್ನು ಈ ಕೆಳಕಂಡಂತೆ ನಮೂದಿಸಲಾಗಿದೆ.

ಕ್ರಮ ಸಂಖ್ಯೆ	ಬಾಕಿದಾರನ ಹೆಸರು ಮತ್ತು ಜಾಮೀನುದಾರನ ಹೆಸರು	ಸುಸ್ತಿದಾರರ ಸದಸ್ಯರ ವಿಳಾಸ	ಅಮಲ್ಜಾರಿ ಸಂಖ್ಯೆ	ಹರಾಜಿಗೆ ಒಳಪಡಿಸಿರುವ ಸ್ಥಿರಾಸ್ತಿಯ ವಿಳಾಸ ಮತ್ತು ಚೆಕ್ಕುಬಂದಿ	ಸಂಘಕ್ಕೆ ಬರಬೇಕಾದ ಮೊಬಲಗು	ಹರಾಜು ದಿನಾಂಕ ಮತ್ತು ಸಮಯ	ಹರಾಜು ನಡೆಯುವ ಸ್ಥಳ
1.	ಶ್ರೀ ಎಂ. ಪ್ರತಾಪ್ ಬಿನ್. ಲೇಟ್ ಪಿ. ವಿ.ಮಹದೇವಯ್ಯ ಜಾಮೀನುದಾರರು 1. ಶ್ರೀಮತಿ ಪಿ. ಹೇಮಲತಾ ಕೋ.ಎಂ. ಪ್ರತಾಪ್ 2) ಶ್ರೀ ವೈ.ಟಿ. ಮಂಜುನಾಥ್ ಬಿನ್ ಲೇಟ್ ವೈ ಎನ್. ತಮ್ಮಯ್ಯ	ನಂ. 402, ಹೈಟೆನ್ಷನ್ ಡಬಲ್ ರಸ್ತೆ 3ನೇ ಫೇಸ್ 4ನೇ ಹಂತ ವಿಜಯ ನಗರ ಮೈಸೂರು	ಡಿಆರ್‌ಎಂ/ ದಾವಾ/ಸಿ7/70/ 07/2021-2022	ಮೈಸೂರು ನಗರ, ದೇವರಾಜ ಮೊಹಲ್ಲಾ, ವಿನಾಯಕನಗರ, 7ನೇ ಅಡ್ಡರಸ್ತೆ, 6ನೇ ಮುಖ್ಯರಸ್ತೆಯಲ್ಲಿರುವ 5/1ರ ಮನೆ ಇದರ ಚೌತರ್ಫ ಪೂರ್ವಕ್ಕೆ - ನೆಲ ಅಂತಸ್ತಿನಲ್ಲಿರುವ ಪೂರ್ವದ ಕಡೆಯ ನನ್ನ ಬಾಬ್ತು ಸ್ವತ್ತು. ಪಶ್ಚಿಮಕ್ಕೆ-ಗೋವಿಂದಪ್ಪನವರ ಸ್ವತ್ತು. ಉತ್ತರಕ್ಕೆ-ರಸ್ತೆ, ದಕ್ಷಿಣಕ್ಕೆ - ಶ್ರೀಕಂಠಶಾಸ್ತ್ರೀ ರವರ ಸ್ವತ್ತು. ಈ ಮಧ್ಯೆ ಇರುವ ಪೂ.ಪ. 26 ಅಡಿಗಳು ದಕ್ಷಿಣೋತ್ತರ 39 1/4 ಅಡಿ ಪ್ಲಿಂತ್ ಏರಿಯಾ 672.65 ಚ.ಅ. ಮತ್ತು ನಿವೇಶನದ ವಿಸ್ತೀರ್ಣ 1091.81 ಅಡಿ.	ರೂ. 37,20,671/- +ಬಡ್ಡಿ+ ಇತರೆ ಖರ್ಚು ಪ್ರತ್ಯೇಕ	ದಿನಾಂಕ: 26-03-2024 ರ ಮಂಗಳವಾರ ಮಧ್ಯಾಹ್ನ 12.00 ಗಂಟೆಗೆ	ಮೈಸೂರು ನಗರ, ದೇವರಾಜ ಮೊಹಲ್ಲಾ, ವಿನಾಯಕ ನಗರ 7ನೇ ಅಡ್ಡರಸ್ತೆ, 6ನೇ ಮುಖ್ಯರಸ್ತೆ, ಮನೆ ನಂ.5/1ರಲ್ಲಿ

ಷರತ್ತುಗಳು

1. ಮೇಲೆ ತಿಳಿಸಲ್ಪಟ್ಟಿರುವ ಕಟ್ಟಡ (ಸ್ಥಿರಾಸ್ಥಿಯನ್ನು) ಸಾರ್ವಜನಿಕ ಹರಾಜು ಮಾಡಲಾಗುವುದು.
2. ಹರಾಜಿನಲ್ಲಿ ಭಾಗವಹಿಸುವವರು ಹರಾಜು ನಡೆಯುವುದಕ್ಕೆ 1 ಗಂಟೆ ಮುಂಚಿತವಾಗಿ ಠೇವಣಿ ರೂ. 20,000/-ಗಳನ್ನು ಸಂಘಕ್ಕೆ ಪಾವತಿಸಿ ಹರಾಜಿನಲ್ಲಿ ಭಾಗವಹಿಸಬಹುದು.
3. ಹರಾಜಿನಲ್ಲಿ ಭಾಗವಹಿಸಿ, ಹರಾಜಿನ ಅಖೈರು ಮೊಬಲಗಿನ ಪೈಕಿ ಕೂಡಲೇ ಆ ಹಣದ ಶೇಕಡ 25% ರಷ್ಟು ಮೊಬಲಗನ್ನು ಹರಾಜಿನ ಸಮಯದಲ್ಲಿ ಸ್ಥಳದಲ್ಲೇ ಪಾವತಿ ಮಾಡಿ ರಶೀದಿ ಪಡೆಯುವುದು. ಉಳಿಕೆ ಹಣವನ್ನು ಹರಾಜು ದಿನಾಂಕದಿಂದ 30 ದಿನಗಳೊಳಗಾಗಿ ಸಂಘಕ್ಕೆ ಪಾವತಿಸತಕ್ಕದ್ದು, ತಪ್ಪಿದಲ್ಲಿ ಬಿಡ್‌ದಾರರು ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
4. ಆಸಕ್ತಿ ಹೊಂದಿದ ಬಿಡ್‌ದಾರರು ಕಟ್ಟಡದ (ಸ್ಥಿರಾಸ್ಥಿಯನ್ನು) ಅದಷ್ಟು ಮುಂಚಿತವಾಗಿ ಪರಿಶೀಲನೆ ಮಾಡಿಕೊಳ್ಳಬಹುದು.
5. ಮೇಲೆ ಹೇಳಿದ ಮೊಬಲಗನ್ನು ಕಟ್ಟಿದಿದ್ದರೆ ಪ್ರಥಮ ದರಖಾಸ್ತುದಾರನ ಖರ್ಚು ಅಥವಾ ನಷ್ಟ ಬಾಧ್ಯತೆ ಮೇಲೆ ಮಾರಾಟದ ಹೊಸ ಇಸ್ತಿ ಹಾರವನ್ನು ಪ್ರಕಟಿಸಿದ ನಂತರ ಕಟ್ಟಡವು ಮಾರಾಟವಾದಿತು.
6. ಹರಾಜು ಆದ 30 ದಿವಸಗಳ ನಂತರ ಹರಾಜನ್ನು ಮಾರಾಟಾಧಿಕಾರಿಗಳ ಶಿಫಾರಸ್ಸಿನ ಮೇರೆಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೈಸೂರು ಇವರು ಸ್ಥಿರೀಕರಿಸುವವರು ಸ್ಥಿರೀಕರಿಸಿದ ನಂತರವೇ ವಿಲೇವಾರಿ ಕ್ರಮವಿಡಲಾಗುವುದು.
7. ಸಾರ್ವಜನಿಕರು ಬಿಡ್ ಮಾಡದಿದ್ದಲ್ಲಿ ಸಹಕಾರ ಸಂಘಗಳ ಕಾಯಿದೆ 101 (ಸಿ) ಪ್ರಕಾರ ಸಂಘಕ್ಕೆ ಸ್ಥಿರಾಸ್ತಿಯನ್ನು ಕೊಳ್ಳಲು ಅವಕಾಶ ಮಾಡಿಕೊಟ್ಟಿರುತ್ತದೆ.
8. ಬಾಕಿದಾರರೇ ಆಗಲಿ ಅಥವಾ ಅವರ ಅನುಮತಿ ಪಡೆದ ಅಧಿಕೃತ ವ್ಯಕ್ತಿಯಾಗಲಿ ಹರಾಜು ವೇಳೆಗಿಂತ ಮುಂಚೆ ಅಮಲ್ಜಾರಿ ಮೊಬಲಗನ್ನು ಕಟ್ಟಿದಲ್ಲಿ ಹರಾಜನ್ನು ರದ್ದುಗೊಳಿಸಲಾಗುತ್ತದೆ.
9. ಹರಾಜಿನ ಅಖೈರು ಬಿಡ್ಡನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಮಾರಾಟಾಧಿಕಾರಿಗಳಿಗೆ ಸೇರಿರುತ್ತದೆ.
10. ಹರಾಜಿನ ದಿನಾಂಕದಂದು ಆಡಳಿತಾತ್ಮಕ ಕಾರಣಗಳಿಂದ ಹರಾಜು ನಡೆಯದೇ ಇದ್ದ ಪಕ್ಷದಲ್ಲಿ ಯಾವುದೇ ಪ್ರಕಟಣೆ ನೀಡದೇ, ಮುಂದಿನ 7 ದಿನಕ್ಕೆ ಕ್ರಮವಾಗಿ ಮಧ್ಯಾಹ್ನ 12.00 ಗಂಟೆಗೆ ಸದರಿ ಸ್ಥಳದಲ್ಲೇ ಮತ್ತೆ ಹರಾಜನ್ನು ನಡೆಸಲಾಗುವುದು.
11. ಹರಾಜಿಗೆ ಒಳಪಡಿಸಿರುವ ಸ್ಥಿರಾಸ್ಥಿಗಳ ವಿವರಗಳ ಬಗ್ಗೆ ಅಥವಾ ಇತರೆ ಸಂಬಂಧಪಟ್ಟ ಮಾಹಿತಿ ಬಗ್ಗೆ ಸೊಸೈಟಿ ಮುಖ್ಯ ಕಾರ್ಯನಿರ್ವಹಣಾಧಿಕರಿಯವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.
12. ಹರಾಜಿನ ಸಂಬಂಧ ಯಾವುದೇ ತಕರಾರು ಉಂಟಾಗಿದ್ದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಉಪ ವಿಭಾಗ, ಮೈಸೂರು ಇವರ ನ್ಯಾಯಾಲಯದ ಕಾರ್ಯವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಸಹಿ/- ಸಹಕಾರ ಸಂಘಗಳ ಸಹಾಯಕ ನಿಬಂಧಕರು
ಮೈಸೂರು ಉಪವಿಭಾಗ, ಮೈಸೂರು, ಈ ನ್ಯಾಯಾಲಯದ ಆದೇಶದ ಮೇರೆಗೆ
ಶ್ರೀಮತಿ ಮನುಮಂಜುಳ ಬಿ. ಹೆಚ್. ಮಾರಾಟಾಧಿಕಾರಿ (ಸರ್ಕಾರ)
ಗುತ್ತಿಗೆದಾರರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಮಾರಾಟಾಧಿಕಾರಿಗಳು, ಮೈಸೂರು

ಸ್ಥಳ: ಮೈಸೂರು
ದಿನಾಂಕ: 11-03-2024

